ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸೆಪ್ಟಂಬರ್ 2011
ಬೆಲೆ ರೂ. 1.



ವಕ್ರತುಂಡ ಮಹಾಕಾಯ ಸೂರ್ಯ ಕೋಟಿ ಸಮಪ್ರಭ।
ನಿರ್ವಿಘ್ನಂ ಕುರು ಮೇ ದೇವ ಸರ್ವ ಕಾರ್ಯೇಷು ಸರ್ವದಾ॥

# ದೆಹಲಿ ಕರ್ನಾಟಕ ಸಂಘದಲ್ಲಿ ಸಂಭ್ರಮದ ಸ್ವಾತಂತ್ರ್ಯ ದಿನಾಚರಣೆ

ದೆಹಲಿ ಕರ್ನಾಟಕ ಸಂಘದಲ್ಲಿ ಆಗಸ್ಟ್ 15ರಂದು ಬೆಳಿಗ್ಗೆ 65ನೇ ವರ್ಷದ "ಸ್ವಾತಂತ್ರ್ಯೋತ್ಸವ ದಿನಾಚರಣೆ"ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.



ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರು ಧ್ವಜಾರೋಹಣೆಯನ್ನು ಮಾಡಿದ ನಂತರ, ರಾಷ್ಟ್ರಗೀತೆಯನ್ನು ಎಲ್ಲರೂ ಹೇಳಿ ಭಾರತಾಂಬೆಗೆ ಜಯಕಾರ ಹೇಳಿದರು.

ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡುತ್ತಾ 'ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣೆಗಾಗಿ ಕರ್ನಾಟಕದ 19 ಜಿಲ್ಲೆಗಳನ್ನು 21 ದಿನಗಳಲ್ಲಿ ಸಂಚರಿಸಿದ ದಾಖಲೆಗಳು ಲಭ್ಯವಾಗಿವೆ. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಕೊಡುಗೆ ಅಜರಾಮರ" ಎಂದರು. ಸ್ವಾತಂತ್ರ ಸಂಗ್ರಾಮದಲ್ಲಿ ತಮ್ಮ ಅಜ್ಜಿಯವರೂ ಕೂಡ ಪಾಲ್ಗೊಂಡು ಜೈಲು ಶಿಕ್ಷೆ ಅನುಭವಿಸಿದ ಘಟನೆಗಳನ್ನು ಸ್ಮರಿಸುತ್ತಾ ಭಾರತ ದೇಶ ಅತ್ಯುತ್ಕೃಷ್ಟ ದೇಶವಾಗಲಿ ಎಂದು ಬಯಸಿದರು.

ಇದೇ ಸಂದರ್ಭದಲ್ಲಿ ಸಂಘಕ್ಕೆ ಕು. ವಿತಾಶಾ ರಿಯಾ ಅವರು ಭೇಟಿ ನೀಡಿದ್ದರು. ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜರವರು ಕು. ವಿತಾಶಾ ರಿಯಾ (ಕಾವ್ಯನಾಮ : ಮುದ್ದು ತೀರ್ಥಹಳ್ಳಿ) ಯವರು ಚಿಕ್ಕ ವಯಸ್ಸಿನಲ್ಲಿಯೇ (ಏಳನೇ ತರಗತಿಯಲ್ಲಿ ಕಲಿಯುವ ವಿದ್ಯಾರ್ಥಿನಿ) ಮೂರು ಪುಸ್ತಕಗಳನ್ನು ಬರೆದು ಐದು ಪ್ರಶಸ್ತಿಗಳನ್ನು ಪಡೆದ ಹೆಮ್ಮೆಯ ಕರ್ನಾಟಕದ ಪುತ್ರಿ ಎಂದು ಪರಿಚಯಿಸಿ, ಅಧ್ಯಕ್ಷರಿಂದ ಕರ್ನಾಟಕ ಸಂಘದ ಸ್ಮರಣಿಕೆ ಹಾಗೂ ಪುಷ್ಪಗುಚ್ಛವನ್ನು ನೀಡಿ ಸತ್ಕರಿಸಿದರು.

ಕು. ವಿತಾಶಾ ರಿಯಾ ಅವರು ದೆಹಲಿ ಕರ್ನಾಟಕ ಸಂಘದವರು ತನ್ನನ್ನು ಸತ್ಕರಿಸಿದ್ದಕ್ಕೆ ಅಭಿನಂದಿಸುತ್ತಾ, ದೆಹಲಿಯಲ್ಲಿ ಕನ್ನಡದ ಕಂಪು ಉಳಿಸಿದ ಈ ಸಂಘ ನೋಡಿ ತನಗೆ ಬಹಳ ಖುಷಿ ಆಗಿದೆ. ಇಲ್ಲಿಯೂ ಕನ್ನಡದವರು ಇದ್ದಾರೆ ಎಂದು ಆತ್ಮೀಯತೆ ಭಾವನೆ ಬಂತು ಎಂದು ಹೇಳಿದರು. ಅನೇಕ ಭಾಷೆಗಳು ಅಳಿವಿನ ಸ್ಥಾನದಲ್ಲಿವೆ. ಕನ್ನಡ ಭಾಷೆ 28ನೇ ಅಳಿವಿನ ಸ್ಥಾನದಲ್ಲಿದೆ. ಮಾತೃಭಾಷೆಯನ್ನು ಉಳಿಸುವ ಕೆಲಸ ಆಗಬೇಕಾಗಿದೆ. ಕನ್ನಡ ಭಾಷೆ ಉಳಿವಿಗಾಗಿ ಹೋರಾಡಬೇಕು. ಕನ್ನಡದ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದ ಮಾಡುವ ಕೆಲಸ ಆಗಬೇಕು. ಈಗಿನ ಕಾಲದಲ್ಲಿ ಇಂಗ್ಲಿಷ್ ಭಾಷೆ ಬಗ್ಗೆ ಒಲವು ಹೆಚ್ಚು ಮಾಡುವಂತಹ ಪರಿಸರದಲ್ಲಿ ಕನ್ನಡ ಮಾಧ್ಯಮ ಶಾಲೆ ಕಡೆಗೆ ಒಲವು ಮೂಡಿಸುವ ಪ್ರಯತ್ನ ಆಗಬೇಕು ಎಂದು ಹೇಳಿದರು.

ಸಂಘದ ಪದಾಧಿಕಾರಿಗಳು, ಸಂಘದ ಸದಸ್ಯರು, ಸಿಬ್ಬಂದಿ ವರ್ಗದವರೆಲ್ಲರೂ ಉಪಸ್ಥಿತರಿದ್ದು ಕಾರ್ಯಕ್ರಮ ಸುಂದರವಾಗಿ ನೆರವೇರುವಂತೆ ಮಾಡಿದರು.

❑ **ಡಾ. ಸುಮಂಗಲಾದೇವಿ**

# ವಿಘ್ನ ವಿನಾಶಕ ವಿನಾಯಕ




ಪ್ರತಿ ವರ್ಷವೂ ಆಚರಿಸುವಂತೆ ಸೆಪ್ಟೆಂಬರ್ 1 ರಂದು ದೆಹಲಿ ಕರ್ನಾಟಕ ಸಂಘ ಗಣೇಶ ಚತುರ್ಥಿಯನ್ನು ಗಣೇಶ ಮಿತ್ರ ಮಂಡಳಿ ಸಹಯೋಗದೊಂದಿಗೆ ಆಚರಿಸಿತು. ಸಂಘದ ಆವರಣ ಬಗೆ ಬಗೆಯ ಹೂವು, ತೋರಣದ ಅಲಂಕಾರದಿಂದ ಗಣಪನ ಉತ್ಸವಕ್ಕೆ ಅಣಿಯಾಗಿತ್ತು. ಬೆಳಗಿನ ಒಂಭತ್ತೂವರೆಗೆ ಅರ್ಚಕರು ಮಂತ್ರ, ಪುಷ್ಪ, ಗರಿಕೆ, ಗಂಧ, ವಸ್ತ್ರ, ಹಣ್ಣು-ಹಂಪಲು, ಪಂಚಾಮೃತ-ಪ್ರಸಾದಾದಿಗಳಿಂದ ವಿಧಿವತ್ತಾಗಿ ವಿಘ್ನ ವಿನಾಶಕ ವಿನಾಯಕನ ಪೂಜೆಯನ್ನು ನೆರವೇರಿಸಿದರು. ಗಣಾನಾಂ ಪತಿ. ಅಂದರೆ ನಮ್ಮ ಇಂದ್ರಿಯಗಳ, ಮನಸ್ಸಿನ, ಬುದ್ಧಿಯ ಒಡೆಯ ಗಣಪತಿಯನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸಲಾಯಿತು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಕಾರ್ಯದರ್ಶಿ ಸಿ.ಎಂ. ನಾಗರಾಜ, ಟಿ.ಎಂ. ಮೈಲಾರಪ್ಪ, ರೇಣುಕಾ ನಿಡಗುಂದಿ, ಬಿ. ನಾರಾಯಣ, ದೆಹಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ-ಲಿಂಗರಾಜು, ಗಣೇಶ ಮಿತ್ರ ಮಂಡಳಿಯ ಸದಸ್ಯರುಗಳಾದ ಶರೀಫ್, ಶಶಿಕಾಂತ್ ಪಾಟೀಲ್, ಸುಧೀರ್ ಫಡ್ನೀಸ್, ಬಸವರಾಜ್ ಎಸ್. ಮೇಟಿ, ಆರ್. ರೇಣುಕುಮಾರ್, ಕರ್ನಾಟಕ ಬ್ಯಾಂಕ್ ಹಾಗೂ ಕರ್ನಾಟಕ ಫುಡ್ ಸೆಂಟರ್ ಸಿಬ್ಬಂದಿ ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿಗಳಾದ ಬೈಕೆರೆ ನಾಗೇಶ್ ಅವರು ಆಗಮಿಸಿ, ಸಿದ್ಧಿದಾಯಕ, ಬುದ್ಧಿ ಪ್ರದಾಯಕ ಶ್ರೀ ಗಣೇಶನ ಪೂಜೆಯೊಂದಿಗೆ ಕನ್ನಡ ಕಲಿಕೆಯ ಪುಸ್ತಕಗಳನ್ನು ಸಾಂಕೇತಿಕವಾಗಿ ಬಿಡುಗಡೆ ಮಾಡಿ "ಕನ್ನಡ ಕಲಿಕೆ" ಯನ್ನು ಉದ್ಘಾಟಿಸಿದರು. ಗಣೇಶ ಹಬ್ಬದ ಶುಭ ಸಂದರ್ಭದಲ್ಲಿ ಸಂಘದಲ್ಲಿ ಕನ್ನಡ ಕಲಿಕೆಯನ್ನು ಪ್ರಾರಂಭಿಸಿದ್ದು ಒಂದು ಉತ್ತಮ ಬೆಳವಣಿಗೆ. ಕನ್ನಡ ಕಲಿಕೆಯನ್ನು ಖಂಡಿತ ನಡೆಸಿಕೊಂಡು ಹೋಗಿ, ಇದಕ್ಕಾಗಿ ತಮ್ಮ ಸಂಪೂರ್ಣ ಸಹಕಾರ ಇರುತ್ತದೆ. ಆ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಅವರೊಂದಿಗೆ ಚರ್ಚಿಸುವುದಾಗಿ ನಾಗೇಶ್ ಅವರು ಭರವಸೆ ನೀಡಿದರು. ಮಂಗಳಾರತಿ ಮತ್ತು ಪ್ರಸಾದ ವಿತರಣೆಯೊಂದಿಗೆ ಬೆಳಗಿನ ಪೂಜಾ ಕಾರ್ಯ ಸಂಪನ್ನಗೊಂಡಿತು. ಅನೇಕ ಕನ್ನಡಿಗರು ಪಾಲ್ಗೊಂಡರು.

ಸಾಯಂಕಾಲದ ಪೂಜೆ, ಆರತಿ ಮತ್ತು ಪ್ರಸಾದ ವಿತರಣೆಯೊಂದಿಗೆ ಸಾಂಗೋಪಾಂಗವಾಗಿ ರಾತ್ರಿ ಗಣಪನನ್ನು ವಿಸರ್ಜಿಸಲಾಯಿತು.



ಅಭಿಮತ
ಸಂಪುಟ 21 ಸಂಚಿಕೆ 12
ಸೆಪ್ಟಂಬರ್ 2011, ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ
ಮಂಜುನಾಥ ಕಾಮತ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ಮಹಾತ್ಮ ಗಾಂಧೀಜಿ 'ಸತ್ಯಾಗ್ರಹ' ಎಂಬ ಮಹಾ ಅಸ್ತ್ರವನ್ನು ಶೋಧಿಸಿ ಜಗತ್ತಿಗೆ ಅಪೂರ್ವ ಕಾಣಿಕೆ ನೀಡಿದರು. ಈ ಕಾಣಿಕೆಯ ಹಿಂದಣ ಕಣ್ಣೆ ಅಂದರೆ ದರ್ಶನಕ್ಕೆ ನೆರವಾದದ್ದು ಗಾಂಧೀಜಿಯ ವೈಷ್ಣವ ಧರ್ಮದ ಹಿನ್ನೆಲೆ ಹಾಗೂ ಅವರು ಆಸ್ಥೆಯಿಂದ ಅಧ್ಯಯನಿಸಿದ ಜೈನ ಧರ್ಮ. 'ಅಹಿಂಸೆ' ಎಂಬ ಭದ್ರ ಅಡಿಪಾಯದ ಮೇಲೆ ಆಂದೋಲನ ಎಂಬ ಭವ್ಯ ಸೌಧವನ್ನು ಕಟ್ಟಬಹುದು, ತನ್ಮೂಲಕ ಕೋಟ್ಯಂತರ ಹೃದಯಗಳನ್ನು ಗೆಲ್ಲಬಹುದು ಎಂದು ಅವರಿಗೆ ಮನದಟ್ಟಾಗಿತ್ತು. ಗಾಂಧಿಯವರ ವ್ಯಕ್ತಿತ್ವ ವಿಕಸನಕ್ಕೆ, ಅಹಿಂಸೆಯ ತಳಹದಿಯ ಸತ್ಯಾಗ್ರಹದ ಅನುಷ್ಠಾನಕ್ಕೆ ಆ ಕಾಲದಲ್ಲಿ ಇದ್ದ ಧಾರ್ಮಿಕ ಶ್ರದ್ಧೆ, ಧಾರ್ಮಿಕ ವಾತಾವರಣ, ಸತ್ಸಂಗಗಳಲ್ಲಿನ ಪಾಲ್ಗೊಳ್ಳುವಿಕೆ ಬಹುತೇಕ ಕಾರಣ. ಆದರೆ ಇಂದಿನ ಯುವ ಜನಾಂಗ ಬದಲಾದ ಪರಿಸರದಲ್ಲಿ ವಿಭಿನ್ನ ಸನ್ನಿವೇಶಗಳಲ್ಲಿ ತಮ್ಮ ಅಂತರ್‌ದರ್ಶನವನ್ನು ಕಂಡುಕೊಳ್ಳಬೇಕಿದೆ. ಏಕೆಂದರೆ ಧರ್ಮ ಅನ್ನುವುದು ಕುಟುಂಬದ ನಾಲ್ಕು ಗೋಡೆಗಳಿಗೆ ಸೀಮಿತಗೊಂಡಿದೆ ಅಥವ ಟಿ.ವಿ. ಚಾನೆಲ್‌ಗಳ ಪ್ರಚಾರದ ವಸ್ತುವಾಗಿದೆ. ಇನ್ನು ಯುವ ಜನ ಕಲಿಯುವ ಕ್ಲಾಸ್ ರೂಂಗಳಲ್ಲಿ ಧರ್ಮ ಕುರಿತಂತೆ ವಿಧಿಬದ್ಧವಾದ ತರ್ಕ ವಿತರ್ಕ ನಡೆಯಲು ಸಾಧ್ಯವೇ ಇಲ್ಲದಂತಾಗಿದೆ. ಹೀಗಾಗಿ ಧರ್ಮವನ್ನು ಆಳವಾಗಿ ಅಧ್ಯಯನಿಸಿದ ವಿದ್ವಾಂಸರ ಜತೆಗಾಗಲಿ ಅಥವ ಸಂತ ಶ್ರೇಷ್ಠರ ಜತೆಗಾಗಲಿ ಪರಸ್ಪರ ಮಾತುಕತೆ, ಮನನ, ಮಂಥನ ಅಸಾಧ್ಯ. ತನ್ನೊಳಗೇ ತಾನು ಗುರುವನ್ನು ಕಂಡುಕೊಂಡು ಸಮರ್ಥ ಹೆಜ್ಜೆಗಳನ್ನಿಡಬೇಕಾದ ಅನಿವಾರ್ಯತೆ ಈಗ ಎದುರಾಗಿದೆ. ಆಧ್ಯಾತ್ಮಿಕ ಧೀ ಶಕ್ತಿಯಿಂದ ಕಂಡುಕೊಂಡ ಅಹಿಂಸೆ ಹಾಗೂ ಸತ್ಯಾಗ್ರಹಗಳಂತಹ ಮೋಹಕಾಸ್ತ್ರಗಳು ನಮಗೆ ಸ್ವಾತಂತ್ರ್ಯ ತಂದುಕೊಟ್ಟವು. ಇನ್ನು ಮುಂದೆಯೂ ಈ ಅಸ್ತ್ರಗಳೇ ನಮ್ಮೆದುರಿನ ರಾಕ್ಷಸಾಕಾರದ ಬೃಹತ್ ಸಮಸ್ಯೆಗಳನ್ನು ಪರಿಹರಿಸಬಲ್ಲವು. ಅದರಿಂದ ನಮ್ಮ ತಾಂತ್ರಿಕ ತಿಳುವಳಿಕೆ ಎಷ್ಟೇ ಉನ್ನತ ಮಟ್ಟದ್ದಾಗಿದ್ದರೂ ಆಧ್ಯಾತ್ಮದ ಸಾಧನೆ ಅತ್ಯವಶ್ಯ ಎಂಬುದು ಖಚಿತವಾಗುತ್ತದೆ. ಉಪವಾಸ, ಸಹನೆ, ಪ್ರೀತಿಗಳನ್ನು ಸಂಪಾದಿಸುವ ಹಾದಿಯಲ್ಲಿ ಎದುರಾಗುವ ಬಹಿರ್ ಶತ್ರುಗಳಾದ ಹಿಂಸೆ, ಕೋಪ, ದ್ವೇಷಗಳನ್ನು ನಿಭಾಯಿಸುವುದು ನಿಜಕ್ಕೂ ಈ ದೇಶದ ಪ್ರಜೆಗಳಿಗೆ ಮಾತ್ರ ಸಾಧ್ಯ. ಏಕೆಂದರೆ ನಮ್ಮ ದಮನಿ-ದಮನಿಗಳಲ್ಲಿ ಹರಿಯುತ್ತಿರುವುದು ಆಧ್ಯಾತ್ಮದ ನೆತ್ತರು. ಇದು ಸಾಬೀತಾಗಿದ್ದು ಆಗಸ್ಟ್ 16ರಿಂದ ಆಗಸ್ಟ್ 28ರವರೆಗೆ ಅಣ್ಣಾ ಹಜಾರೆಯವರ ರಕ್ತರಹಿತ ಕ್ರಾಂತಿಯಲ್ಲಿ. ಭ್ರಷ್ಟಾಚಾರದ ವಿರುದ್ಧ ಇಡೀ ಪಾರ್ಲಿಮೆಂಟಿನ ಗಮನ ಸೆಳೆದು ಒಂದು ಸಶಕ್ತ ಕಾನೂನು ತರುವ ಹಾಗೂ ಭ್ರಷ್ಟಾಚಾರ ನಿರ್ಮೂಲನೆಗೆ ಒಂದು ಸ್ವಾಯತ್ತ ಸಂಸ್ಥೆಯನ್ನು ಪರಿಸ್ಥಾಪಿಸುವ ದಿಶೆಯಲ್ಲಿ ಕೊಂಚ ಯಶಸ್ಸು ಗಳಿಸಿದ್ದು ನಿಜಕ್ಕೂ ಐತಿಹಾಸಿಕ. ಅಣ್ಣಾ ಹಜಾರೆಯವರನ್ನನುಸರಿಸಿ ಈ ದೇಶದ ಬಹುತೇಕ ಜನ ವಯಸ್ಸಿನ ಅಂತರವಿಲ್ಲದೆ ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡಿದ್ದು ಮತ್ತೊಂದು ದಾಖಲೆ. ಬಹುಶಃ ಭಾರತಕ್ಕೆ ಇರುವ ಈ ಅಪೂರ್ವ ಶಕ್ತಿ ಜಗತ್ತಿನ ಬೇರೆ ಎಲ್ಲೂ ಇಲ್ಲ. ಹೀಗಾಗಿ ನಮ್ಮ ಶಿಕ್ಷಣದಲ್ಲಿ ಆಧ್ಯಾತ್ಮವೂ ಅವಿಭಾಜ್ಯ ಅಂಗವಾದರೆ ಮುಂದಿನ ಜನಾಂಗ ಮತ್ತಷ್ಟು ಸದೃಢವಾಗುತ್ತದೆ, ಸಂಪನ್ನವಾಗುತ್ತದೆ ಎಂಬುದು ನನ್ನ ಅನಿಸಿಕೆ.

ಅಣ್ಣಾ ಹಜಾರೆಯವರ ಚಳುವಳಿಯ ಸಂದರ್ಭದಲ್ಲಿ ಅನೇಕ ಶಕ್ತಿಯುತ ಸಾಧನಗಳು ಮತ್ತು ಹೊಸ ಆಯಾಮದ ಮೌಲ್ಯಗಳನ್ನು ಒಳಗೊಂಡು ಯುವಜನರನ್ನು ಆಕರ್ಷಿಸಿದವು. ಗಾಂಧಿ ಟೋಪಿ ಒಂದು ನಿದರ್ಶನ. ಸ್ವಾತಂತ್ರ್ಯಾನಂತರ ಕೇವಲ ರಾಜಕಾರಣಿಗಳ ಆಸ್ತಿಯಾಗಿದ್ದ ಈ ಟೋಪಿ ಹಾಸ್ಯದ ವಸ್ತುವಾಗಿತ್ತು. ಗಾಂಧಿ ಟೋಪಿಗಿದ್ದ ಮೌಲ್ಯ ಬಹಳಷ್ಟು ನಶಿಸಿ ಹೋಗಿತ್ತು. ಅಣ್ಣಾ ಚಳುವಳಿಯಲ್ಲಿ ಈ ಟೋಪಿಗೆ ಮತ್ತೆ ಘನತೆ ಬಂದಿದೆ. 'ಮೈ ಅಣ್ಣಾ ಹೂಂ', 'I am Anna' ಎಂಬ ಬರಹಗಳನ್ನು ಹೊತ್ತ ಖಾದಿ ಟೋಪಿಗಳು ಎಳೆ ಮಕ್ಕಳು, ಹುಡುಗ-ಹುಡುಗಿಯರು, ಯುವಕ-ಯುವತಿಯರು, ವೃದ್ಧರು ಹೀಗೆ ಸಕಲರ ಶಿರಗಳ ಮೇಲೆ ರಾರಾಜಿಸಿದವು. ಕೇವಲ ಸ್ವತಂತ್ರ ದಿನ, ಗಣರಾಜ್ಯ ದಿನಗಳಂದು ಹಾರಾಡುತ್ತಿದ್ದ ತ್ರಿವರ್ಣ ಧ್ವಜಗಳು ಪ್ರತಿಯೊಬ್ಬರ ಹೆಮ್ಮೆಯನ್ನು ಉದ್ದೀಪಿಸುವ ರೀತಿ ಲಕ್ಷ ಲಕ್ಷ ಸಂಖ್ಯೆಯಲ್ಲಿ ಕಂಡು ಬಂದವು. ಮುಂಬೈನ ಮೆರೈನ್ ಡ್ರೈವ್, ಬೆಂಗಳೂರಿನ ಫ್ರೀಡಂ ಪಾರ್ಕ್ ಹಾಗೂ ದೆಹಲಿಯ ರಾಮಲೀಲಾ ಮೈದಾನಗಳಂತೂ ದೇಶಪ್ರೇಮದ ಸಂಭ್ರಮದಲ್ಲಿ ಕಂಗೊಳಿಸಿದವು. ದೇಶದೆಲ್ಲೆಡೆ, ಹಳ್ಳಿ ಹಳ್ಳಿಗಳಲ್ಲೂ ಅಣ್ಣಾ ಚಳುವಳಿ ಅನುರಣನಗೊಂಡಿತು. ಅಷ್ಟೇ ಅಲ್ಲ, ಯುವ ಜನಾಂಗದ ಪಾಲಿಗಂತೂ ತಮಾಷೆಯ ವಸ್ತುವಾಗಿದ್ದ ಗಾಂಧಿ (ಗಾಂಧಿ ಕ್ಲಾಸು ಇತ್ಯಾದಿ) ಅಲ್ಲಿ ನೆರೆದಿದ್ದ ಜನಕ್ಕೆ ಸರ್ವಶಕ್ತ ಭಗವಂತ ಅನ್ನಿಸಿದರು. ನಿಜ ಹೇಳಬೇಕೆಂದರೆ ಗಾಂಧಿ ಯುವಜನರ ಹೃದಯದಲ್ಲಿ ಆಸೀನರಾದರು! ಅಹಿಂಸೆ, ತ್ಯಾಗ ಇತ್ಯಾದಿ ಮಾತುಗಳನ್ನು ಢೋಂಗಿ ಸ್ವಾಮಿಗಳಿಂದ ಕೇಳಿ ಬೇಸತ್ತಿದ್ದ ಜನರು ಇದೇ ಮಾತುಗಳನ್ನು ಅತ್ಯಂತ ಪ್ರಾಮಾಣಿಕ, ನಿಸ್ವಾರ್ಥಿ, ಸಾರ್ವಜನಿಕ ಕ್ಷೇಮವನ್ನಷ್ಟೇ ಉಸಿರಾಡುವ ಅಣ್ಣಾ ಹಜಾರೆ ಅವರಿಂದ ಆಲಿಸಿ ರೋಮಾಂಚನಗೊಂಡರು. ಒಟ್ಟಾರೆ ಭ್ರಷ್ಟಾಚಾರದ ವಿರುದ್ಧದ ಚಳುವಳಿ ಕೇವಲ ಭ್ರಷ್ಟಾಚಾರದ ವಿರುದ್ಧ ಜನಾಭಿಪ್ರಾಯ ಮೂಡಿಸುವುದರ ಜೊತೆಗೆ ಈ ದೇಶದ ಅಂತಸ್ಸತ್ವಗಳಾದ ಪ್ರೀತಿ, ಅಹಿಂಸೆ, ಸಹನೆಗಳ ಬಗ್ಗೆ ಕೂಡ ಹೊಸ ಬೆಳಕು ಚೆಲ್ಲುವತ್ತ ಯಶಸ್ವಿಯಾಯಿತು.

ಏಳೆಂಟು ಸಲ ಸಂಸತ್ತಿನ ಮೆಟ್ಟಲೇರಿ ಅಲ್ಲಿಯೇ ನಶಿಸಿದ್ದ ಲೋಕಪಾಲ್ ಮಸೂದೆ ಅತ್ಯಂತ ಶೀಘ್ರ ಅವಧಿಯಲ್ಲಿ ಈಗಲಾದರೂ ಅನುಷ್ಠಾನಗೊಳ್ಳಲಿ, ಈ ದೇಶ ಇನ್ನಾದರೂ ಭ್ರಷ್ಟರ ಕಪಿಮುಷ್ಟಿಯಿಂದ ಬಿಡುಗಡೆಯಾಗಲಿ, ಬಡಜನರ ಕಾರ್ಪಣ್ಯ ಕೊನೆಗೊಳ್ಳಲಿ, ತನ್ಮೂಲಕ ಅಭಿವೃದ್ಧಿ ಪಥದಲ್ಲಿ ನಿರ್ವಿಘ್ನವಾಗಿ ನಾವೆಲ್ಲ ಸಾಗುವಂತಾಗಲಿ ಎಂಬುದು ನಮ್ಮ ಹಾರೈಕೆ, ಕಳಕಳಿಯ ಬಯಕೆ.

❑ ಉಷಾ ಭರತಾದ್ರಿ

# ಅಂತರಾಳದಿಂದ. . .

**ಕನ್ನಡ ಕಲಿಕೆಯ ಕುರಿತಾಗಿ**

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ತರಗತಿಗಳನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುತ್ತಿದೆ. ಈಗಾಗಲೇ ಈ ಕನ್ನಡ ಕಲಿಕೆಯನ್ನು ವಿದ್ಯುಕ್ತವಾಗಿ ಗಣೇಶ ಚತುರ್ಥಿಯ ದಿನದಂದು ಉದ್ಘಾಟಿಸಲಾಗಿದೆ. ದೆಹಲಿಯಲ್ಲಿ ಕರ್ನಾಟಕ ಸರಕಾರದ ವಿಶೇಷ ಪ್ರತಿನಿಧಿ ಶ್ರೀ ಬಿ.ಎಸ್. ನಾಗೇಶ್‌ರವರು ಈ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಉದ್ಘಾಟಿಸಿದರು.

ಈ ತರಗತಿಗಳಿಗಾಗಿ ಹೆಸರನ್ನು ನೊಂದಾಯಿಸಲು ಬಯಸುವವರು ಸಂಘವನ್ನು ಸಂಪರ್ಕಿಸಬೇಕು. ಮಕ್ಕಳಿಗೆ ವಿಶೇಷ ಆದ್ಯತೆ. ಬಹುಶಃ ದೊಡ್ಡವರಿಗೂ ಸಹ ಬೇರೆ ಬೇರೆ ರೀತಿಗಳಲ್ಲಿ ಮತ್ತು ಬೇರೆ ಸ್ತರಗಳಲ್ಲಿ ಈ ಕಲಿಕೆಯನ್ನು ಪ್ರಾಯೋಜಿಸುವ ಬಗ್ಗೆ ವಿಚಾರ-ವಿನಿಮಯ ನಡೆಯುತ್ತಿದೆ. ಕರ್ನಾಟಕ ಸರಕಾರದಿಂದಲೂ ಹಣಕಾಸು ಹಾಗೂ ಇತರ ಬಗೆಯ ಬೆಂಬಲ ಸಿಗುವುದರ ಬಗ್ಗೆ ಭರವಸೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರುರವರು ನೀಡಿದ್ದರು. ಅದಕ್ಕಾಗಿ ಪುಟ್ಟ ಹಣಕಾಸಿನ ವಿವರಗಳನ್ನು ನಾವು ಅವರಿಗೆ ಕಳುಹಿಸಿಕೊಟ್ಟಿದ್ದೇವೆ. ಅದು ಸಾಕಾರವಾಗುವುದರಲ್ಲಿ ನಮಗೆ ಯಾವ ಸಂಶಯವೂ ಇಲ್ಲ. ಈ ಸರಕಾರದ ಬೆಂಬಲ ಹಾಗೂ ಸಹಕಾರ ಅದರ ವೇಳೆಯ ಪರಿಧಿಯಲ್ಲಿ ಬರುತ್ತಿರುವಾಗ, ನಾವು ತರಗತಿಗಳನ್ನು ಪ್ರಾರಂಭಿಸುವುದರ ಬಗ್ಗೆ ತಯಾರಾಗುತ್ತಿದ್ದೇವೆ. ಈ ಸಂದರ್ಭದಲ್ಲಿ ಕನ್ನಡಿಗರಾದ ನಾವು, ಅದರಲ್ಲೂ ದೆಹಲಿ ಕನ್ನಡಿಗರು ಈ ಕುರಿತಾಗಿ ಅಲ್ಪಸ್ವಲ್ಪವಾದರೂ ವಿಚಾರ-ವಿನಿಮಯ ಮಾಡಿಕೊಳ್ಳುವುದು ಅಗತ್ಯವಾಗಿದೆ.

ಮೊದಲನೆಯದಾಗಿ, ದೆಹಲಿಯಲ್ಲೇ ಹುಟ್ಟಿ ಬೆಳೆಯುತ್ತಿರುವ ಕನ್ನಡದ ಮಕ್ಕಳಿಗೆ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪರಿಚಯವನ್ನು ಮಾಡಿಕೊಡುವುದು ಅಗತ್ಯವಾಗಿದೆ. ಮನೆಯಲ್ಲಿ ತಂದೆ-ತಾಯಿಗಳು ಕನ್ನಡ ಮಾತನಾಡುವುದರಿಂದ ಇವರಿಗೆಲ್ಲ ಅಲ್ಪಸ್ವಲ್ಪ (ಕೆಲವರಿಗೆ ಸಾಕಷ್ಟು) ಕನ್ನಡ ಹಾಗೂ ಅದರ ಸಂಸ್ಕೃತಿಯ ಅರಿವು ಇದ್ದೇ ಇರುತ್ತದೆ. ಈ ಮಕ್ಕಳಿಗೆ ಒಳಗೊಂದು ಪ್ರಪಂಚ ಮತ್ತು ಹೊರಗೆ ಇನ್ನೊಂದು 'ದುನಿಯಾ'. ಒಂದು ಬಗೆಯ ಇಬ್ಬಂದಿತನದ ಸಂದರ್ಭದಲ್ಲಿ ಈ ನಮ್ಮ ಮಕ್ಕಳು ಬೆಳೆಯುವಂತಾಗುತ್ತದೆ. ಕರ್ನಾಟಕದಲ್ಲೇ ಹುಟ್ಟಿ ಬೆಳೆದ ತಂದೆ-ತಾಯಿಗಳಿಗೆ ಊರಿನ ವ್ಯಾಮೋಹ. ಮತ್ತೆ ಎಂದು ಊರಿಗೆ ಮರಳುವೆವೊ ಎಂಬ ಹಪಾಹಪಿ. ಆ ಊರಿನ ನೆನಪುಗಳ ನೆರಳನಡಿಯಲ್ಲಿ ಈ ತಂದೆ-ತಾಯಿಗಳು ಸದಾ ಬದುಕುತ್ತಿರುತ್ತಾರೆ. ಇತ್ತ ನಮ್ಮ ಮಕ್ಕಳಿಗೆ ಇನ್ನೊಂದು ಬಗೆಯ ದೆಹಲಿಯ ಪ್ರಪಂಚ. ಅವರಿಗೆ ಕನ್ನಡದ ನೆರಳು ಕಂಡರೂ, ಅದು ಒಂದು ಬಗೆಯಲ್ಲಿ ಮಸಕು ಮಸುಕು. ಬಾಲ್ಯದ ಮೊದಲ ಹತ್ತಾರು ವರುಷಗಳ ಭಾವಪ್ರಪಂಚ ಹಾಗೂ ಕಲಿಕೆಯ ಪ್ರಪಂಚ ನಮ್ಮ ಜೀವನದ ಇಡೀ ಪ್ರಪಂಚವನ್ನೇ ನಿರ್ಮಿಸಿ ಬಿಡುತ್ತದೆಯೆಂದು ಮನೋವಿಜ್ಞಾನಿಗಳು ಹೇಳುತ್ತಾರೆ. ಹೀಗಾಗಿ, ದೆಹಲಿಯಲ್ಲಿ ಹುಟ್ಟಿ ಬೆಳೆದವರಿಗೆ ಈ ದೆಹಲಿಯೇ ಸದಾ ಸುಂದರವಾಗಿ ಕಾಣುತ್ತದೆ. ಇದು ಸಹಜವಾದದ್ದು.

ಈ ಸಂದರ್ಭದಲ್ಲಿಯೇ ನಾವು ನಡೆದರೆ ಎರಡನೆಯ ವಿಚಾರ-ಕ್ಕೆ ಬರಬಹುದು. ಮಕ್ಕಳು ದೊಡ್ಡವರಾದ ಹಾಗೆ, ಅವರಿಗೆ ತಮ್ಮ ತಂದೆ-ತಾಯಿಗಳ ಇನ್ನೊಂದು ಭಾವಪ್ರಪಂಚದ ಅರಿವೂ ಬರುತ್ತದೆ. ಅಲ್ಲಿನ ಜನಜೀವನ, ಅಜ್ಜ-ಅಜ್ಜಿಯಂದಿರ ಪ್ರೀತಿ, ಒಲುಮೆ. . .ಹಲವಾರು ಬಗೆ-ಯ ಸಾಂಸ್ಕೃತಿಕ ಆಯಾಮಗಳು. . .ಹೀಗೆ ಬಿಡಿಬಿಡಿಯಾಗಿ ಮಕ್ಕಳೂ ಸಹ ನಿಧಾನವಾಗಿ ಈ ಪ್ರಪಂಚದಲ್ಲಿ ಥಳಕು ಹಾಕಿಕೊಳ್ಳುವುದು ಸಾಧ್ಯವಿದೆ. ಇದು ಒಂದು ದೃಷ್ಟಿಯಿಂದ ಅಗತ್ಯ ಕೂಡಾ. ಬೇರುಗಳನ್ನು ಹುಡುಕಿಕೊಂಡು ಹೋಗುವ ಪ್ರಮೇಯ ಎಲ್ಲರಿಗೂ ಅವರವರ ಜೀವನದಲ್ಲಿ ಒಮ್ಮೆಯಾದರೂ ಬರುತ್ತದೆ. ಈ ಬೇರುಗಳಿಲ್ಲದೆ ನಾವೆಲ್ಲ ಬದುಕುವುದು ಅಸಾಧ್ಯ. ಈ ಬಗೆ-ಯ ಭಾವನಾತ್ಮಕವಾದ ವಿಚಾರಗಳೆಲ್ಲ ಪೊಳ್ಳು ಎಂದು ಹೇಳುವವರಿಗೂ ಈ ಬೇರುಗಳನ್ನು ಪೂರಾ ಬಿಟ್ಟು ಬದುಕುವುದು ಅಸಾಧ್ಯವೇ ಸರಿ.

ಕನ್ನಡ ಕಲಿಕೆಯೆಂಬುದು ಈ ಎಲ್ಲ ಆಯಾಮಗಳನ್ನು ಒಳಗೊಂಡು ಸಾಗಬೇಕೆಂಬುದು ನನ್ನ ಅನಿಸಿಕೆ. ಬರೀ 'ಅ' 'ಆ' 'ಇ' 'ಈ' ಕಲಿತರೇನು ಉಪಯೋಗ? ನಾಲ್ಕಾರು ಕನ್ನಡದ ಶಬ್ದಗಳನ್ನು, ವಾಕ್ಯಗಳನ್ನು ಕಲಿತು ಬಿಟ್ಟರೆ ಕನ್ನಡ ಕಲಿತಂತಾಯಿತೇ? ಇದನ್ನು ಕಲಿತವರು ಇದಕ್ಕೂ ಮೀರಿದ್ದನ್ನೇನಾದರೂ ಕಲಿಯಬೇಕು. ಕನ್ನಡ ಭಾಷೆಯ ಕಲಿಕೆಯೊಂದಿಗೆ ಕರ್ನಾಟಕದ ವಿಧವಿಧವಾದ ಸಾಂಸ್ಕೃತಿಕ ಆಯಾಮಗಳೂ ಕೂಡಿಕೊಂಡಾಗ ಒಟ್ಟಾರೆ ಕನ್ನಡ ಕಲಿಕೆಗೆ ಒಂದು ಅರ್ಥಪೂರ್ಣತೆ ಒದಗುತ್ತದೆಯೆಂಬುದು ನನ್ನ ಅನಿಸಿಕೆ.

ಬಹುಶಃ ಎಲ್ಲರಿಗೂ ಈ ಬಗೆಯ ವಿಚಾರಗಳಲ್ಲಿ ಆಸಕ್ತಿ ಇಲ್ಲದಿರಬಹುದು. ಕೆಲವರಿಗೆ ವ್ಯಾವಹಾರಿಕ ಜೀವನ ನಡೆಸಲು ಕನ್ನಡದ ಅಗತ್ಯವಿರಬಹುದು. ಅಷ್ಟಾದರೂ ಸರಿ. ಅವರವರ ಆಸಕ್ತಿ, ಇಚ್ಛೆ, ಬೇಕು-ಬೇಡಗಳ ನಡುವೆಯೇ ಕನ್ನಡ ಕಲಿಕೆಯ ಉದ್ದೇಶ ಸಫಲವಾಗಬೇಕು.

ಮೊದಲ ಹತ್ತಾರು ವರುಷಗಳಲ್ಲಿ ಮಕ್ಕಳಿಗೆ ಹಲವು ಭಾಷೆಗಳನ್ನು ಏಕಕಾಲಕ್ಕೆ ಕಲಿಯುವ ಸಾಮರ್ಥ್ಯವಿರುತ್ತದೆಯೆಂದು ಮತ್ತೆ ಮತ್ತೆ ಮನೋವಿಜ್ಞಾನಿಗಳೇ ಹೇಳುತ್ತಿದ್ದಾರೆ. ಮುಂಬೈಯಂತಹ ಶಹರದಲ್ಲಿ ಕನ್ನಡದ ಮಕ್ಕಳು, ಕನ್ನಡದ ಹೊರತಾಗಿ, ಮರಾಠಿ, ಹಿಂದಿ, ಗುಜರಾತಿ, ಪಾರ್ಸಿ, ಇಂಗ್ಲೀಷ್ ಹಾಗೂ...ಸಾಕಲ್ಲವೇ?...ಭಾಷೆಗಳನ್ನು ಕಲಿತ ಉದಾಹರಣೆಗಳಿವೆ. ಬಹುಶಃ ಪ್ರಪಂಚದ ಯಾವ ಭಾಗದಲ್ಲೂ ನಾಲ್ಕಾರು ಭಾಷೆಗಳಲ್ಲಿ ಪರಿಣಿತರಾದ ಮಕ್ಕಳೂ ನಮಗೆ ಸಿಗುವುದು ಅಪರೂಪ. ಅಮೇರಿಕೆಯಲ್ಲಂತೂ ಇಲ್ಲ ಬಿಡಿ. ದಕ್ಷಿಣದ ಅಮೇರಿಕೆಯಲ್ಲಿರುವವರು ಸ್ಪಾನಿಶ್ ಮತ್ತು ಇಂಗ್ಲೀಷ್ ಕಲಿತರೆ, ಉತ್ತರ ಅಮೇರಿಕೆಯವರು (ಕೆನಡಾದವರು) ಇಂಗ್ಲೀಷ್-ಫ್ರೆಂಚ್ ಮಾತನಾಡಬಹುದು. ಹಾಗೆ ನೋಡಿದರೆ ನಮ್ಮ ದೇಶ ಒಂದು ಅದ್ಭುತವಾದ ದೇಶ. ಇಲ್ಲಿರುವ ವೈವಿಧ್ಯತೆ ಹಾಗೂ ವೈರುಧ್ಯತೆ ಯಾವ ದೇಶದಲ್ಲಿದೆ ಹೇಳಿ? ಇವೆಲ್ಲದರ ನಡುವೆ ನಾವು ಸಾಮಾನ್ಯವಾಗಿ ಹಾಗೂ ಶಾಂತವಾಗಿ ಬದುಕುತ್ತಿದ್ದೇವೆ. ಅದೇ ದೊಡ್ಡದು. ಕನ್ನಡ ಕಲಿಕೆಯ ನಮ್ಮ ಪ್ರಯತ್ನ ಸಾರ್ಥಕವಾಗಲಿ ಎಂದು ಹಾರೈಸುತ್ತೇನೆ.

❑ ಡಾ. ವೆಂಕಟಾಚಲ ಹೆಗಡೆ

## ಕರ್ನಾಟಕ ಸರಕಾರದಿಂದ 50 ಲಕ್ಷ ರೂ ಬಿಡುಗಡೆ

ನಮ್ಮ ಘನ ಕರ್ನಾಟಕ ಸರ್ಕಾರವು ದೆಹಲಿ ಕರ್ನಾಟಕ ಸಂಘದ ವಿಸ್ತಾರ ಹಾಗೂ ವಿನ್ಯಾಸದ ಕೆಲಸಗಳಿಗಾಗಿ ಘೋಷಿಸಿದ ಒಂದು ಕೋಟಿ ರೂಪಾಯಿಗಳ ಅನುದಾನದ ಮೊದಲ ಕಂತಿನ ರೂಪದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕರ್ನಾಟಕ ಸರ್ಕಾರಕ್ಕೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು.

## ಏಕಾಂಕ ನಾಟಕ ಸ್ಪರ್ಧೆ

ಈ ಸಾಲಿನ ಏಕಾಂಕ ನಾಟಕ ಸ್ಪರ್ಧೆಯನ್ನು ನವೆಂಬರ್ 11,12 ಮತ್ತು 13, 2011 ರಂದು ಆಯೋಜಿಸಿದ್ದು, ಆಸಕ್ತಿಯುಳ್ಳವರು ತಮ್ಮ ತಂಡದ ಹೆಸರನ್ನು ಸಂಘದ ಕಛೇರಿಯಲ್ಲಿ ಸೆಪ್ಟಂಬರ್ 30ರ ಒಳಗಾಗಿ ನೊಂದಾಯಿಸಬೇಕಾಗಿ ವಿನಂತಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
26109615/65643615

# ಮುನ್ನೋಟ

ಸಂಘದ ಎಲ್ಲಾ ಸದಸ್ಯರುಗಳ ಜೊತೆ ಒಂದು ಸಂತೋಷದ ವಿಷಯವನ್ನು ಹಂಚಿಕೊಳ್ಳಲು ಬಯಸುತ್ತೇನೆ. ಈ ಹೊಸ ಸಮಿತಿ ಬಂದ ನಂತರ ಮೊಟ್ಟ ಮೊದಲಿಗೆ ಕರ್ನಾಟಕ ಸರಕಾರದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಯಡಿಯೂರಪ್ಪನವರಿಗೆ ನಾವು ಸಲ್ಲಿಸಿದ ಕೋರಿಕೆ ಪತ್ರದಂತೆ ಈ ಸಾರಿಯ ಕರ್ನಾಟಕ ಸರಕಾರದ ಬಜೆಟ್‌ನಲ್ಲಿ ಒಂದು ಕೋಟಿ ರೂಗಳನ್ನು ನಮಗೆ ಹೆಚ್ಚಿನ ಕೆಲಸ ಕಾರ್ಯಗಳಿಗೆ ಅನುದಾನ ನೀಡುವುದಾಗಿ ಘೋಷಿಸಿದ್ದರು. ಈಗ ಸರಕಾರದಿಂದ 50 ಲಕ್ಷ ರೂಗಳನ್ನು ತಂದಿರುತ್ತೇವೆ. ನಮಗೆ ಸಹಕರಿಸಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಮತ್ತು ಎಲ್ಲ ಸಿಬ್ಬಂದಿ ವರ್ಗಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಕೃತಜ್ಞತೆಗಳು. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಸಂಘದ ಅಧ್ಯಕ್ಷರು ಹಾಗೂ ಕಾರ್ಯಕಾರಿಯ ಸಮಿತಿಯ ಎಲ್ಲಾ ಸದಸ್ಯರಿಗೂ ನಾನು ಆಭಾರಿ. ಈ ಸಂತೋಷವನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಆಗಸ್ಟ್ 1 ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರು ಅವರು ಸಂಘಕ್ಕೆ ಭೇಟಿ ನೀಡಿದ್ದರು. ಸಂಘದ ಪದಾಧಿಕಾರಿಗಳ ಜೊತೆ ಮತ್ತು ಮಾಧ್ಯಮದವರ ಜೊತೆ ಕನ್ನಡ ಕಲಿಕಾ ಕೇಂದ್ರ, ಮಾತೃಭಾಷೆ ಕನ್ನಡವನ್ನು ಕಲಿಸುವುದರ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಕನ್ನಡವನ್ನು ಕಲಿಸಿ ಬೆಳೆಸುವುದರ ಬಗ್ಗೆ ಚರ್ಚಿಸಿ ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದಾಗಿ ಭರವಸೆ ಕೊಟ್ಟಿರುತ್ತಾರೆ. ಹಾಗೆಯೇ ಸಾಂಸ್ಕೃತಿಕ ಉತ್ಸವ, ಕನ್ನಡ ಹಬ್ಬ, ಜಾತ್ರೆ, ಹಳೆಗನ್ನಡದ ಬಗ್ಗೆ ವರ್ಷಕ್ಕೆ ಒಂದೆ-ರೆಡು ಬಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕುರಿತು ಕೂಡಾ ಪ್ರಸ್ತಾಪವನ್ನು ನೀಡಿದ್ದಾರೆ. ಹಾಗೆಯೇ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾಡುವುದಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ನಲ್ಲೂರು ಪ್ರಸಾದ್ ಅವರು ಒಪ್ಪಿಗೆಯನ್ನು ನೀಡಿರುತ್ತಾರೆ. ಬರುವ ಡಿಸೆಂಬರ್‌ನಲ್ಲಿ ಎರಡು ದಿನಗಳ ಕಾರ್ಯಕ್ರಮವನ್ನು ಮಾಡುವುದಾಗಿ ಒಪ್ಪಿಗೆಯನ್ನು ನೀಡಿದ್ದು ಇದೇ ಸಂದರ್ಭದಲ್ಲಿ 1000 ಪುಸ್ತಕಗಳನ್ನು ಸಂಘಕ್ಕೆ ಕೊಡುವುದಾಗಿ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೃಷ್ಣಯ್ಯನವರು ಡಾ.ಶಿವರಾಮ ಕಾರಂತರವರ ಪುಸ್ತಕಗಳನ್ನು ಗ್ರಂಥಾಲಯಕ್ಕೆ ನೀಡುವುದಾಗಿ ಒಪ್ಪಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿಗಳಾದ ಶ್ರೀ ಮುರಿಗೆಪ್ಪನವರು ಸಂಘದ ಯಾವುದೇ ಕೆಲಸ ಕಾರ್ಯಗಳಿಗೆ ತಮ್ಮ ಸಹಕಾರವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಹಾಗೆಯೇ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಡಾ.ಜಯರಾಮ್ ಅವರು ಸಂಘದಲ್ಲಿ ನಾಟಕೋತ್ಸವ ಮಾಡುವುದಾಗಿ ತಿಳಿಸಿ ಜೊತೆಗೆ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಡುವುದಾಗಿ ತಿಳಿಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರುಗಳಾದ ವಿಷ್ಣುನಾಯಕ್ ಅವರು ಪ್ರಕಾಶನ ಸಂಸ್ಥೆಯಿಂದ ಸಂಘಕ್ಕೆ ಸುಮಾರು 100 ಪುಸ್ತಕಗಳನ್ನು ಕೊಡುವುದಾಗಿ ತಿಳಿಸಿದ್ದಾರೆ. ಈ ಎಲ್ಲ ಗಣ್ಯರುಗಳನ್ನು ಸಂಘವು ಸ್ವಾಗತಿಸುತ್ತದೆ.

ಸೆಪ್ಟಂಬರ್ 1 ರಂದು ನಡೆದ ದೆಹಲಿ ಕರ್ನಾಟಕ ಸಂಘದ ಗಣೇಶೋತ್ಸವ ಆಚರಣೆಯ ಸಂದರ್ಭದಲ್ಲಿ ಕನ್ನಡ ಕಲಿಸುವಿಕೆಯ ಉದ್ಘಾಟನೆಯನ್ನು ಸಾಂಕೇತಿಕವಾಗಿ ಕರ್ನಾಟಕ ಸರಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಮಾಡಿರುತ್ತಾರೆ. ಎಲ್ಲ ಕನ್ನಡವನ್ನು ಕಲಿಯ ಬಯಸುವ ಕನ್ನಡಿಗರು ತಮ್ಮ ಮಕ್ಕಳ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕಾಗಿ ವಿನಂತಿ.

❑ ಸಿ.ಎಂ. ನಾಗರಾಜ

ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ

ಕನ್ನಡ ಚಲನಚಿತ್ರ ಪ್ರದರ್ಶನ

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ್, ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ- 110022**



**ದಿನಾಂಕ : 17.09.2011 ರ ಶನಿವಾರ**
**ಸಂಜೆ : 4 ಘಂಟೆಗೆ**
ಪ್ರಕಾಶ್ ರೈ, ರಮೇಶ್ ಮತ್ತು ಅಮೂಲ್ಯ ಅಭಿನಯದ

## ನಾನೂ ನನ್ನ ಕನಸು

ನಿರ್ದೇಶನ : ಪ್ರಕಾಶ್ ರೈ

**ಧಾರವಾಡ ಜಿಲ್ಲಾ ಅವಲೋಕನ**
**ಕುರಿತ ಸಾಕ್ಷ್ಯ ಚಿತ್ರ**
**ನಿರ್ಮಾಣ : ವಾರ್ತಾ ಇಲಾಖೆ**

**ರಾಜ್ಯ ಸರ್ಕಾರದ ಸಾಧನೆ ಪ್ರತಿಬಿಂಬಿಸುವ ವಸ್ತು ಪ್ರದರ್ಶನ**
**ದಿನಾಂಕ : 15.09.2011 ರಿಂದ 21.09.2011**
**ಸ್ಥಳ : ಸಂಘದ ಆವರಣ**

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!
ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ
ಕರ್ನಾಟಕ ಭವನ-2, ನಂ. 6. ಸರ್ದಾರ್ ಪಟೇಲ್ ಮಾರ್ಗ್, ಚಾಣಕ್ಯಪುರಿ, ನವದೆಹಲಿ- 110021.
ದೂರವಾಣಿ: 011-24102263, ಮೊಬೈಲ್: +91 99686 52139

# ದೆಹಲಿಯಲ್ಲಿ ವಿಜೃಂಭಿಸಿದ "ರಾಯಪ್ರತಾಪ"

## ಯಕ್ಷಗಾನಕ್ಕೆ ಯುನೆಸ್ಕೊ ಮನ್ನಣೆ ಅಗತ್ಯ–ಮೊಯಿಲಿ

ತೆಂಕುತಿಟ್ಟು : ಕೋಳ್ಯೂರು ಮತ್ತು ಸುಣ್ಣಂಬಳ



ಡಾ. ಶಿವರಾಮ ಕಾರಂತ ಮತ್ತು ಬಿ.ವಿ. ಕಾರಂತರ ನಂತರ ಯಕ್ಷಗಾನವನ್ನು ರಾಜಧಾನಿಯ ಪ್ರೇಕ್ಷಕರಿಗೆ ಪರಿಚಯಿಸುವ ಕೆಲಸ ಅಷ್ಟಾಗಿ ನಡೆದಿಲ್ಲ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸದಸ್ಯರಾಗಿದ್ದ ಕೆರೆಮನೆ ಶಂಭು ಹೆಗಡೆಯವರು ಬಡಗುತಿಟ್ಟು ಯಕ್ಷಗಾನವನ್ನು ಆಗೀಗ ಕನ್ನಡೇತರರಿಗೆ ತೋರಿಸಿದ್ದರು. ಅವರ ನಿಧನದ ನಂತರ ಆ ಕೆಲಸವೂ ಹಿಂದೆ ಬಿತ್ತು. ಇಂಥ ಸಂದರ್ಭದಲ್ಲಿ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯವರು ದೆಹಲಿಯ ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನದ ಸಹಯೋಗದೊಂದಿಗೆ ಆಗಸ್ಟ್ ತಿಂಗಳ 4,5,6 ಮತ್ತು 7 ರಂದು ನಡೆಸಿದ ರಾಯಪ್ರತಾಪ–2011 (ರಾಜಧಾನಿಯಲ್ಲಿ ಯಕ್ಷಗಾನ ಪ್ರದರ್ಶನ, ತಾಳಮದ್ದಳೆ, ಪಸರಣ) ಅಭೂತಪೂರ್ವ ಯಶಸ್ಸು ಕಂಡಿತು. ಯಕ್ಷಗಾನ ಪ್ರದರ್ಶನಕ್ಕೆ ಆಯ್ದುಕೊಂಡ ಪ್ರಸಂಗಗಳು, ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಗಳನ್ನು ನಡೆಸಿದ ರೀತಿ, ಅವುಗಳನ್ನು ಅಚ್ಚುಕಟ್ಟಾಗಿ ಆಯೋಜಿಸಿದ ಬಗೆ ಎಲ್ಲವೂ ಎಲ್ಲರ ಪ್ರಶಂಸೆಗೆ ಕಾರಣವಾಯಿತು.

**ಉದ್ಘಾಟನೆ :** ಈ ಕಾರ್ಯಕ್ರಮದ ಉದ್ಘಾಟನೆಯು ಆಗಸ್ಟ್ 4ರಂದು ಸಾಯಂಕಾಲ 6 ಗಂಟೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರೂ, ಪ್ರಖ್ಯಾತ ಯಕ್ಷಗಾನ ಕಲಾವಿದರೂ ಆಗಿರುವ ಶ್ರೀ ಕುಂಬಳೆ ಸುಂದರ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾಡಿದ ಕೇಂದ್ರ ಸಚಿವರಾದ ಶ್ರೀ ವೀರಪ್ಪ ಮೊಯಿಲಿ ಅವರು "ಯಕ್ಷಗಾನ ಬಹುದೊಡ್ಡ ಕಲೆ, ಆ ಕಲೆಯಿಂದ ನಾನು ಸಾಕಷ್ಟು ಪ್ರೇರಣೆ ಪಡೆದಿರುವೆ. ಯಕ್ಷಗಾನದ ಪ್ರಮುಖ ಪ್ರಬೇಧವಾದ ತಾಳಮದ್ದಳೆಯಿಂದ ನಾನು ವಾದ ಮಾಡಲು ಕಲಿತು, ಕೇಂದ್ರ ಸರಕಾರದಲ್ಲಿ ಕಾನೂನು ಸಚಿವನಾಗಲು ಸಾಧ್ಯ ಆಯಿತು. ಇಂಥ ಕಲೆಯ ಬಗ್ಗೆ ಇನ್ನಷ್ಟು ಆಳವಾದ ಅಧ್ಯಯನ ನಡೆಯಬೇಕು ಮತ್ತು ವಿಶ್ವಸಂಸ್ಥೆಯು ಈ ಕಲೆಗೆ ಸೂಕ್ತವಾದ ಮನ್ನಣೆ ನೀಡಬೇಕು. ಮುಂದಿನ ಅಕ್ಟೋಬರ್‌ನಲ್ಲಿ ನಾನು ಸಂಸ್ಥೆಗೆ ಭೇಟಿ ನೀಡಲಿದ್ದು, ಆಗ ಯಕ್ಷಗಾನಕ್ಕೆ ಯುನೆಸ್ಕೋ ಮನ್ನಣೆ ನೀಡುವ ಕುರಿತು ಮಾತಾಡಲಿದ್ದೇನೆ" ಎಂದು ಹೇಳಿದರು. ಈ ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತಾಡಿದ ತೆಂಕುತಿಟ್ಟು ಯಕ್ಷಗಾನ ಅಕಾಡೆಮಿಯ ನಿರ್ದೇಶಕಿ ಶ್ರೀಮತಿ ವಿದ್ಯಾಕೋಳ್ಯೂರು ಅವರು 'ಯಕ್ಷಗಾನ ಕಲೆಯೇನೋ ಅದ್ಭುತವಾಗಿದೆ, ಆದರೆ ಕಲಾವಿದರ ಬದುಕು ದುರ್ಭರವಾಗಿದೆ. ಸರಕಾರ ಕಲಾವಿದರ ಬಗೆಗೆ ಯೋಚಿಸಬೇಕು" ಎಂದು ಹೇಳಿದರು. ಆರಂಭದಲ್ಲಿ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಮುನಿರಾಜು ಅವರು ಸ್ವಾಗತಿಸಿದರೆ, ಕೊನೆಯಲ್ಲಿ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಸದಸ್ಯ ಶ್ರೀ ಮುರಲಿ ಕಡೆಕಾರ್ ವಂದಿಸಿದರು. ಸರವು ಕೃಷ್ಣ ಭಟ್ಟ ಅವರು ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ನಲ್ಲೂರು ಪ್ರಸಾದ್ ಮತ್ತು ಸಂಸ್ಕೃತಿ ಇಲಾಖೆ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರು ಹಾಜರಿದ್ದರು. ಉದ್ಘಾಟನಾ ಕಾರ್ಯಕ್ರಮದ ಭಾಗವಾಗಿ ಬಡಗುತಿಟ್ಟಿನ ಕಲಾವಿದರು 'ಭಸ್ಮಾಸುರ ಮೋಹಿನಿ' ಪ್ರಸಂಗವನ್ನು ಪ್ರಸ್ತುತಪಡಿಸಿದರು. ಕೊಳಗಿ ಕೇಶವ ಹೆಗಡೆ (ಭಾಗವತರು), ಚಿಟ್ಟಾಣಿ ರಾಮಚಂದ್ರ ಹೆಗಡೆ, ಸುಬ್ರಹ್ಮಣ್ಯ ಹೆಗಡೆ (ಭಸ್ಮಾಸುರ) ನೀಲಗೋಡು ಶಂಕರ ಹೆಗಡೆ (ಮೋಹಿನಿ) ಮೊದಲಾದ ಕಲಾವಿದರ ಕೂಡುವಿಕೆಯ ಈ ಪ್ರದರ್ಶನ ಮನಮೋಹಕವಾಗಿತ್ತು.

**ರಾಷ್ಟ್ರೀಯ ನಾಟಕ ಶಾಲೆ ಮತ್ತು ದೆಹಲಿ ವಿಶ್ವವಿದ್ಯಾಲಯಗಳಲ್ಲಿ ಪ್ರಾತ್ಯಕ್ಷಿಕೆಗಳು :** ಯಕ್ಷಗಾನವನ್ನು ಕನ್ನಡೇತರರಿಗೆ ಪರಿಚಯಿಸುವ ದೃಷ್ಟಿಯಿಂದ ರಾಷ್ಟ್ರೀಯ ನಾಟಕ ಶಾಲೆ ಮತ್ತು ದೆಹಲಿ ವಿಶ್ವವಿದ್ಯಾಲಯದಲ್ಲಿ ತೆಂಕು ಮತ್ತು ಬಡಗು ತಿಟ್ಟುಗಳ ಕೆಲವು ಆಯ್ದ ಪಾತ್ರಗಳ ಪ್ರಾತ್ಯಕ್ಷಿಕೆಗಳನ್ನು 05.08.2011ರಂದು ಏರ್ಪಡಿಸಲಾಗಿತ್ತು. ಯಕ್ಷಗಾನದ ನಾಲ್ಕು ಪ್ರಮುಖ ಅಂಗಗಳಲ್ಲಿ ಭಾಷೆಯನ್ನು ಹೊರತುಪಡಿಸಿ, ಸಂಗೀತ, ವೇಷಭೂಷಣ ಮತ್ತು ನಾಟ್ಯಗಳು ಹೇಗೆ ಪ್ರದರ್ಶನವೊಂದರಲ್ಲಿ ಒಟ್ಟಾಗಿ ಮೇಳವಿಸಿ ನಿರ್ದಿಷ್ಟ ಪರಿಣಾಮ ಉಂಟು ಮಾಡುತ್ತದೆ ಎಂಬುದನ್ನು ಅಲ್ಲಿ ಭಾರತ ದೇಶದ ವಿವಿಧ ಮೂಲೆಗಳಿಂದ ಆಗಮಿಸಿದ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಲಾಯಿತು. ತೆಂಕುತಿಟ್ಟಿನಲ್ಲಿ ದೇವೇಂದ್ರನ ಒಡ್ಡೋಲಗ (ಸುಣ್ಣಂಬಳ ವಿಶ್ವೇಶ್ವರ ಭಟ್), ಹನುಮಂತನ ಪ್ರವೇಶ (ಕೆ.ಗೋವಿಂದ ಭಟ್), ರಾವಣನ ತೆರೆ ಕುಣಿತ (ಸದಾಶಿವ ಶೆಟ್ಟಿಗಾರ್) ಮತ್ತು ವೀರರಸ (ಚಂದ್ರಶೇಖರ ಧರ್ಮಸ್ಥಳ ಹಾಗೂ ಪದ್ಮನಾಭ ಶೆಟ್ಟಿ ಹಾಗೂ ಪದ್ಮನಾಭ ಶೆಟ್ಟಿ) ಕುಣಿತಗಳನ್ನು ಪ್ರದರ್ಶಿಸಲಾಯಿತು. ಹಿಮ್ಮೇಳದಲ್ಲಿ ಭಾಗವತರಾಗಿ ಶ್ರೀ ಪುತ್ತಿಗೆ ರಘುರಾಮ ಹೊಳ್ಳ, ಚೆಂಡೆವಾದಕರಾಗಿ ಶ್ರೀ ಪದ್ಯಾಣ ಶಂಕರನಾರಾಯಣ ಭಟ್ ಹಾಗೂ ಅಡೂರು ಗಣೇಶ ರಾವ್ ಹಾಗೂ ಮದ್ದಳೆಯಲ್ಲಿ ಶ್ರೀ ಪದ್ಯಾಣ ಜಯರಾಮ ಭಟ್ ಸಹಕರಿಸಿದರು. ಬಡಗುತಿಟ್ಟಿನಲ್ಲಿ ಶ್ರೀಕೃಷ್ಣ ಒಡ್ಡೋಲಗ (ಸುಬ್ರಹ್ಮಣ್ಯ ಚಿಟ್ಟಾಣಿ), ಸ್ತ್ರೀಪಾತ್ರ ಪ್ರವೇಶ (ನೀಲಗೋಡು ಶಂಕರ ಹೆಗಡೆ) ಮತ್ತು ಹೆಣ್ಣು ಬಣ್ಣದ ಶೂರ್ಪನಖಿ (ಎಲ್ಲಂಪಳ್ಳಿ ಜಗನ್ನಾಥ)ಯನ್ನು ಪ್ರದರ್ಶಿಸಲಾಯಿತು. ಹಿಮ್ಮೇಳದಲ್ಲಿ ಕೊಳಗಿ ಕೇಶವ ಹೆಗಡೆ, ಚೆಂಡೆಯಲ್ಲಿ ನಗರ ವೇಣುಗೋಪಾಲ ಮತ್ತು ಮದ್ದಳೆಯಲ್ಲಿ ವಿಘ್ನೇಶ್ವರ ಕೆಸರಗೊಪ್ಪ ಭಾಗವಹಿಸಿದ್ದರು.ನೀಲಗೋಡು ಶಂಕರ ಹೆಗಡೆಯವರ ವಿಷಯ ಪಾತ್ರವನ್ನು ಕಂಡು ಬೆರಗಾದ ನಾಟಕ ಶಾಲೆಯ ವಿದ್ಯಾರ್ಥಿಗಳು ಎದ್ದುನಿಂತು ದೀರ್ಘ ಕರತಾಡನ ಮಾಡಿ ಗೌರವ ಸಲ್ಲಿಸಿದ್ದು ವಿಶೇಷವಾಗಿತ್ತು. ದೆಹಲಿ ವಿಶ್ವವಿದ್ಯಾಲಯದಲ್ಲಿ 76ರ ಹರೆಯದ ಶ್ರೀ ಕೋಳ್ಯೂರು ರಾಮಚಂದ್ರ ರಾಯರು ಕಸೆ ವೇಷದ ಸ್ತ್ರೀ ಪಾತ್ರ ಮಾಡಿ ಅಚ್ಚರಿ ಮೂಡಿಸಿದರು.

**ಕೃಷ್ಣ ಪಾರಿಜಾತ, ಸ್ತ್ರೀ ವೇಷಗಳು, ತಾಳಮದ್ದಳೆ ಮತ್ತು ರಸಾಭಿವ್ಯಕ್ತಿ ಕ್ರಮಗಳು :** 06.08.2011 ರಂದು ಶ್ರೀ ರಾಘವೇಂದ್ರ ಕೃಷ್ಣಪಾರಿಜಾತ ಕಂಪೆನಿ, ಬಾಗಲಕೋಟೆ, ತಂಡದ ಕಲಾವಿದರು ಸಂಕ್ಷಿಪ್ತವಾಗಿ ಆದರೆ ಪರಿಣಾಮಕಾರಿಯಾಗಿ ಕೃಷ್ಣ ಪಾರಿಜಾತವನ್ನು ಪ್ರದರ್ಶಿಸಿದರು. ತದನಂತರ ಯಕ್ಷಗಾನದಲ್ಲಿ ಕಾಣಸಿಗುವ ವಿಶೇಷ ಸ್ತ್ರೀ ವೇಷಗಳನ್ನು ತೋರಿಸಲಾಯಿತು.

ಬಡಗುತಿಟ್ಟು : ಚಿಟ್ಟಾಣಿ ಮತ್ತು ನೀಲಗೋಡು



ಬೇಗಾರು ಶಿವಕುಮಾರ್ ನೀಲಗೋಡು ಹಾಗೂ ಶಂಕರ ಹೆಗಡೆ ಅವರ ಪಾತ್ರಗಳು ಎಲ್ಲರ ಮನಸೆಳೆಯಿತು.

ಅದೇ ದಿನ ಮಧ್ಯಾಹ್ನ ತೆಂಕು–ಬಡಗು ತಿಟ್ಟಿನ ಕಲಾವಿದರ ಕೂಡುವಿಕೆಯಿಂದ 'ಸಮರ ಸನ್ನಾಹ' ತಾಳಮದ್ದಳೆ ಕೂಟ ನಡೆಯಿತು. ಶ್ರೀ ಕುಂಬಳೆ ಸುಂದರರಾಯರ ಶ್ರೀ ಕೃಷ್ಣ, ಕೋಳ್ಯೂರು ಅವರ ದ್ರೌಪದಿ, ಗೋವಿಂದ ಭಟ್ಟರ ಕೌರವ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅದೇ ದಿನ ರಾತ್ರಿ ತೆಂಕುತಿಟ್ಟಿನ ಸಾಂಪ್ರದಾಯಿಕ ರೀತಿಯಲ್ಲಿ 'ಸುಧನ್ವಾರ್ಜುನ' ಯಕ್ಷಗಾನ ಪ್ರದರ್ಶಿಸಲಾಯಿತು.

07.08.2011ರಂದು ಪೂರ್ವಾಹ್ನ ಡಾ. ನಾರಾಯಣ ಶೆಟ್ಟಿ ಅವರು ಯಕ್ಷಗಾನ ಛಂದಸ್ಸಿನ ಬಗೆಗೆ ವಿಶೇಷ ಉಪನ್ಯಾಸ ನೀಡಿದರು. ಆನಂತರ ಯಕ್ಷಗಾನದಲ್ಲಿ ಪ್ರಕಟವಾಗುವ ವೀರ, ಹಾಸ್ಯ, ಕರುಣ, ರೌದ್ರ ಮೊದಲಾದ ವಿವಿಧ ರಸಗಳನ್ನು ಪರಿಣಾಮಕಾರಿಯಾಗಿ ತೋರಿಸಲಾಯಿತು. ಶ್ರೀ ಕೋಳ್ಯೂರು ರಾಮಚಂದ್ರ ರಾಯರ ಚಂದ್ರಮತಿಯ ಕರುಣಾಜನಕ ದೃಶ್ಯ ಎಲ್ಲರ ಕಣ್ಣಲ್ಲಿ ನೀರಿಳಿಸಿತು. ಆ ದಿನ ಮಧ್ಯಾಹ್ನ ಯಕ್ಷಗಾನ ಅಕಾಡೆಮಿಯ ಸದಸ್ಯರಿಂದ ಜಾಂಬವತಿ ಕಲ್ಯಾಣ, ತೆಂಕುತಿಟ್ಟಿನ ಕಲಾವಿದರಿಂದ ವೀರ ಅಭಿಮನ್ಯು ಮತ್ತು ಬಡಗಿನ ಕಲಾವಿದರಿಂದ ಗದಾಯುದ್ಧ ಯಕ್ಷಗಾನ ಪ್ರದರ್ಶಿಸಲಾಯಿತು.

ಕಾರ್ಯಕ್ರಮದ ಸಮಾರೋಪದಲ್ಲಿ ಹಿರಿಯ ಕಲಾವಿದರಾದ ಶ್ರೀ ರಾಮಚಂದ್ರ ಚಿಟ್ಟಾಣಿ, ಕುಂಬಳೆ ಸುಂದರರಾವ್, ಕೆ. ಗೋವಿಂದ ಭಟ್ ಮತ್ತು ಕೋಳ್ಯೂರು ರಾಮಚಂದ್ರ ರಾವ್ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮಾತಾಡಿದ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಯಕ್ಷಗಾನ ಪ್ರದರ್ಶನಗಳ ಹಕ್ಕುಗಳನ್ನು ಕಾಯ್ದುಕೊಳ್ಳುವ ಬಗ್ಗೆ ಬೆಳಕು ಚೆಲ್ಲಿದರು.

ಹೀಗೆ ದೆಹಲಿಯ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಡೆದ 'ರಾಯಪ್ರತಾಪ' ಅತ್ಯಂತ ಯಶಸ್ವಿಯಾಯಿತು. ಎಲ್ಲ ಪ್ರದರ್ಶನಗಳನ್ನು ಸೂಕ್ತ ರೀತಿಯಲ್ಲಿ ದಾಖಲು ಮಾಡಿದ್ದರಿಂದಾಗಿ ನೆನಪುಗಳು ಉಳಿಯುವಂತಾಗಿದೆ. ಯಕ್ಷಗಾನ ಅಕಾಡೆಮಿಯ ಮಾನ್ಯ ಸದಸ್ಯರುಗಳು ಅತಿಥಿಗಳಂತೆ ನಡೆದುಕೊಳ್ಳದೆ ಸ್ವಯಂ ಸೇವಕರಂತೆ ಕೆಲಸ ಮಾಡಿದ್ದು ಕೂಡಾ ಇಲ್ಲಿ ಉಲ್ಲೇಖಾರ್ಹ.

❑ **ಡಾ. ಪುರುಷೋತ್ತಮ ಬಿಳಿಮಲೆ**

# ಫೇಸ್ ಬುಕ್ ತಂದ ಅವಾಂತರ

ಈಗೆಲ್ಲಾ ಬರೀ ಫೇಸ್ ಬುಕ್, ಟ್ವಿಟ್ಟರ್, ಓರ್ಕುಟ್‌ದೇ ಕಾಲ. ನನ್ನಂತಹ ಹಳೇ ಕಾಲದ ಮನುಷ್ಯರಿಗೆ ಇದು ಸ್ವಲ್ಪ ಕಷ್ಟದ ಕೆಲಸ. ಆದರೆ ನಮ್ಮ ಮನೆಯಲ್ಲಿ ನನ್ನ ಮಕ್ಕಳಿಬ್ಬರಿಗೂ ಫೇಸ್ ಬುಕ್ಕೇ ಒಂದು ಪ್ರಪಂಚ. ಹಾಗೇ ಒಂದು ದಿನ ನನ್ನ ಸಣ್ಣ ಮಗಳು, ಅಪ್ಪ ನಿನಗೂ ಒಂದು ಫೇಸ್ ಬುಕ್ ಓಪನ್ ಮಾಡಿ ಕೊಡುತ್ತೀನಿ ಅಂತ ಹಠಬಿದ್ದು ಕ್ಷಣಾರ್ಧದಲ್ಲಿ ನನ್ನ ಫೇಸ್ ಬುಕ್ ಅಕೌಂಟ್ ಓಪನ್ ಮಾಡಿಯೇ ಬಿಟ್ಟಳು. ಅದಕ್ಕೊಂದು ಫೋಟೋ ಬೇಕು ಅಂತ ಹುಡುಕಾಡಿ ಕೊನೆಗೆ ಸಿಕ್ಕಿದ್ದೇ ಸರಿ ಅಂತ ನನ್ನ ನಾದಿನಿ ಮದುವೆಯಲ್ಲಿ ತೆಗೆದ ಒಂದು ಪೋಟೋವನ್ನ ಅದಕ್ಕೆ ಜೋಡಿಸಿದ್ಲು. ಒಂದು ಎರಡು ದಿನದ ಅಭ್ಯಾಸದ ನಂತರ ನಾನೂ ಫೇಸ್ ಬುಕ್ ತೆರೆಯುವುದನ್ನ ಕಲಿತುಕೊಂಡೆ. ನೋಡ್ತಾ ನೋಡ್ತಾ ನನಗೂ ಮೆಸೇಜ್‌ಗಳು, ಹೊಸ ಹೊಸ ಸ್ನೇಹಿತರು ಬರೋಕೆ ಶುರುವಾಯ್ತು. ನಾನೂ ಸ್ವಲ್ಪ ಹೆಮ್ಮೆಪಟ್ಟುಕೊಂಡೆ. ಒಂದು ದಿನ ಇದ್ದಕ್ಕಿದ್ದಾಗೆ ಒಬ್ಬ ಫೋನ್ ಮಾಡಿದ "ನಿಮ್ಮ ಫೇಸ್ ಬುಕ್ ಅಕೌಂಟ್ ನೋಡಿದೆ, ನಿಮ್ಮ ಫೋಟೋ ಅಂತೂ ತುಂಬಾ ಚೆನ್ನಾಗಿದೆ, ನನಗೆ ತುಂಬಾ ಇಷ್ಟ ಆಯಿತು" ಅಂತೆಲ್ಲಾ ಸುರು ಮಾಡಿದ. ನನಗೂ ಯಾಕೋ ಪರವಾಗಿಲ್ಲಪ್ಪಾ ನನ್ನನ್ನೂ ನಾಲ್ಕು ಜನ ಕೇಳೋಕೆ ಶುರುವಾದರಲ್ಲ ಅಂತ ಖುಷಿಯಾಯಿತು. ಆದರೆ ಮುಂದಿನ ಕಥೆ ತುಂಬಾ ಚೆನ್ನಾಗಿದೆ. ಆ ದಿನ ಫೋನು ಮಾಡಿದ ಪುಣ್ಯಾತ್ಮ ಮತ್ತೆ ಮತ್ತೆ ಫೋನು ಮಾಡೋಕೆ ಶುರು ಮಾಡಿದ. ಪ್ರತೀ ಸಲ ಫೋನು ಮಾಡಿದಾಗಲೂನು ಬಹಳ ನನ್ನನ್ನ ಹೊಗಳ್ತಾನೇ ಇದ್ದ. "ನಿಮ್ಮಂತವರು ಅಂದರೆ ನನಗೆ ಬಹಳ ಇಷ್ಟ. ನಿಮ್ಮನ್ನು ನಾನು ಒಂದ್ಸಲ ಭೇಟಿಯಾಗಬೇಕು" ಅಂತೆಲ್ಲಾ ಹೇಳೋಕೆ ಶುರುಮಾಡಿದ. ಹೀಗೇ ನಡೀತಾ ನಡೀತಾ ಅವನ ಫೋನು ಹೊತ್ತು ಗೊತ್ತು ಇಲ್ಲದೆ ಬರೋಕೆ ಶುರುವಾಯಿತು. ನಮ್ಮ ಮನೆಯಾಕೆಗೂ ಯಾಕೋ ಸಂಶಯ ಶುರುವಾಯಿತು. ಯಾಕಿವರು ಯಾವಾಗಲೂ ಈ ರೀತಿ ಫೋನಲ್ಲೇ ಮಾತಾಡ್ತಾ ಇರ್ತಾರಲ್ಲ ಅಂತ ನನ್ನನ್ನ ಫಾಲೋ ಮಾಡೋಕೆ ಶುರುಮಾಡಿದ್ಲು. ಒಂದಿನ ರಾತ್ರಿ 12 ಗಂಟೆ ಹೊತ್ತಿಗೆ ಅವನ ಫೋನು ಬಂತು. ನಾನು ಒಳ್ಳೆ ನಿದ್ದೆಯಲ್ಲಿದ್ದೆ ಆಗ ನಮ್ಮ ಮನೆಯಾಕೆ ಅವನ ಫೋನನ್ನ ಅಟೆಂಡ್ ಮಾಡಿದ್ಲು, ನನ್ನನ್ನ ಎಬ್ಬಿಸಿ ನೋಡ್ರಿ ಇದ್ಯಾರೋ ಮಾತಾಡಬೇಕಂತೆ ಅಂತ ಫೋನು ಕೊಟ್ಲು. ಯಾರಪ್ಪ ಇಷ್ಟು ರಾತ್ರಿನಲ್ಲಿ ಫೋನು ಮಾಡೋನು ಅಂತ ಮಾತಾಡಿದ್ರೆ ಅದೇ ಮಾಮೂಲಿ ಸ್ವರ. ಸ್ವಲ್ಪ ಬೇಸರದಿಂದ ಅವನಿಗಂದೆ ನಿನಗೆ ಫೋನು ಮಾಡೋಕೆ ಇದೇ ಸಮಯನಾ?. ಅದಕ್ಕೆ ಅವ ಅಂದ ನನಗ್ಯಾಕೋ ನಿದ್ದೇನೇ ಬರುತ್ತಿಲ್ಲ, ಅದಕ್ಕೆ ನಿಮ್ಮತ್ರ ಮಾತಾಡೋಣ ಅಂತ ಮಾಡಿದೆ. ಫೇಸ್ ಬುಕ್‌ನ ನಿಮ್ ಫೋಟೋನೇ ನೋಡ್ತಾ, ನಿಮ್ಮತ್ರ ಮಾತಾಡ್ತಾ ಇದ್ರೆ ಯಾಕೋ ಒಂದು ಒಳ್ಳೆ ಆನಂದ ಸಿಗುತ್ತೆ ಅಂದ. ಹೋಗಯ್ಯ ಈಗ ಬೆಳಿಗ್ಗೆ ಮಾತಾಡೋಣ ಅಂತ ಫೋನು ಕೆಳಗಿಟ್ಟೆ. ಅವನೇ ಆ ಫೇಸ್ ಬುಕ್‌ನಲ್ಲಿ ಪರಿಚಯ ಆದವ. ಅವನಿಗೇನೋ ನನ್ ಫೋಟೋ ನೋಡಿ ಖುಷಿಯಾಗುತ್ತಂತೆ. ನನ್ನನ್ನು ಭೇಟಿ ಆಗಬೇಕು ಅಂತೆಲ್ಲಾ ಹೇಳುತ್ತಾನೆ ಅಂತ ವಿವರಿಸಿದೆ. ನನ್ ಹೆಂಡ್ತಿಗೆ ಯಾಕೋ ಏನೋ ಸ್ವಲ್ಪ ಗಂಡಾಂತರ ಅನ್ನಿಸಿತ್ತು. ಎಲ್ಲಿ ನಿಮ್ಮ ಫೇಸ್ ಬುಕ್ ಓಪನ್ ಮಾಡಿ ಅಂದ್ಲು. ಆ ಅರ್ಧ ರಾತ್ರಿಯಲ್ಲಿ ಕಂಪ್ಯೂಟರ್ ತೆರೆದು ಫೇಸ್ ಬುಕ್ ಓಪನ್ ಮಾಡಿ ನೋಡಿದ್ವಿ. ನಡೆದದ್ದು ಇಷ್ಟೆ. ಆ ಫೋಟೋ ನನ್ನ ನಾದಿನಿ ಮದುವೆ ಸಂದರ್ಭದಲ್ಲಿ ತೆಗೆದ ಫೋಟೋ ಆಗಿದ್ದದರಿಂದ, ಅಲ್ಲಿ ನನಗೆ ಮುಖ ತುಂಬಾ ಅರಿಶಿಣ ಹಾಕಿದ್ದು, ನನ್ನ ತಲೆ ಮೇಲೆ ಹೂವಿನ ಎಸಳುಗಳು, ನನ್ನ ಸುತ್ತಾ ನಾಲ್ಕಾರು ಜನ ಮಹಿಳೆಯರು ಇದ್ದರು. ಇದು ಗಡವಾಲ್‌ನಲ್ಲಿ ಅಳಿಯನಿಗೆ ವಿಶೇಷ ಗೌರವ ತೋರಿಸುವ ಒಂದು ಸಂಸ್ಕಾರ ಅಂತೆ. ಆಗ ನನ್ನ ಹೆಂಡ್ತಿ ಹೇಳಿದ್ಲು, "ಮೊದ್ಲು ಈ ಫೋಟೋ ಬದಲು ಮಾಡಿ. ನಿಮಗೇನಾದರೂ ತಲೆ ಇದೆಯಾ? ಅವ ಪದೇ ಪದೇ ಯಾಕೆ ಫೋನು ಮಾಡ್ತಾನೆ ಅಂತ, ಸ್ವಲ್ಪನಾದರೂ ಯೋಚನೆ ಮಾಡ್‌ಬಾರದಾ". ಆಗ ನನ್ ಟ್ಯೂಬ್‌ಲೈಟ್ ಸ್ವಲ್ಪ ಹತ್ಕೊಳ್ಳೋಕೆ ಶುರುವಾಯಿತು. ಏನೂ ಪರಿಚಯ ಇಲ್ಲದೇನೇ ಒಬ್ಬ ಮನುಷ್ಯ ಪದೇ ಪದೇ ಫೋನು ಮಾಡ್ತಾನೆ, ಅದೂ ಹೊತ್ತಲ್ಲದ ಹೊತ್ನಲ್ಲಿ. ಅಷ್ಟೇ ಅಲ್ಲದೆ ನನ್ನನ್ನ ಏಕಾಂತದಲ್ಲಿ ಭೇಟಿಯಾಗಬೇಕು ಅಂತ ಹೇಳುತ್ತಾನೆ ಅಂದ್ಮೇಲೆ ಯಾಕೋ ಇವನ ನಿಯತ್ತೇ ಸರಿ ಇಲ್ಲ ಅಂತ ಅರ್ಥ ಆಯ್ತು. ಮರುದಿನ ಎದ್ದ ತಕ್ಷಣ ಮೊದಲ್ನೇ ಕೆಲಸ ಮಗಳನ್ನು ಕರೆದು ಫೋಟೋ ಬದಲಾಯಿಸಿದೆ. ಅಂದಿನಿಂದ ಅವನ ಫೋನು ಬರಲೇ ಇಲ್ಲ.

❑ **ಸಖಾರಾಮ ಉಪ್ಪೂರು**

**ಪ್ರತಿ ತಿಂಗಳು 10 ಅಥವಾ 11ನೇ ತಾರೀಖು 'ಅಭಿಮತ'ವನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ. ಒಂದು ವಾರದೊಳಗಾಗಿ ನಿಮಗೆ ತಲುಪದೇ ಇದ್ದಲ್ಲಿ ದಯಮಾಡಿ ನಮ್ಮನ್ನು ಸಂಪರ್ಕಿಸಿ 26109615, 65643615**

## ಜನಕಪುರಿ ಮಹಿಳಾ ಮಂಡಳಿಯ

### ನೂತನ ಕಾರ್ಯಕಾರಿ ಸಮಿತಿ

**ಅಧ್ಯಕ್ಷೆ** : ಮೀರಾನಾಡಿಗ್, **ಕಾರ್ಯದರ್ಶಿ** : ಮೋಹಿನಿ ರೈ, ಜಂಟಿ **ಕಾರ್ಯದರ್ಶಿ** : ಜಯಶ್ರೀ ಬಸವರಾಜು, **ಖಜಾಂಚಿ** : ವಂದನಾ ಎಂ. ಶೆಟ್ಟಿ ಜನಕಪುರಿ ಮಹಿಳಾ ಮಂಡಳಿಯ ನೂತನ ಪದಾಧಿಕಾರಿಗಳಾಗಿ ಆಯ್ಕೆಗೊಂಡಿದ್ದಾರೆ.

# ಖ್ಯಾತ ಸಾಹಿತಿ ನಾ. ಡಿಸೋಜ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲ ಸಾಹಿತ್ಯ ಪುರಸ್ಕಾರ'



ನಾ. ಡಿಸೋಜ ಕನ್ನಡದ ಪ್ರಸಿದ್ಧ ಮತ್ತು ಜನಪ್ರಿಯ ಸಾಹಿತಿ. ಇವರ 'ಮುಳುಗಡೆಯ ಊರಿಗೆ ಬಂದವರು' ಎಂಬ ಮಕ್ಕಳ ಕಿರುಕಾದಂಬರಿ 2011ರ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲ ಸಾಹಿತ್ಯ ಪುರಸ್ಕಾರ'ಕ್ಕೆ ಪಾತ್ರವಾಗಿದೆ.

ಡಿಸೋಜ ಅವರ ಸಹಜ ಸೃಜನಶೀಲತೆಯಿಂದ ಇದುವರೆಗೂ 37 ಕಾದಂಬರಿ, ನಾಲ್ಕು ನಾಟಕ, 37 ಮಕ್ಕಳ ಕೃತಿ ಹಾಗೂ ನೂರಾರು ಸಣ್ಣ ಕಥೆಗಳು, ಲೇಖನಗಳು, ವ್ಯಕ್ತಿ ಪರಿಚಯ, ಅಂಕಣ ಬರಹಗಳು ಸೃಷ್ಟಿಯಾಗಿವೆ. ಇದಕ್ಕಾಗಿ ಸಾಹಿತ್ಯ ಅಕಾಡೆಮಿ ಸೇರಿದಂತೆ ವಿವಿಧ ಪ್ರಶಸ್ತಿಗಳು ಬಂದಿವೆ.'ಕಾಡಿನ ಬೆಂಕಿ', 'ದ್ವೀಪ' ಕೃತಿಗಳು ಸಿನಿಮಾ ಆಗಿ 'ರಜತ ಕಮಲ', 'ಸ್ವರ್ಣ ಕಮಲ' ಪ್ರಶಸ್ತಿಗಳಿಗೆ ಭಾಜನವಾಗಿವೆ.

ಮುಳುಗಡೆ ಬದುಕು, ಮಲೆನಾಡ ಹಾಡು-ಹಸೆ, ಹೋರಾಟ, ಬುಡಕಟ್ಟು ಜನಾಂಗದ ವಿಲಕ್ಷಣ-ವಿಶೇಷಗಳು 'ನಾಡಿ' ಬರಹದ ಪ್ರಧಾನ ನೆಲೆಗಳು.

ವಿಶೇಷವಾಗಿ ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡಿದ ನಾ.ಡಿಸೋಜ ಇದುವರೆಗೂ 15 ಕಿರುಕಾದಂಬರಿ, 10 ನಾಟಕಗಳು, ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರದಲ್ಲಿ 12 ಕೃತಿಗಳನ್ನು ಪ್ರಕಟಿಸಿದ್ದಾರೆ.

ಇವರ 'ಬೆಳಕಿನೊಡನೆ ಬಂತು ನೆನಪು' ಮಕ್ಕಳ ಕಿರುಕಾದಂಬರಿಗೆ 1988ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಇನ್ನೊಂದು ಕಿರುಕಾದಂಬರಿ 'ಬೆಟ್ಟದ ಪುರದ ದಿಟ್ಟ ಮಕ್ಕಳು' ಮಕ್ಕಳ ಸಿನಿಮಾ ಆಗಿದೆ.

ಪ್ರಸ್ತುತ ಪುರಸ್ಕಾರಕ್ಕೆ ಅರ್ಹವಾದ ಕಿರುಕಾದಂಬರಿ 'ಮುಳುಗಡೆಯ ಊರಿಗೆ ಬಂದವರು' ಬೆಂಗಳೂರಿನಿಂದ ಮಲೆನಾಡಿನ ಮುಳುಗಡೆಯ ಊರಿಗೆ ಪಯಣ ಮಾಡುವ ಮಕ್ಕಳು, ಹಳ್ಳಿಯ ಅನುಭವ ಪಡೆದುಕೊಳ್ಳುವ, ಆ ಮೂಲಕ ಹಳ್ಳಿಪರಿಸರದ ಜತೆ ಮುಖಾಮುಖಿಯಾಗುವ ಕಥಾವಸ್ತು ಹೊಂದಿದೆ.

ನಾ.ಡಿಸೋಜ ಅವರು ಸಾಹಿತ್ಯ ರಚನೆ ಜತೆ ಹೋರಾಟಗಾರರಾಗಿಯೂ ಹೆಸರಾಗಿದ್ದಾರೆ. ಸಮಾಜದ ಪ್ರಸ್ತುತ ಬಿಕ್ಕಟ್ಟುಗಳಿಗೆ ಬರವಣಿಗೆ ಜತೆ ಹೋರಾಟದಲ್ಲೂ ಮುಂಚೂಣಿಯಲ್ಲಿದ್ದು, ಜಾಗೃತಿ ಮೂಡಿಸುತ್ತಿದ್ದಾರೆ. ಸಾಹಿತಿ ನಾ. ಡಿಸೋಜ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಓದುಗರ ಪತ್ರ

ಜುಲೈ ತಿಂಗಳ ಅಭಿಮತದಲ್ಲಿ ಪ್ರಕಟವಾದ ಶ್ರೀ ಎನ್.ಜೆ. ಕಾಮತರ ಕುರಿತಾದ ಲೇಖನ ಮನಮುಟ್ಟುವಂತಿದೆ. ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ ಹೀಗೆ ಕನ್ನಡಪರ ಸಂಘ ಸಂಸ್ಥೆಗಳೊಡನೆ ತಮ್ಮನ್ನು ಗುರುತಿಸಿಕೊಂಡು, ಸದಾ ಕ್ರಿಯಾಶೀಲವಾಗಿರುವ ಅವರನ್ನು ಅಭಿಮತ ಅತ್ಯಂತ ಸಮರ್ಪಕವಾಗಿ ಪರಿಚಯಿಸಿದೆ. ಇಂಥ ಹಿರಿಯ ಚೇತನಗಳ ಬಗ್ಗೆ ಆಗಾಗ್ಗೆ ಲೇಖನಗಳನ್ನು ಪ್ರಕಟಿಸಬೇಕೆಂದು ವಿನಂತಿ ಮಾಡಿಕೊಳ್ಳುವೆ.

**ಡಾ. ಪುರುಷೋತ್ತಮ ಬಿಳಿಮಲೆ**

ಮುಖಪುಟದಲ್ಲಿ ಶ್ರೀ ಎನ್.ಜೆ. ಕಾಮತರ, ಒಳ ಹೊದಿಕೆಯ ಪುಟದಲ್ಲಿ ಮಂದಸ್ಮಿತರಾಗಿರುವ ಶ್ರೀ ಸದಾನಂದ ಗೌಡರ ಭಾವಚಿತ್ರಗಳು, ಆ ಕುರಿತ ಲೇಖನಗಳು ಅಭಿಮತ ಆಗಸ್ಟ್ 2011ರ ಸಂಚಿಕೆಯಲ್ಲಿ ಸುಂದರವಾಗಿ ಮೂಡಿಬಂದಿವೆ. ಶ್ರೀ ಎನ್.ಜೆ. ಕಾಮತ್ ಅವರೊಡನೆ ಸಂದರ್ಶನ ಆತ್ಮೀಯವಾಗಿದೆ. ಅವರ ಅನಿಸಿಕೆಗಳು, ಅಭ್ಯಾಸಗಳು ತುಂಬಾ ಇಷ್ಟವಾದವು. "ಸಾವಿರಾರು ಮೈಲಿ ದೂರದಿಂದ ಬಂದ. . . ಎತ್ತಿ ಹಿಡಿಯಬೇಕೆಂಬುದೇ ನನ್ನ ಆಶೆ" ಎಂಬ ನುಡಿ ದೆಹಲಿ ಕನ್ನಡಿಗರಿಗೆ ಮಾತ್ರವಲ್ಲದೇ ಎಲ್ಲ ಹೊರನಾಡ ಕನ್ನಡಿಗರಿಗೂ ಸಂದೇಶವಾಗಿ ಉಳಿಯುತ್ತದೆ. ಸಂಪಾದಕೀಯವೂ ಸೇರಿದಂತೆ ಉಳಿದೆಲ್ಲ ಲೇಖನಗಳು, ಭಾವಚಿತ್ರಗಳು ಹೃದ್ಯವಾಗಿವೆ. ಡಾ. ವೆಂಕಟಾಚಲ ಹೆಗಡೆ ಅವರ ಧಾರವಾಡದ ಕ್ಷಣಗಳು(ಅಂತರಾಳದಿಂದ), ಜಯಶ್ರೀ ಬಸವರಾಜು ಅವರ 'ಸವಿನೋಟ' ಕವನ, ಯುರೋಪ್ ಪ್ರವಾಸ ಕುರಿತ ಡಾ. ಅಹಲ್ಯಾಚಿಂತಾಮಣಿ ಅವರ ಸಚಿತ್ರ ಲೇಖನ ಮೊದಲಾದವುಗಳು 'ಅಭಿಮತ' ಆತ್ಮೀಯವಾಗುವಂತೆ ಮಾಡುತ್ತವೆ. ಸಂಪಾದಕರಿಗೂ, ಸಂಪಾದಕೀಯ ಮಂಡಳಿಗೂ, ದೆಹಲಿ ಕರ್ನಾಟಕ ಸಂಘಕ್ಕೂ ಹಾರ್ದಿಕ ಅಭಿನಂದನೆಗಳು.

**ತುಳಸಾ ಕಲುಮಂಗಿ ಮತ್ತು ಕೃಷ್ಣಮೂರ್ತಿ ಕಲುಮಂಗಿ**

### ಸಂತಸದ ಅನಿಸಿಕೆ

ಯಕ್ಷಗಾನ ವೈವಿಧ್ಯಮಯ ಕಾರ್ಯಕ್ರಮ ಅಭೂತಪೂರ್ವ ಅವಿಸ್ಮರಣೀಯ ಅನುಭವ ನೀಡಿತು. ಈ ಕಲೆಯ ಸಾಧನೆಗೆ, ಪ್ರದರ್ಶನಕ್ಕೆ ಪರಿಶ್ರಮಿಸಿದ, ಪರಿಶ್ರಮಿಸುತ್ತಿರುವ ಪ್ರತಿ ಒಬ್ಬ ವ್ಯಕ್ತಿಯೂ ಅಭಿನಂದನಾರ್ಹ. ವಾಕ್‌ಪಟು, ಬುದ್ಧಿವಂತರೂ, ಮೋಡಿಗಾರರೂ ಆದ ಶ್ರೀ ಕೃಷ್ಣಭಟ್ಟರ ಮತ್ತು ದೈವದತ್ತವಾಗಿ ತಂದೆಯವರ ಮಾರ್ಗದರ್ಶನದಲ್ಲಿ ಸಾರ್ಥಕತೆ ಪಡೆದ ಶ್ರೀಮತಿ ವಿದ್ಯಾಕೋಳ್ಯೂರು ಅವರ ಪರಿಶ್ರಮ ಶ್ಲಾಘನೀಯ! ನಮ್ಮ ಪ್ರೀತಿಯ ಒಲವಿನ ದೆಹಲಿ ಕರ್ನಾಟಕ ಸಂಘದ ಸಭಾಂಗಣವನ್ನು ಎಂತೆಂತಹ ಉನ್ನತ ಮಟ್ಟದ ಮಹಾನ್ ಕಲಾವಿದರು ತಮ್ಮ ಕಲಾ ಪ್ರತಿಭೆಯ ಪುಷ್ಪಗಳಿಂದ ಅಲಂಕರಿಸಿದ್ದಾರೆಂಬುದು ಅತ್ಯಂತ ಹೆಮ್ಮೆಯ ವಿಷಯ. ಇನ್ನು ಮುಂದೂ ಹೆಚ್ಚು ಹೆಚ್ಚು ಅವಕಾಶಗಳಿಂದ ದೆಹಲಿ ಕರ್ನಾಟಕ ಸಂಘದ ರಂಗಮಂದಿರ ಶೋಭಾಯಮಾನವಾಗಿ ಕಂಗೊಳಿಸಲೆಂದು ಕಲಾದೇವಿ ಸರಸ್ವತಿಯನ್ನು ಪ್ರಾರ್ಥಿಸಿ ಶುಭಕೋರುವ.

**ಡಾ. ಅಹಲ್ಯಾಚಿಂತಾಮಣಿ**

### ಅಭಿನಂದನೆಗಳು

ಎಷ್ಟೋ ವರುಷಗಳಿಂದ ನಾನು ಎನ್.ಜೆ. ಕಾಮತ್ ಸಾಹೇಬರನ್ನು ಬಲ್ಲೆನಾಗಿದ್ದರೂ ಅವರ ಸಂಪೂರ್ಣ ಪರಿಚಯ ಇದೀಗ ಅಭಿಮತವನ್ನು (ಆಗಸ್ಟ್-2011) ಓದಿದ ನಂತರವೇ ಆಗಿದೆ. ಅವರು ನಿವೃತ್ತ ಐ.ಎ.ಎಸ್. ಅಧಿಕಾರಿಗಳೆಂಬುದನ್ನು ತಿಳಿದಿದ್ದೆ. ಹಾಗೂ ಅವರ ಕಾರ್ಯನಿಷ್ಠೆ, ದಕ್ಷತೆ, ಸಮಯಪಾಲನೆ, ಶಿಸ್ತು ಮತ್ತು ಪ್ರಾಮಾಣಿಕತೆಗಳನ್ನು ಅವರೊಂದಿಗೆ ಕರ್ನಾಟಕ ಸಂಘ, ಕನ್ನಡ ಶಿಕ್ಷಣ ಸಂಸ್ಥೆಗಳಲ್ಲಿ ಆತ್ಮೀಯವಾಗಿ ಹಲವಾರು ಸಂದರ್ಭಗಳಲ್ಲಿ ಕಾರ್ಯನಿರತನಾಗಿದ್ದಾಗ ಕಂಡುಕೊಂಡಿದ್ದೇನೆ. ಇವರನ್ನು ಅಭಿಮತದ ಮೂಲಕ ಪರಿಚಯಿಸಿದ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರಿಗೆ ಹಾಗೂ ಸಂಪಾದಕರಾದ ಶ್ರೀಮತಿ ಉಷಾ ಭರತಾದ್ರಿ ಮತ್ತು ಶ್ರೀಮತಿ ರೇಣುಕಾ ನಿಡಗುಂದಿ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಅಧ್ಯಕ್ಷರೇ ಬರೆದಂತೆ ದೆಹಲಿಯ ಹಲವು ಹಿರಿಯ ಕನ್ನಡಿಗರೆಲ್ಲರ ಇಂತಹ ಚಾರಿತ್ರಿಕ ಸೇವೆಯ ದಾಖಲೆಗಳನ್ನು ಪಡಿಮೂಡಿಸುವ ಕೆಲಸ ನಡೆಯಬೇಕಾಗಿದೆ. ದೆಹಲಿ ಕರ್ನಾಟಕ ಸಂಘ ಈ ದಿಶೆಯಲ್ಲಿ ಯೋಚಿಸಿ, ಆದಷ್ಟು ಬೇಗನೇ ಕಾರ್ಯತತ್ಪರರಾಗಬೇಕಾಗಿ ವಿನಂತಿ. ವಿಷಯ ಸಂಗ್ರಹ ತ್ವರಿತವಾಗಿ ನಡೆಯಲಿ.

ದೆಹಲಿ ಕರ್ನಾಟಕ ಸಂಘದ ಸಂಸ್ಥಾಪಕ ಅಧ್ಯಕ್ಷೆ ಡಾ. ಸರೋಜಿನಿ ಮಹಿಷಿ ಅವರಿಗೆ "ಹಿಂದಿ ರತ್ನ ಸಮ್ಮಾನ್" ಪ್ರಶಸ್ತಿ ಪಡೆದುದಕ್ಕಾಗಿ ಅವರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

**ಎಸ್.ಬಿ. ಕುರಂದವಾಡ**

**ಸಂಘದಲ್ಲಿ ಕನ್ನಡ ಕಲಿಕೆ ತರಗತಿಗಳನ್ನು ಪ್ರಾರಂಭಿಸಲಾಗುವುದು. ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ನೊಂದಾಯಿಸಬಹುದು.**

ಹಾಸ್ಯ ಕಥೆ

# ಈ ಹೊಳಪಿನ ಪುಣ್ಯ ನಿಮ್ಮದೇ ಕೃಷ್ಣಾ !

ನಮ್ಮ ಷಷ್ಠಿ ಪೂರ್ತಿಯು ವಿಜೃಂಭಣೆಯಿಂದ ನೆರವೇರಿತು. ಆ ಕಾರ್ಯಕ್ರಮಕ್ಕೆ ಬಂದಿದ್ದ ಬಂಧುಗಳು, ಸ್ನೇಹಿತರು ಹೊರಟು ಹೋದರು.

ರಾತ್ರಿ ಊಟಗಳಾದ ನಂತರ ಎಲ್ಲ ಕೆಲಸಗಳೂ ಮುಗಿದ ಮೇಲೆ ನಮ್ಮ ಕೋಣೆಯೊಳಗೆ ಹೊಕ್ಕೆವು. ರಾಧ ಬೇರೆ ಮಂಚದ ಮೇಲೆ ಮಲಗಲು ಹೋದಾಗ, "ಈ ದಿನ ನಾವು ನವದಂಪತಿಗಳು ಕಣೇ !" ಎಂದೆ ಆಕೆಯನ್ನು ಹತ್ತಿರವಾಗಿಸಿಕೊಳ್ಳುತ್ತಾ.

"ಸಾಕು ಸುಮ್ನಿರಿ!" ಎನ್ನುತ್ತಾ ರಾಧ ನಕ್ಕಳು.

ಆಕೆಯ ನಗುವನ್ನು ನೋಡಿದಾಗ ನಮ್ಮ ಮದುವೆಯಾದ ಹೊಸತರಲ್ಲಿ ನಡೆದ ಒಂದು ಘಟನೆಯು ಠಕ್ಕೆಂದು ನನ್ನ ಕಣ್ಣುಗಳ ಮುಂದೆ ಪ್ರತ್ಯಕ್ಷವಾಯಿತು...

ಮೂವತ್ತೆಂಟು ವರ್ಷಗಳ ಕೆಳಗೆ ರಾಧಳೊಂದಿಗೆ ನನ್ನ ಮದುವೆ ನಡೆದದ್ದು, ಹತ್ತೇ ದಿವಸಗಳಲ್ಲಿ ನಗರದಲ್ಲಿ ಹೊಸತಾಗಿ ಹಿಡಿದಿದ್ದ ಬಾಡಿಗೆ ಮನೆಯಲ್ಲಿ ನಾವು ಸಂಸಾರವನ್ನು ಹೂಡಿದ್ದು ಚಕಚಕನೆ ನಡೆದು ಹೋಗಿದ್ದವು.

ಮದುವೆಗೆಂದು ಇಟ್ಟಿದ್ದ ರಜೆಗಳಲ್ಲಿ ಒಂದು ಉಳಿದಿತ್ತು. ಆ ದಿನವೂ ಹಾಯಾಗಿ, ಆನಂದವಾಗಿ ರಾಧಳೊಂದಿಗೆ ಕಳೆಯಬಹುದೆಂದುಕೊಳ್ಳುತ್ತಾ ನಿಧಾನವಾಗಿ ಕಣ್ಣುಗಳನ್ನು ಬಿಚ್ಚಿದೆ. ಪಕ್ಕದಲ್ಲಿ ರಾಧ ಇರಲಿಲ್ಲ.

ಸಮಯ ಎಂಟೂವರೆ...ಸರಿಯಾಗಿ ಆಗಲೇ 'ಇನ್ಸ್‌ಪೆಕ್ಷನ್‌ಯಿದೆಯೆಂದು, ಒಂಬತ್ತೂವರೆಗೆಲ್ಲಾ ಆಫೀಸಿನಲ್ಲಿರಬೇಕೆಂದು' ನಮ್ಮ ಬಾಸ್‌ನಿಂದ ಫೋನ್ ಬಂದಿತು.

ನಾನು ಯಾವುದೋ ಕಾರಣವನ್ನು ಹೇಳಬೇಕೆನ್ನುವಷ್ಟರಲ್ಲಿ, ಆತನು ಫೋನ್ ಇಟ್ಟಿದ್ದ. ಇನ್ನು ಮಾಡುವುದೇನೂ ಇಲ್ಲವಾಗಿದ್ದರಿಂದ ನಿದ್ರೆಯ ಮಂಕಿನಿಂದ ಹೊರಬಂದು ಮಂಚದಿಂದ ಇಳಿದೆ.

'ಇಷ್ಟಕ್ಕೂ ರಾಧ ಎಲ್ಲಿ?' ವೆರಂಡಾದಲ್ಲಿಯಾಗಲಿ, ಪಡಸಾಲೆಯಲ್ಲಾಗಲಿ, ಅಡುಗೆ ಮನೆಯಲ್ಲಾಗಲಿ ಕಾಣಿಸಲಿಲ್ಲ ಆಕೆ. ಎಲ್ಲಿಗೆ ಹೋಗಿರಬಹುದು ಎಂದುಕೊಳ್ಳುತ್ತಾ ಟವೆಲ್ ತೆಗೆದುಕೊಂಡು ಬಚ್ಚಲು ಮನೆಯ ಬಳಿ ಹೋಗುವಷ್ಟರಲ್ಲಿ ಬಾಗಿಲು ಮುಚ್ಚಿತ್ತು.

'ಸತ್ತೆ... ರಾಧ ಒಳಗಿರುವವಳು. ಯಾವಾಗ ಹೊರಗೆ ಬರುವಳೋ? ಹೆಚ್ಚು ಸಮಯವಿಲ್ವಲ್ಲಾ' ಎಂದು ನಾನು ಬಚ್ಚಲು ಮನೆಯ ಬಳಿಯಿಂದ ವೆರಂಡಾದೊಳಗೆ, ಅಲ್ಲಿಂದ ಬಚ್ಚಲು ಮನೆಯವರೆಗೆ ಅಡ್ಡಾಡುತ್ತಿರುವಂತೆಯೇ ಹತ್ತು ನಿಮಿಷಗಳು ಕಳೆದಿದ್ದವು. ಇನ್ನೂ ಹೊರಗೆ ಬರುತ್ತಿಲ್ವಲ್ಲಾ ರಾಧ? ಒಳಗೆ ಏನು ಮಾಡುತ್ತಿರಬಹುದು? ತಡೆಯಲಾರದೇ ಬಾಗಿಲುಗಳಿಗೆ ಕಿವಿಯನ್ನು ಆನಿಸಿದೆ.

ಆಗ ಕೇಳಿ ಬಂತು 'ಗಸ ಗಸ ಬರಬರ'ವೆಂಬ ಶಬ್ದ...ಆಗಾಗ ನೀರನ್ನು ಚೆಲ್ಲುತ್ತಿರುವ ಸಪ್ಪಳ...

ನನಗೆ ಥಟ್ಟೆಂದು ಜ್ಞಾಪಕ ಬಂತು–"ಮಗಳು ಸ್ವಲ್ಪ ಛಾನಸ ಸ್ವಭಾವದವಳು. ತೊಳೆದದ್ದನ್ನೇ ತೊಳೆಯುವಳು, ಒರೆಸಿದ್ದನ್ನೇ ಒರೆಸುವಳು, ತಿಕ್ಕಿದ್ದನ್ನೇ ತಿಕ್ಕುವಳು" ಎಂದಿದ್ದ ನಮ್ಮ ಮಾವನವರ ಮಾತುಗಳು.

ಆದ್ದರಿಂದ ನಾನು ಇನ್ನೂ ಸ್ವಲ್ಪ ಸಮಯ ಕಾದಿದ್ದೆ.. . ಒಳಗೆ ಗಸಗಸ ಬರಬರ ಎಂಬ ಶಬ್ದ ಮಾತ್ರ ನಿಂತಿರಲಿಲ್ಲ.

ಇನ್ನು ಕೋಪವನ್ನು ತಡೆಯಲಾರದೆ ಬಚ್ಚಲುಮನೆಯ ಬಾಗಿಲನ್ನು ಬಡಿದೆ.

"ಬರ್ತಿದ್ದೀನಿ, ಸ್ವಲ್ಪ ಇರ್ರಿ" ಎಂದಳು ರಾಧ.

"ಮೊದಲು ಬಾಗಿಲು ತೆಗೀತೀಯಾ. . . ಮುರಿದು ಬಿಡಲೇ?" ಎಂದೆ ಹುಚ್ಚುಕೋಪದಿಂದ.

ಠಕ್ಕನೆ ಬಾಗಿಲು ತೆರೆದುಕೊಂಡು ಹೊರಗೆ ಬಂದ ರಾಧ "ಯಾಕೆ ಹಾಗೆ ಬಡೀತೀರಿ! ಐದು ನಿಮಿಷ ತಾಳಲಾರಿರಾ?" ಎಂದಳು ಕಿರುನಗೆ ಬೀರುತ್ತಾ.

"ನಿನಗಸಲು ಬುದ್ಧಿ ಇದೆಯೇನೇ? ಯಾವ ಸಮಯದಲ್ಲಿ ಏನು ಮಾಡಬೇಕೆಂಬುದು ಗೊತ್ತಿಲ್ಲದಿದ್ರೆ ಹೇಗೆ"? ಈ ಸಮಯದಲ್ಲಿಯೂ ಬಚ್ಚಲು ಮನೆ ತಿಕ್ಕುವುದು? ಎಂದೆ ತೀವ್ರವಾದ ಸ್ವರದಿಂದ.

"ನಾನು ಬಚ್ಚಲುಮನೆ ತಿಕ್ಕುತ್ತಿರಲಿಲ್ಲ!" ಪಕಪಕನೆ ನಗುತ್ತಾ ಅಂದಳು ರಾಧ.

"ನಿನಗೆಲ್ಲವೂ ತಮಾಷೆಯೇ! ಅರ್ಜೆಂಟಾಗಿ ನಾನು ಆಫೀಸಿಗೆ ಹೋಗ್ಬೇಕು. ಟೈಮ್ ಸರಿಯಾಗಿ ಹೋಗದಿದ್ದರೆ ನಮ್ಮ ಯಮರಾಜ. . .ಅದೇ ಬಾಸ್, ನನ್ನನ್ನು ನಂಜಿಕೊಂಡು ತಿಂದ್ಬಿಡ್ತಾನೆ! ಇಷ್ಟಕ್ಕೂ ಗಸಗಸ ಬರಬರ ಅಂತ ಇಷ್ಟು ಹೊತ್ತೂ ಬಚ್ಚಲು ಮನೆಯಲ್ಲಿ ನೀನು ಏನು ಮಾಡ್ತಿದ್ದೆ ಅಂತ?" ಎಂದೆ ಸಿಡಿಮಿಡಿಗೊಳ್ಳುತ್ತಾ.

"ಯಾಕ್ರೀ ಅಷ್ಟು ಕೋಪ? ನೀವಂದುಕೊಳ್ಳುತ್ತಿರುವಂತೆ ನಾನು ಬಚ್ಚಲು ಮನೆ ತಿಕ್ಕುತ್ತಿರಲಿಲ್ಲ... ಹಲ್ಲುಗಳನ್ನು ತಿಕ್ಕಿಕೊಳ್ಳುತ್ತಿದ್ದೆ!" ಎಂದು ಸಾವಕಾಶವಾಗಿ ಹೇಳಿ ನಮ್ಮ ಕೋಣೆಯೊಳಗೆ ಹೊರಟು ಹೋದಳು.

'ಏನು... ಏನಂದಳು...ಹಲ್ಲು...ಹಲ್ಲು...ಹಲ್ಲುಗಳನ್ನೂ ಹೀಗೆ ಕೂಡಾ ತಿಕ್ಕುತ್ತಾರೆಯೇ?' ನನಗೆ ಕಣ್ಣುಗಳು ತಿರುಗಿದವು.

ತಿರುಗುತ್ತಿದ್ದ ಕಣ್ಣುಗಳ ಮುಂದೆ ಹಲ್ಲಿನ ಡಾಕ್ಟರ್ ಪ್ರತ್ಯಕ್ಷವಾದ. ಆತನು ರಾಧಾಳ ಎಲ್ಲ ಹಲ್ಲುಗಳನ್ನೂ ಕೀಳಬೇಕೆನ್ನುತ್ತಿರುವವನು...ಹೀಗಲ್ಲ, ಆಫೀಸಿನಿಂದ ಬಂದ ಕೂಡಲೇ ಹಲ್ಲುಗಳನ್ನು ಹೇಗೆ ತಿಕ್ಕಬೇಕು, ಅವುಗಳನ್ನು ಎಷ್ಟು ಜಾಗ್ರತೆಯಿಂದ ಕಾಪಾಡಿಕೊಳ್ಳಬೇಕು ಎಂಬುದನ್ನು ರಾಧಳಿಗೆ ತಿಳಿಸಬೇಕು. ಇಲ್ಲದಿದ್ದರೆ ಈಕೆಯ ಛಾನಸತನದಿಂದ ಶೀಘ್ರದಲ್ಲಿಯೇ ಒಂದಿಪ್ಪತ್ತೈದು ಸಾವಿರ ರೂಪಾಯಿಗಳು ನನ್ನವಲ್ಲವೆಂದುಕೊಳ್ಳಬೇಕಾಗುತ್ತದೆ ಎಂದುಕೊಳ್ಳುತ್ತಾ ಬಚ್ಚಲು ಮನೆಯೊಳಗೆ ನುಗ್ಗಿದೆ.

"ಏನು ಹಾಗೆ ನನ್ನ ಮುಖದಲ್ಲಿಯೇ ನೋಡ್ತಾ ನಿಂತು ಬಿಟ್ರಲ್ಲಾ?" ಎಂದಳು ಯಾಕೋ ನಾಚಿಕೆಪಡುತ್ತಾ ರಾಧ. ತುಸು ಬಿಚ್ಚಿಬಿದ್ದು "ನಾನು ನೋಡ್ತಾ ಇರೋದು ಇನ್ನೂ ಫಳಫಳ ಹೊಳೆಯುತ್ತಿರುವ ನಿನ್ನ ಹಲ್ಲುಗಳ ವರಸೆಯನ್ನು" ಎಂದೆ.

"ಈ ಹೊಳಪಿನ ಪುಣ್ಯ ನಿಮ್ಮದೇ ಕೃಷ್ಣಾ!" ಎಂದಳು, ನನ್ನ ಭುಜದ ಮೇಲೆ ತಲೆಯನ್ನು ವಾಲಿಸುತ್ತಾ ರಾಧ.

❑ **ಕೃಷ್ಣಮೂರ್ತಿ ಕಲುಮಂಗಿ**

# ದೆಹಲಿ ಕನ್ನಡ ಶಾಲೆಯ ಕುಮಾರ ಸ್ವಾಮಿ ಇನ್ನಿಲ್ಲ



09.08.2011ರಂದು ಬೆಳಿಗ್ಗೆ ಆಸ್ಪತ್ರೆಗೆಂದು ಹೊರಡಲು ಸಿದ್ಧರಾಗುತ್ತಿರುವಾಗ ತೀವ್ರ ಹೃದಯಾಘಾತಕ್ಕೆ ಒಳಗಾಗಿ ಕುಮಾರ ಸ್ವಾಮಿ ಅವರು ನಿಧನರಾದರು.

ಕುಮಾರಸ್ವಾಮಿಯವರು ಮೈಸೂರು ಸಮೀಪ ಚಾಮರಾಜನಗರದ ಕೊಳ್ಳೇಗಾಲದವರು. ಇವರು ಉದ್ಯೋಗ ನಿಮಿತ್ತ ದೆಹಲಿಗೆ ಬಂದು, ಮೊದಲು ದೆಹಲಿ ಪ್ರವಾಸೋದ್ಯಮದಲ್ಲಿ ಕೆಲಸ ಮಾಡುತ್ತಿದ್ದರು. 18.05.1983ರಲ್ಲಿ ದೆಹಲಿ ಕನ್ನಡ ಶಾಲೆಗೆ ಪ್ರಥಮ ದರ್ಜೆ ಗುಮಾಸ್ತರಾಗಿ ಸೇರಿ ಮುಂದೆ ಹೆಡ್ ಕ್ಲರ್ಕ್ ಆಗಿ ಪದೋನ್ನತಿ ಪಡೆದಿದ್ದರು. 20.08.2011 ರಂದು ದೆಹಲಿ ಕನ್ನಡ ಶಾಲೆಯಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಾಲೆಯ ಅಧ್ಯಕ್ಷ ಜಿ.ಎಂ. ಲಿಂಗರಾಜು, ಕಾರ್ಯಕಾರಿ ಸಮಿತಿಯ ಸದಸ್ಯ ಡಾ. ಶಶಿಕುಮಾರ್, ಇನ್‌ಚಾರ್ಜ್ ಪ್ರಿನ್ಸಿಪಾಲರಾದ ಕೆ.ಟಿ. ಗಣೇಶ್, ಪ್ರಾಧ್ಯಾಪಕ ಎಸ್.ಎನ್. ರಾಜು, ಕುಮಾರಸ್ವಾಮಿಯ ವರ ಸಹೋದರ ಶಂಕರ್ ಅವರು ಮಾತನಾಡುತ್ತಾ ಶಾಲೆಯ ಕಛೇರಿಯ ಜೀವಾಳದಂತಿರುವ ಶ್ರೀ ಕುಮಾರಸ್ವಾಮಿಯವರು ದೈವಾಧೀನರಾದದ್ದು ಕತ್ತಲೆ ಕವಿದಂತೆ ಆಗಿದೆ. ಕಛೇರಿಯ ಕೆಲಸವನ್ನು ಅತ್ಯಂತ ಸಮರ್ಥವಾಗಿ, ನಿಷ್ಠೆಯಿಂದ, ತ್ಯಾಗಮನೋಭಾವದಿಂದ, ಜವಾಬ್ದಾರಿಯುತವಾಗಿ 8 ವರ್ಷಗಳ ಅವಧಿವರೆಗೆ ನಿರ್ವಹಿಸಿದರು. ಯಾವಾಗಲೂ ನಗುಮುಖದಿಂದ, ಚಟುವಟಿಕೆಯಿಂದ ಮಾತಾಡುತ್ತಾ ಕಾರ್ಯನಿರ್ವಹಿಸುತ್ತಿದ್ದ ಕುಮಾರಸ್ವಾಮಿಯವರ ಅಗಲಿದ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ ಹಾಗೂ ಅವರ ಕುಟುಂಬದ ಜನರಿಗೆ ದುಃಖ ಭರಿಸುವ ಧೈರ್ಯವನ್ನು ನೀಡಲಿ ಎಂದು ಪ್ರಾರ್ಥಿಸಿದರು. ಕಾರ್ಯದರ್ಶಿ ಆಂಜನಿ ಗೌಡ, ಖಜಾಂಚಿ ಬಿ.ಎಸ್. ಮೇಟಿ, ಉಪಾಧ್ಯಕ್ಷ ಕೆ.ಐ. ಭಟ್, ಮಾಜಿ ಅಧ್ಯಕ್ಷ ಎನ್. ಜೆ. ಕಾಮತ್ ಹಾಗೂ ಇತರ ಶಾಲೆಯ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಮರ್ಪಿಸಿದರು.

ಅಭಿನಂದನೆ

# ರಕ್ಷಣಾ ಸಂಶೋಧನಾ ಕ್ಷೇತ್ರದ ಹಿರಿಯ ಪ್ರತಿಭಾ

*ಹಿರಿಯ ವಿಜ್ಞಾನಿ ಡಾ. ಪ್ರಹ್ಲಾದ್ ಅವರೊಡನೆ ಬೆಂಗಳೂರಿನಲ್ಲಿರುವ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಪ್ರಾದೇಶಿಕ (ದಕ್ಷಿಣ ವಲಯ) ಸಂಪರ್ಕಾಧಿಕಾರಿ ಜಯಪ್ರಕಾಶ್ ಪುತ್ತೂರು ಅವರು ಅಭಿಮತಕ್ಕಾಗಿ ವಿಶೇಷ ಸಂದರ್ಶನ ನಡೆಸಿದ್ದಾರೆ. ಸಂದರ್ಶನದ ವೇಳೆಯಲ್ಲಿ ಕೇಂದ್ರ ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಲ್ಲಿ ಮುಖ್ಯ ನಿಯಂತ್ರಕರಾಗಿ ಸೇವೆ ಸಲ್ಲಿಸುತ್ತಿದ್ದ ಡಾ. ಪ್ರಹ್ಲಾದ್ ಅವರು ಇದೀಗ ಪೂನಾದ Defence Institute of Advanced Technology (DIAT) ವಿಶ್ವ ವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡಿದ್ದಾರೆ. ಡಾ. ಪ್ರಹ್ಲಾದ್ ಅವರ ಉತ್ಕೃಷ್ಟ ಸೇವೆ ದೇಶದ ಹಿರಿಮೆಯನ್ನು ಉನ್ನತ ಮಟ್ಟಕ್ಕೇರಿಸಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.*



ಕರ್ನಾಟಕ ರಾಜ್ಯ ನಮ್ಮ ದೇಶದ ವಿವಿಧ ಕ್ಷೇತ್ರಗಳಿಗೆ ಅನೇಕ ಪ್ರತಿಭಾವಂತರುಗಳನ್ನು ನೀಡಿ ಯಾವತ್ತೂ ಉನ್ನತ ಸ್ಥಾನವನ್ನು ಅಲಂಕರಿಸಿರುವ ವಿಚಾರ ಎಲ್ಲರಿಗೆ ತಿಳಿದ ವಿಚಾರ. ಅದರಲ್ಲೂ ಅನೇಕ ಮೇಧಾವಿಗಳು ನಮ್ಮ ದೇಶದ ಕೇಂದ್ರ ಸ್ಥಾನ ನವದೆಹಲಿಯಲ್ಲಿ ಸದ್ದಿಲ್ಲದೆ ಕಾರ್ಯ ನಿರ್ವಹಿಸುತ್ತಾ, ತಾವು ಹುಟ್ಟಿದ ನಾಡು, ನುಡಿಗೆ ದೊಡ್ಡ ಗೌರವ ತಂದುಕೊಟ್ಟಿದ್ದಾರೆ. ಇಂತಹ ಶ್ರೇಷ್ಠ ದೆಹಲಿ ಕನ್ನಡಿಗರಲ್ಲಿ ಬೆಂಗಳೂರಿನ ಡಾ. ಪ್ರಹ್ಲಾದರ ಹೆಸರು ಪ್ರಥಮ ಸ್ಥಾನದಲ್ಲಿದೆ. ಅದರಲ್ಲಿಯೂ ವಿಜ್ಞಾನ ಸಂಶೋಧನಾ ಕ್ಷೇತ್ರದಲ್ಲಿ ಇವರು ಮಿನುಗು ತಾರೆ. ಪ್ರಸ್ತುತ ಕೇಂದ್ರ ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಲ್ಲಿ ಮುಖ್ಯ ನಿಯಂತ್ರಕರಾಗಿ ದೆಹಲಿಯ ಡಿ.ಆರ್. ಡಿ.ಒ. ಭವನದಲ್ಲಿ ಗಣನೀಯವಾದ ಸೇವೆ ಸಲ್ಲಿಸುತ್ತಿರುವ ಇವರ ಜೀವನ ಕಥೆ ಎಲ್ಲಾ ಯುವ ಜನರಿಗೆ ಆದರ್ಶಪ್ರಾಯವಾಗಿದೆ.

### ನಿಶ್ಚಿತ ಗುರಿಯ ವಿದ್ಯಾಭ್ಯಾಸದ ಪ್ರಯಾಣ

1947 ಬೆಂಗಳೂರಿನ ತೀರಾ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ ಶ್ರೀಯುತರ ತಂದೆ ರಾಮರಾಮ್ ಒಂದು ಖಾಸಗಿ ಸಂಸ್ಥೆಯಲ್ಲಿ ದುಡಿಯುತ್ತಾ ತಮ್ಮ ಮಕ್ಕಳನ್ನು ಶ್ರಮ ಮತ್ತು ಅಭಿಮಾನದಿಂದ ಬೆಳೆಸಿದವರು. ಹೈಸ್ಕೂಲು ಶಿಕ್ಷಣದಿಂದ ಸ್ನಾತಕೋತ್ತರ ಹಂತದವರೆಗೆ ಸ್ಕಾಲರ್‌ಶಿಪ್ ಗಳಿಕೆಯಿಂದಲೋ ಮೊದಲ ಶ್ರೇಣಿ ಅಂಕಗಳೊಂದಿಗೆ ಮುಗಿಸಿದ ಪ್ರಹ್ಲಾದ್ ಅವರ ಕಲಿಕೆಯ ಹಠಕ್ಕೆ ಮನೆಯ ಆರ್ಥಿಕ ಅಡಚಣೆಗಳು ಅಡ್ಡಿ ಬಂದಿರಲಿಲ್ಲ. ಪ್ರೈಮರಿ ಹಾಗೂ ಹೈಸ್ಕೂಲು ವಿದ್ಯಾಭ್ಯಾಸ ನಡೆದದ್ದೇ ಕನ್ನಡ ಮಾಧ್ಯಮದ ಸರಕಾರಿ ಶಾಲೆಗಳಲ್ಲಿ. ಮುಂದೆ 1969ರಲ್ಲಿ ಯುನಿವರ್ಸಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು ವಿಶ್ವವಿದ್ಯಾಲಯದಿಂದ ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪದವಿ ಪ್ರಾಪ್ತಿ. ಬೆಂಗಳೂರಿನ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಯಿಂದ ವೈಮಾನಿಕ ಇಂಜಿನಿಯರಿಂಗ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಗಳಿಕೆ. ಈ ಸ್ನಾತಕೋತ್ತರ ಪದವಿ ಶಿಕ್ಷಣದಲ್ಲಿ ಆಯ್ದುಕೊಂಡ ವಿಷಯ ರಾಕೆಟ್ ಹಾಗೂ ಕ್ಷಿಪಣಿ ವ್ಯವಸ್ಥಾಪನೆ ಆಗಿತ್ತು. ಮುಂದೆ ತಮ್ಮ ಸೇವಾವಧಿಯಲ್ಲಿ ವಿಶೇಷವಾಗಿ ತೊಡಗಿಸಿಕೊಂಡದ್ದು ಈ ವಿಶೇಷ ಕ್ಷೇತ್ರದಲ್ಲಿ ಆಗಿರುವುದು ನಿಜವಾಗಿಯೂ ಉಲ್ಲೇಖನೀಯ. ಮುಂದೆ ಹೈದರಾಬಾದ್‌ನ ಜವಾಹರಲಾಲ್ ನೆಹರೂ ತಾಂತ್ರಿಕ ವಿಶ್ವವಿದ್ಯಾಲಯದಿಂದ ಮೆಕಾನಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಪಿ.ಎಚ್.ಡಿ. ಗಳಿಕೆ. ಈ ವೇಳೆಯಲ್ಲಿಯೂ ಡಿ.ಆರ್.ಡಿ.ಒ. ಹಾಗೂ ಇಸ್ರೋ ಪ್ರಾಯೋಜಿತ ವಿದ್ಯಾರ್ಥಿ ಶಿಕ್ಷಣ ಯೋಜನೆಯ ಅನುದಾನ ಪಡೆದದ್ದು ವಿಶೇಷವೇ ಆಗಿತ್ತು.

### ಶಿಕ್ಷಣ ಹಾಗೂ ಸೇವೆಯಲ್ಲಿ ಸಾಮರಸ್ಯ

ಪ್ರತಿಷ್ಠಿತ ಶಿಕ್ಷಣದ ಹಿನ್ನಲೆಯಲ್ಲಿ 1971ರ ಬಳಿಕೆ ಇಸ್ರೋ ಹಾಗೂ ಡಿ.ಆರ್. ಡಿ.ಒ. ಸಂಸ್ಥೆಗಳ ವತಿಯಿಂದ ತಿರುವನಂತಪುರ, ವೈಮಾನಿಕ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಹಾಗೂ ರಕ್ಷಣಾ ಸಂಶೋಧನಾ ಪ್ರಯೋಗಾಲಯ, ಹೈದರಾಬಾದ್ ಮುಂತಾದೆಡೆ ಸಂಶೋಧನಾ ಕ್ಷೇತ್ರದಲ್ಲಿ ಪಾದಾರ್ಪಣೆ. ಪ್ರಥಮ ಹಂತದಲ್ಲಿಯೇ ಏರೋ ಡೈನಾಮಿಕ್ಸ್ ಹಾರಾಟ ನಿಯಂತ್ರಣ, ನಿರ್ದೇಶನ, ರಚನೆ ಹಾಗೂ ವಿನ್ಯಾಸ ವಿಭಾಗಗಳಲ್ಲಿ ಪರಿಣತಿ ಸಾಧಿಸುತ್ತಾ ಮುಂದೆ ಸಾಗಿದರು. 1997ರಲ್ಲಿ ಹೈದರಾಬಾದ್‌ನಲ್ಲಿರುವ ದೊಡ್ಡಮಟ್ಟದ ಪ್ರಯೋಗಾಲಯ ಡಿ.ಆರ್.ಡಿ.ಎಲ್.ನ (ಡಿಫೆನ್ಸ್ ರಿಸರ್ಚ್ ಡೆವಲಪ್‌ಮೆಂಟ್ ಲ್ಯಾಬೋರೆಟೋರಿ) ನಿರ್ದೇಶಕರಾಗಿ ಆಯ್ಕೆ. ಅಲ್ಲಿಂದ 2005ರವರೆಗೆ ರಾಕೆಟ್ ಹಾಗೂ ಕ್ಷಿಪಣಿ ತಂತ್ರಜ್ಞಾನ ಕ್ಷೇತ್ರದ ವಿವಿಧ ಕಾರ್ಯಕ್ರಮಗಳಿಗೆ ಸುತ್ತ್ಯಾರ್ಹ ನಾಯಕತ್ವ ಹಾಗೂ ಮಾರ್ಗದರ್ಶನ ನೀಡಿದ ಡಾ. ಪ್ರಹ್ಲಾದ್ ಮತ್ತೆ ಹಿಂದೆ ತಿರುಗಿ ನೋಡಲೇ ಇಲ್ಲ.

### ಯಶಸ್ಸಿನ ಹಾದಿಯಲ್ಲಿ ದಿಟ್ಟ ಹೆಜ್ಜೆ

ಭಾರತದ ರಕ್ಷಣಾ ತಂತ್ರಜ್ಞಾನ ಕ್ಷೇತ್ರದ 'ಆಕಾಶ್' ಕ್ಷಿಪಣಿ ಯೋಜನೆಯ



## ವಂತ ವಿಜ್ಞಾನಿ–ದೆಹಲಿ ಕನ್ನಡಿಗ ಡಾ. ಪ್ರಹ್ಲಾದ್

ಕಾರ್ಯಕ್ರಮ ನಿರ್ದೇಶಕರಾಗಿ ನಾಯಕತ್ವ ನೀಡಿದ ಇವರ ಸಾಧನೆಯಲ್ಲಿ 1000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಿಜ್ಞಾನಿಗಳು ಪಾಲ್ಗೊಂಡಿದ್ದಾರೆ. ಇದು ನಮ್ಮ ದೇಶದ ಸ್ವಾವಲಂಬನೆಯ ಹೆಜ್ಜೆಯಲ್ಲಿ ಮೂಡಿ ಬಂದ ತಂತ್ರಜ್ಞಾನವಾಗಿದ್ದು ಮುಂದೆ ಯಶಸ್ವಿಯಾಗಿ ಸೇನೆಗೆ ಸೇರ್ಪಡೆಗೊಂಡಿತು.

ಭಾರತದ–ರಷ್ಯಾ ದೇಶಗಳ ಸಹ ಭಾಗಿತ್ವದ ಯಶಸ್ವಿ ಯೋಜನೆ–'ಬ್ರಹ್ಮೋಸ್' ಕ್ಷಿಪಣಿ ಯೋಜನೆಯ ಪ್ರಥಮ ಕಾರ್ಯಕ್ರಮ ನಿರ್ದೇಶಕರಾಗಿ ಸುತ್ತ್ಯಾರ್ಹ ಸೇವೆ.

ನವೆಂಬರ್ 2005ರ ಬಳಿಕೆ ಡಿ.ಆರ್.ಡಿ.ಓ. ಸಂಸ್ಥೆಯ ಕೇಂದ್ರ ಕಛೇರಿ ದೆಹಲಿಯಲ್ಲಿ ವೈಮಾನಿಕ ಕ್ಷೇತ್ರ ಹಾಗೂ ಸಶಸ್ತ್ರ ಪಡೆ ಸಂಬಂಧ ವಿಭಾಗದ ಮುಖ್ಯ ನಿಯಂತ್ರಕರಾಗಿ ಕಾರ್ಯ ನಿರ್ವಹಣೆ.

ಈ ವಿಭಾಗದಲ್ಲಿ ದೇಶದ ಪ್ರಮುಖ ಯುದ್ಧ ಪರಿಕರಣಗಳಾದ ಯುದ್ಧ ವಿಮಾನ, ಚಾಲಕ ರಹಿತ ವಿಮಾನ, ವಿಮಾನ ಟರ್ಬೈನ್ ಯಂತ್ರಗಳು, ಹಾರಾಟ ವ್ಯವಸ್ಥೆ, ಮುಂತಾದ ವಿಶೇಷ ಕ್ಷೇತ್ರಗಳಲ್ಲಿ ವೈಜ್ಞಾನಿಕ ಮಾರ್ಗದರ್ಶನ ಕಾರ್ಯ ನಡೆಸುತ್ತಿರುವ ಡಾ. ಪ್ರಹ್ಲಾದ ಅವರನ್ನು ಪ್ರಶಸ್ತಿ ಪುರಸ್ಕಾರಗಳು ಅರಸಿಕೊಂಡು ಬಂದಿದೆ ಎಂದರೆ ತಪ್ಪಾಗಲಾರದು.

### ಪ್ರಶಸ್ತಿ ಪುರಸ್ಕಾರಗಳ ಸರಮಾಲೆ

* ಡಿ.ಆರ್.ಡಿ.ಓ. ವರ್ಷದ ವಿಜ್ಞಾನಿ ಪ್ರಶಸ್ತಿ
* ಡಿ.ಆರ್.ಡಿ.ಓ. ತಂತ್ರಜ್ಞಾನ ಪ್ರಗತಿ ಪಥ ಮಾರ್ಗದರ್ಶನ ರಾಷ್ಟ್ರೀಯ ಪುರಸ್ಕಾರ
* ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ ದೆಹಲಿ ಕೇಂದ್ರದ ಪ್ರಶಸ್ತಿ.
* ಹೈದರಾಬಾದ್ ಮ್ಯಾನೇಜ್‌ಮೆಂಟ್ ಅಸೋಸಿಯೇಶನ್–ಜೀವಮಾನ ಸಾಧಕ ಪ್ರಶಸ್ತಿ.
* ವೆಂಕಟೇಶ್ವರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪುರಸ್ಕಾರ.
* ದೇಶದ ಪ್ರತಿಷ್ಠಿತ ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳಲ್ಲಿ ಗೌರವ ಸದಸ್ಯತ್ವ.
* ವಿವಿಧ ಸಂಶೋಧನಾ ಮಂಡಳಿಗಳಲ್ಲಿ ಹಲವು ಜವಾಬ್ದಾರಿಯುತ ಹುದ್ದೆಗಳ ಸಮರ್ಥ ನಿರ್ವಹಣೆ.

### ಕಾರ್ಯನಿಮಿತ್ತರಾಗಿ ರಕ್ಷಣಾ ಇಲಾಖೆ ವತಿಯಿಂದ ಜಗತ್ತಿನಾದ್ಯಂತ ವಿವಿಧ ರಾಷ್ಟ್ರಗಳ ಸಂದರ್ಶನ

ಸೇವಾವಧಿಯಲ್ಲಿ ಪ್ರೊ. ಧಾವನ್ ಹಾಗೂ ಡಾ. ಕಲಾಂ ಅವರುಗಳಂತಹ ಮಹಾಪುರುಷರ ಸಾಂಗತ್ಯ ಹಾಗೂ ಮಾರ್ಗದರ್ಶನ ಭಾಗ್ಯ.

ಡಾ. ಪ್ರಹ್ಲಾದರ ಪತ್ನಿ ಶ್ರೀಮತಿ ಇಂದಿರಾ ಅತ್ಯಂತ ಚಟುವಟಿಕೆಯ ವ್ಯಕ್ತಿ ಆಗಿದ್ದು, ಮಗಳು ಶೃತಿ, ಅಳಿಯ ದೀಪಕ್ ಇರ್ವರೂ ಸಾಫ್ಟ್‌ವೇರ್ ತಂತ್ರಜ್ಞಾನ ಸೇವೆಯಲ್ಲಿದ್ದಾರೆ. ಇವರ ಮುದ್ದಾದ ಮಗ ಧ್ರುವ್ ಒಳಗೊಂಡಂತೆ ಇದೊಂದು ಆದರ್ಶ, ಸುಖಮಯ ಕುಟುಂಬ, ಇದೀಗ ಬೆಂಗಳೂರಿನಲ್ಲಿ ನೆಲಸಿದ್ದಾರೆ.

### ನಾಡಿನ ಯುವ ಜನತೆಗೆ ಪ್ರಹ್ಲಾದರ ಕಿವಿಮಾತು

ಜೀವನ ಸಾಧನೆಯಲ್ಲಿ ದೊಡ್ಡ ಗುರಿ ಇರಲಿ. ಸಾಂಘಿಕ ಶ್ರಮ ಹಾಗೂ ಶಿಸ್ತುಬದ್ಧವಾದ ಸೇವೆ ಸದಾ ಬಾಳಿನ ಮಂತ್ರವಾಗಿರಬೇಕು. ಕಾರ್ಯ ಸಾಧನೆ ವೇಳೆ ಯಾವತ್ತೂ ಒಂದು ನಿರ್ದಿಷ್ಟ ವೇಳೆಯೊಂದಿಗೆ ಸಫಲತೆಗಾಗಿ, ಖಚಿತ ಸಮಯ ನಿರ್ವಹಣೆ ಅತ್ಯಗತ್ಯ ಎನ್ನುತ್ತಾರೆ ಕನ್ನಡಿಗ ಡಾ. ಪ್ರಹ್ಲಾದ್. ಕರ್ನಾಟಕ ಸರಕಾರ, ಹೊರ ರಾಜ್ಯಗಳಲ್ಲಿ ವಿಶೇಷ ಸಾಧನೆ ಮಾಡಿರುವ ಶ್ರೇಷ್ಠ ಕನ್ನಡಿಗರನ್ನು ಗುರುತಿಸುವ ಹಾಗೂ ಅವರ ಪರಿಶ್ರಮ, ಜ್ಞಾನಗಳನ್ನು ಕರ್ನಾಟಕದ ಶೈಕ್ಷಣಿಕ ಹಾಗೂ ವಿವಿಧ ಸಾರ್ವಜನಿಕ ಸಂಸ್ಥೆಗಳಲ್ಲಿ ಬಳಸಿಕೊಳ್ಳುವ ಕಾರ್ಯಕ್ರಮ ನಿರೂಪಿಸಬೇಕಾಗಿದೆ ಎಂಬುದು ಅಪ್ಪಟ ಕನ್ನಡಿಗ ಡಾ. ಪ್ರಹ್ಲಾದ್ ಅವರ ಅಭಿಮತ.

ಡಾ. ಅಬ್ದುಲ್ ಕಲಾಂ ಅವರಂತಹ ನಾಯಕರ ಗರಡಿಯಲ್ಲಿ ಬೆಳೆದಿರುವ ಡಾ. ಪ್ರಹ್ಲಾದ ಅವರಿಗೆ ಭಾರತ ವೈಜ್ಞಾನಿಕವಾಗಿ ಮುಂದುವರಿದು ಸ್ವಾವಲಂಬನೆ ಪಡೆಯಬೇಕೆಂಬ ಉತ್ಕಟ ಆಶಯ ಇದೆ ಹಾಗೂ ಈಗಿನ ಯುವ ಜನಾಂಗದ ಮೇಲೆ ಅಪರಿಮಿತವಾದ ಭರವಸೆ ಹಾಗೂ ಅಭಿಮಾನ ಹೊಂದಿದ್ದಾರೆ. ಮುಖ್ಯವಾಗಿ ಎಲ್ಲರೂ ತಮ್ಮ ಕಾರ್ಯಗಳಲ್ಲಿ ಕಾರ್ಯಕ್ಷಮತೆ ಹೊಂದುತ್ತಾ ಗುರಿಯತ್ತ ಸಾಗುವಲ್ಲಿ ದೇಶ ಪ್ರೇಮ ಸದಾ ಹೊಂದಿರಬೇಕು. ಕಠಿಣ ಶ್ರಮ ಹಾಗೂ ಕಷ್ಟ ಗಣನೆಗೆ ಬಾರದೆ, ವೃತ್ತಿ ಎಂಬುದು ಎಲ್ಲರೂ ಇಷ್ಟಪಡುವ ಮಜಲು ಆಗಿ ಆತ್ಮ ಸಂತೋಷ ನೀಡುತ್ತದೆ. ಈ ಪ್ರವೃತ್ತಿ ಬೆಳೆಯುತ್ತಾ ಹೋದಲ್ಲಿ ನಮ್ಮ ರಾಷ್ಟ್ರ ಸದಾ ಅಭಿವೃದ್ಧಿಯ ಮುಂಚೂಣಿಯಲ್ಲಿ ಮೆರೆಯುತ್ತದೆ ಎಂದು ಡಾ. ಪ್ರಹ್ಲಾದ್ ವಿನಮ್ರತೆಯಿಂದ ನುಡಿಯುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಪ್ರಹ್ಲಾದ ಅವರಂತಹ ಸಂಖ್ಯೆ ನಮ್ಮ ದೇಶದಲ್ಲಿ ಹೆಚ್ಚಿ, ಹೆಚ್ಚೆಚ್ಚು ಪ್ರತಿಭಾವಂತರು ವಿದೇಶಗಳಿಗೆ ಕಡೆ ನೋಡದೆ ನಮ್ಮ ದೇಶವನ್ನೇ ಕಾರ್ಯ ಭೂಮಿ ಆಗಿ ಆಯ್ಕೆ ಮಾಡಿ, ಭಾರತ ದೇಶವನ್ನು ಸುದೃಢವಾಗಿ ಕಟ್ಟುವಲ್ಲಿ ಕಾರಣೀಭೂತರಾಗಬೇಕು ಎಂಬ ವಿಚಾರ ಎಲ್ಲರೂ ಒಪ್ಪತಕ್ಕದ್ದೇ ಆಗಿದೆ.

**❑ ಜಯಪ್ರಕಾಶ್ ಪುತ್ತೂರು**




ಕಥೆ

# ಪ್ರೊಫೆಸರ್ ನಾಥಮುನಿ ಅವರನ್ನು ಇಂದು ಬೆಳಿಗ್ಗೆ ಶಿಲುಬೆಗೇರಿಸಲಾಯಿತು



ಎಂದಿನಂತೆ ಅಂದೂ ಬೆಳಗಾಯಿತು. ಆದರೆ ಪ್ರೊಫೆಸರ್ ನಾಥಮುನಿಯವರ ದಿನ ಕತ್ತಲಲ್ಲೇ ಆರಂಭವಾಗಿತ್ತು.

ಇದೇನೂ ಹೊಸದಲ್ಲ ಬಿಡಿ. ಅರವತ್ತು ಸಮೀಪಿಸಿದ್ದ ಪ್ರೊಫೆಸರ್ ನಾಥಮುನಿ ದಿನವೂ ಏಳುವುದು ಬೆಳಿಗ್ಗೆ ನಾಲ್ಕು ಗಂಟೆಗೆ, ಹೆಚ್ಚೆಂದರೆ ನಾಲ್ಕೂವರೆಯ ಒಳಗೆ. ಆಗೊಮ್ಮೆ ಈಗೊಮ್ಮೆ ರಾತ್ರಿ ಬರೆಯಲಾರಂಭಿಸಿದ ಕಥೆ ರೆಕ್ಕೆಪುಕ್ಕ ಕಟ್ಟಿಕೊಂಡು ಕನಸಲ್ಲೆಲ್ಲಾ ಹಾರಾಡಿ ಕಾಡಿ ಇನ್ನು ಹಿಡಿದಿಡಲಾಗದು ಎಂಬಂತೆ ಕಟ್ಟಿಕೊಂಡ ಮೂತ್ರಕೋಶದಂತೆ ನಿದ್ದೆಯಿಂದ ಗಕ್ಕನೆಬ್ಬಿಸಿಬಿಟ್ಟಾಗ ಕಂಪ್ಯೂಟರ್ ಮುಂದೆ ಕೂತು ಕಣ್ಣು ಮುಚ್ಚಿಕೊಂಡೇ ಕುಟ್ಟತೊಡಗುವ ನನಗೂ, ಪರೀಕ್ಷೆಗಳಿದ್ದರೆ ಬೇಗನೆ ಎದ್ದು ಓದಿಕೊಳ್ಳುವ ಮಗಳಿಗೂ, ನಮ್ಮಿಬ್ಬರಲ್ಲಿ ಒಬ್ಬರು ಎದ್ದರೂ ಇನ್ನು ಮಲಗೇ ಇರಲು ತನಗೆ ಸಾಧ್ಯವೇ ಇಲ್ಲವೆನ್ನುತ್ತಾ ತಾನೂ ಎದ್ದು ಕಾಫಿ ಮಾಡಿ ನಮಗೂ ಕೊಟ್ಟು ತಾನೂ ಒಂದೊಂದೇ ಗುಟುಕು ಹೀರುತ್ತಾ ಕೊನೇಪಕ್ಷ ಅರ್ಧಗಂಟೆ ಮೌನವಾಗಿ ಪಕ್ಕ ಕೂರುವ ಲಲಿತೆಗೂ ಪ್ರೊಫೆಸರರ ಈ ದಿನಚರಿ ಹಲವು ವರ್ಷಗಳಿಂದ ಪರಿಚಯ. ಅವರ ಅಡಿಗೆಮನೆ, ಊಟದ ಮನೆ ಮತ್ತು ದಿವಾನಖಾನೆಗಳಲ್ಲಿ ನಡೆಯುವುದೆಲ್ಲವನ್ನೂ ಪರದೆಗಳಿಲ್ಲದ ಅವರ ವಿಶಾಲ ಕಿಟಕಿಗಳು ನಮಗೆ ಢಾಳಾಗಿ ತೋರಿಸುತ್ತವೆ.

ಪ್ರೊಫೆಸರ್ ನಾಥಮುನಿ ತತ್ವಶಾಸ್ತ್ರವನ್ನು ಬೋಧಿಸುತ್ತಾರೆ. ತರಗತಿಯ ಹೊರಗೆ ಹೆಚ್ಚು ಮೌನವಾಗಿರುತ್ತಾರೆ. ಹೆಚ್ಚಾಗಿ ಯಾರ ಜತೆಯೂ ಬೆರೆಯುವುದಿಲ್ಲ. ಹಾಗಂತ ಅವರಿಗೆ ಸಾರಾಸಗಟಾಗಿ ಡಿಜಛಿಟಣಜ ಎಂಬ ಹಣೆಪಟ್ಟಿಯನ್ನು ಅದು ಈಗ ಪಡೆದುಕೊಂಡಿರುವ ನಕಾರಾತ್ಮಕ ಅರ್ಥದೊಂದಿಗೇ ಹಚ್ಚಿಬಿಟ್ಟರೆ ಅನ್ಯಾಯವಾಗುತ್ತದೆ. ಮನೆ ಮುಂದಿನ ಗಾರ್ಡನ್‌ನಲ್ಲಿ ಅಥವಾ ಕಿಟಕಿಗಳಲ್ಲಿ ನೇರವಾಗಿ ಎದುರಾದಾಗ ಸಣ್ಣಗೆ ತುಟಿಯರಳಿಸುತ್ತಾರೆ. ಒಬ್ಬಳು ಹೆಂಡತಿ ಒಬ್ಬಳು ಮಗಳಿರುವ ನನ್ನ ಪುಟ್ಟ ಸಂಸಾರವಿರಲಿ ಕೊಂಚ ಅಡ್ಜಸ್ಟ್ ಮಾಡಿಕೊಂಡರೆ ಕರುಣಾನಿಧಿಯವರ ಎಕ್ಸ್‌ಟೆಂಡೆಡ್ ಫ್ಯಾಮಿಲಿಗೂ ಸಾಕಾಗಬಹುದಾದ ಯೂನಿವರ್ಸಿಟಿಯ "ಟೈಪ್ ಇ" ಸ್ಟ್ಯಾಫ್ ಕ್ವಾರ್ಟರ್ಸ್‌ನಲ್ಲಿ ಒಬ್ಬರೇ ಇದ್ದಾರೆ. ಹೆಂಡತಿ ಗುಜರಾತಿನ ಯಾವುದೋ ಊರಿನ ಯಾವುದೋ ಕಾಲೇಜಿನಲ್ಲಿ ಪ್ರೊಫೆಸರ್ ಅಂತೆ. ಆಕೆಯ ಬಗ್ಗೆ ನಾಥಮುನಿ ನಮಗೆ ಹೇಳಿದ್ದು ಒಂದೇ ಬಾರಿ. ಹಾಗೆ ಹೇಳಿಹೋದ ಎರಡು ನಿಮಿಷಗಳಲ್ಲಿ ಆಯಮ್ಮ ಬೋಧಿಸುವುದು ಜಿಯಾಲಜಿಯೋ ಅಥವಾ ಜೂಆಲಜಿಯೋ ಎಂದು ನನಗೂ ಲಲಿತೆಗೂ ಗೊಂದಲವಾಗಿತ್ತು. ಜಿಯಾಲಜಿ ಎಂದು ನಾನು ಹೇಳಿದರೆ ಇಲ್ಲಾರೀ, ಜೂಆಲಜಿ ಎಂದು ಲಲಿತೆ ವಾದಿಸಿದಳು. 'ಕಲ್ಲುಮಣ್ಣು ಹಿಡ್ಕೊಂಡು ಮೈಕೈ ತರಚ್ಕೊಂಡು ಬಟ್ಟೇನೆಲ್ಲಾ ಕೊಳೆ ಮಾಡ್ಕೊಂಡು ಓಡಾಡೋದು ಹೆಂಗಸರ ಕೈಲಿ ಆಗುತ್ತಾ? ಕಪ್ಪೆ ಜಿರಳೆ ಕತ್ತರಿಸ್ಕೊಂಡು ಒಂದ್ಕಡೆ ಕೂರೋದು ಸುಲಭ ಅವರಿಗೆ. ನಿಮಗೇನು ಗೊತ್ತಾಗುತ್ತೆ ಹೆಂಗಸರ ವಿಷಯ' ಎಂದು ಗೂಗ್ಲಿ ಉರುಳಿಸಿ ನನ್ನ ಬಾಯಿ ಮುಚ್ಚಿಸಿದ್ದಳು. ಕಪ್ಪೆ ಜಿರಲೆ ಇರಲಿ, ಆಯಮ್ಮ ನಾಯಿ ನರಿಯನ್ನಾದರೂ ಕತ್ತರಿಸಲಿ, ನನಗೇನು ಅಂದುಕೊಂಡು ನಾನು ಸುಮ್ಮನಾದೆ. ಆಕೆಯ ಬಗ್ಗೆ ಸ್ವತ: ನಾಥಮುನಿಯವರೇ ತಲೆ ಕೆಡಿಸಿಕೊಂಡ ಹಾಗೆ ಕಾಣುವುದಿಲ್ಲ.

ಪ್ರೊಫೆಸರರಿಗೆ ಮಕ್ಕಳಿದ್ದಾವೆಯೇ ಎನ್ನುವುದು ಇಡೀ ಕ್ಯಾಂಪಸ್ಸಿನಲ್ಲಿ ಒಂದು ನರಪಿಳ್ಳೆಗೂ ಗೊತ್ತಿಲ್ಲ. ನನಗೂ ಗೊತ್ತಿಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹೀಗಾಗಿ ಗೊತ್ತಿಲ್ಲದ್ದರ ಬಗ್ಗೆ ಮಾತಾಡುತ್ತಾ ಸಮಯ ಕಳೆಯುವುದು ಬೇಡ. ನೇರವಾಗಿ ವಿಷಯನ್ನು ಎತ್ತಿಕೊಳ್ಳೋಣ.

ಎಲ್ಲಾ ಶುರುವಾದದ್ದು ಆರು ದಿನಗಳ ಹಿಂದೆ, ಸೋಮವಾರ ಸಾಯಂಕಾಲ. ಎಂದಿನಂತೆ ಅಂದೂ ಐದೂವರೆಯ ಹೊತ್ತಿಗೆ ಮನೆಗೆ ಬಂದೆ. ಮನೆಯಲ್ಲಿ ತುಂಬಾ ಬೆಳ್ಳಗಿದ್ದ ದಪ್ಪ ಹೆಂಗಸೊಬ್ಬಳು ಲಲಿತೆಯ ಜತೆ ಮಾತಾಡುತ್ತಾ ಕುಳಿತಿದ್ದಳು. ಕೂತಂತೇ ಕೈಜೋಡಿಸಿ ನನಗೆ ನಮಸ್ತೇ ಹೇಳಿದಳು. ಹಿಂದೆಂದೂ ಅವಳನ್ನು ನೋಡಿದ ನೆನಪು ನನಗಿರಲಿಲ್ಲ. ಲಲಿತೆಯ ಹೊಸ ಗೆಳತಿಯಿರಬೇಕೆಂದುಕೊಂಡು ಅವಳಿಗೆ ಔಪಚಾರಿಕವಾಗಿ ನಮಸ್ತೇ ಹೇಳಿ ಶೂಸ್ ಸಾಕ್ಸ್ ಬಿಚ್ಚಿ ಅವುಗಳನ್ನು ಅವುಗಳ ಸ್ಥಾನದಲ್ಲಿ ಎಂದಿಗಿಂತ ನೀಟಾಗಿಟ್ಟು ಹೊಸಬರೆದುರು ಒಳ್ಳೆಯ ಹುಡುಗನಂತೆ ತಲೆತಗ್ಗಿಸಿ ಒಳಕೋಣೆಗೆ ನಡೆದೆ. ಬಟ್ಟೆ ಬದಲಿಸುತ್ತಿದ್ದಂತೇ ಲಲಿತೆ ಒಳಗೆ ಬಂದಳು. ಅದ್ಯಾರು ಗೊತ್ತಾ ಅಂದಳು. ನನಗೆ ಗೊತ್ತಿಲ್ಲ ಅನ್ನುವುದು ಅವಳಿಗೆ ಗೊತ್ತೇ ಇತ್ತು. ನನ್ನ ಉತ್ತರಕ್ಕೆ ಕಾಯದೇ "ಮಿಸೆಸ್ ನಾಥಮುನಿ" ಅಂದಳು. ಬೆಲ್ಟ್ ಬಿಚ್ಚುತ್ತಿದ್ದಂತೇ ಆಸರೆ ತಪ್ಪಿದ ಪ್ಯಾಂಟ್ ಕೆಳಗೆ ಕುಸಿದು ಕಾಲುಗಳಿಗೆ ಅವಚಿಬಿದ್ದದ್ದು ಗಮನಕ್ಕೇ ಬರದೇ ಲಲಿತೆಯನ್ನೇ ಬೆರಗುಹತ್ತಿ ನೋಡುತ್ತಿದ್ದೇನೆಂದು ಅರಿವಿಗೆ ಬಂದದ್ದು ಅವಳು ನನ್ನ 'ಅಂದರ್'ವೇರ್ ಅನ್ನು ಹಿಡಿದೆಳೆದು ಕಿಸಕ್ಕನೆ ನಕ್ಕು ಹಗ್ಗದಲ್ಲಿದ್ದ ಲುಂಗಿಯನ್ನು ಸೆಳೆದು ನನ್ನ ಮುಂದೆ ಅಲ್ಲಾಡಿಸಿದಾಗ. ಪೆದ್ದುಪೆದ್ದಾಗಿ ನಕ್ಕವನಿಗೆ "ಬೇಗ ಬಟ್ಟೆ ಬದಲಾಯಿಸ್ಕೊಂಡು ಬನ್ರೀ. ಕಥೆ ಹೇಳ್ತೀನಿ" ಎಂದು ಹೇಳಿ ಹೊರಗೆ ನಡೆದಳು.

ಲುಂಗಿಯನ್ನು ಸುತ್ತಿಕೊಂಡು ಬಾತ್‌ರೂಮಿಗೆ ಓಡಿ ಕೈಕಾಲು ತೊಳೆದ ಶಾಸ್ತ್ರ ಮಾಡಿ ಡ್ರಾಯಿಂಗ್ ರೂಮಿಗೆ ಗೂಳಿಯಂತೆ ನುಗ್ಗಿದೆ. ಕೈಗೆ ಚಹಾದ ಲೋಟವನ್ನಿತ್ತ ಲಲಿತೆ ಮಾತು ತೆಗೆದಳು:

"ಈ ನಾಥಮುನಿವಯ್ಯ ಅದೇನೋ ಸೆಮಿನಾರ್ ಅಂತ ಬನಾರಸ್ ಹಿಂದೂ ಯೂನಿವರ್ಸಿಟಿಗೆ ಹೋಗಿದ್ದಾರಂತೆ. ನಿಮಗೇನಾದರೂ ಗೊತ್ತಾ?"

"ಇಲ್ಲವಲ್ಲ? ಅವನು ಮನೇಲಿಲ್ಲ ಅನ್ನೋದೇ ನಂಗೊತ್ತಿಲ್ಲ. ಇಂಥಾ ಕಡೆ ಹೋಗ್ತೀನಿ ಅಂತ ಅದ್ಯಾವತ್ತು ಹೇಳಿ ಹೋಗಿದ್ದಾನೆ ಅಂವ?"

ಇರ್ಲಿ ಬಿಡಿ. ನಂಗೂ ಗೊತ್ತಿರ್ಲಿಲ್ಲ, ಈಯಮ್ಮ ಬಂದು ಹೇಳೋವರೆಗೆ."

"ಸರಿ. ವಿಷಯ ಏನು?" ಲುಂಗಿಯ ಗಂಟನ್ನು ಬಿಗಿ ಮಾಡಿಕೊಂಡೆ.

"ವಿಷಯ ಸ್ವಲ್ಪ ಗಂಭೀರವಾಗೇ ಇದೆ. ಅದ್ಯಾಕೋ ನಮ್ಮ ಕಾಲಿಗೇ ಸುತ್ತಿಕೊಳ್ಳೋ ಥರಾನೇ ಕಾಣ್ತಿದೆ."

ನನಗೆ ಆತಂಕವಾಯಿತು. ಬಾಯಲ್ಲಿದ್ದ ಚಹಾವನ್ನು ಒಳಗಿಳಿಸುವುದನ್ನೇ ಮರೆತು ಅವಳನ್ನೇ ದಿಟ್ಟಿಸಿದೆ.

"ನಿನ್ನೆ ರಾತ್ರಿ ಅಂತೆ ಆತ ಬನಾರಸ್‌ಗೆ ಹೋದದ್ದು. ಈಯಮ್ಮ ಮಧ್ಯಾಹ್ನದ ಫ್ಲೈಟ್ ಹಿಡಿದು ಇಲ್ಲಿಗೆ ಬಂದಿದ್ದಾಳೆ. ಆತ ಇಲ್ಲಿ ಇಲ್ಲದಾಗಲೇ ಬರಬೇಕು ಅಂತ ಪ್ಲಾನ್ ಹಾಕಿಯೇ ಬಂದಿರೋಹಾಗಿದೆ."

"ವಿಷಯ ಏನು?"

"ಗಂಡನ ಮೇಲೆ ಅನುಮಾನ. ತನ್ನನ್ನ ಅಲ್ಲಿ ದೂರದಲ್ಲಿ ಬಿಟ್ಟು ಇವನು ಇಲ್ಲಿ ಏನೋ ಹರಕತ್ ನಡೆಸ್ತಾ ಇದ್ದಾನೆ ಅಂತ ಗುಮಾನಿ."

ನನಗೆ ವಿಷಯದ ಎಳೆ ಸಿಕ್ಕಿತು.

"ಹಂಗೇನಿರಲ್ಲ. ಪಾಪದ ಪ್ರಾಣಿ ಅದು."

"ನಾನೂ ಅದೇ ಹೇಳ್ದೆ. ಆಯಮ್ಮ ನಂಬ್ಲಿಲ್ಲ. ನೀವು ಸ್ವಲ್ಪ ಗಮನ ಇಡಿ ಅಂತಂದ್ಲು. ಫೋನ್ ನಂಬರ್ ತಗೊಂಡ್ಲು. ಆಗಾಗ ಫೋನ್ ಮಾಡ್ತೀನಿ, ವಿಷಯ ಹೇಳಿ ಅಂದ್ಲು. ತನ್ನ ನಂಬರನ್ನೂ ಕೊಟ್ಟಿದ್ದಾಳೆ."

"ಯಾವ್ದಾದ್ರೂ ಪ್ರೈವೇಟ್ ಡಿಟೆಕ್ಟಿವ್‌ನ ಹಿಡಿ ಅನ್ನು. ನಮಗೇನು ಬೇರೆ ಕೆಲಸ ಇಲ್ವಾ?"

"ನಾನೂ ಹಾಗೇ ಅಂದ್ಕೊಂಡೆ."

ನಾವಿಬ್ಬರೂ ಹಾಗೆ ಅಂದುಕೊಂಡಿದ್ದೇನೋ ಆಯಿತು. ಆದರೆ ಮಿಸೆಸ್ ನಾಥಮುನಿ ನಮ್ಮ ಮನೆಗೆ ಬಂದುಹೋದದ್ದು ಸುತ್ತಲ ಎಲ್ಲರ ಗಮನಕ್ಕೂ ಬಂದು ಆ ಸಂಜೆ ಮತ್ತು ಮಾರನೆಯ ಬೆಳಿಗ್ಗೆ ನಾವು ಸುತ್ತಲ ಹತ್ತು ಮನೆಗಳ ಹಿರಿಕಿರಿಯರೆಲ್ಲರಿಗೂ ವಿವರಣೆ ನೀಡಬೇಕಾಯಿತು. ಕೊನೆಗೆ ನಾಥಮುನಿಯ

ಇಲ್ಲದ ಹರಕತ್ ಬಗ್ಗೆ ನಾವೇ ಅಪಪ್ರಚಾರ ಮಾಡುತ್ತಿದ್ದೇವೆಂದೆನಿಸಿ ಬೇಜಾರಾಯಿತು. ಆಮೇಲೆ ಯಾರು ಏನು ಕೇಳಿದರೂ ನಮಗೇನೂ ಗೊತ್ತಿಲ್ಲ, ಆಯಮ್ಮನ್ನೇ ಕೇಳಿ ಅನ್ನತೊಡಗಿದೆವು. ನಮ್ಮ ದುರದೃಷ್ಟಕ್ಕೆ ಮಿಸೆಸ್ ನಾಥಮುನಿ ನಮ್ಮ ಮನೆಯನ್ನು ಬಿಟ್ಟು ಬೇರಾವ ಮನೆಗೂ ಹೋಗಿರಲಿಲ್ಲ. ಅಲ್ಲದೇ ನಾಥಮುನಿಯ ಮನೆಯಲ್ಲೂ ಉಳಿದುಕೊಳ್ಳಲಿಲ್ಲ. ಬೀಗದ ಕೈ ಇರಲಿಲ್ಲವೋ ಅಥವಾ ಬೇರಾವ ಕಾರಣವೋ ಗೊತ್ತಿಲ್ಲ. ನಮ್ಮ ಮನೆಯಿಂದ ಹೊರಟವಳು ಅದೆಲ್ಲಿ ಹೋದಳು ಅಂತಲೇ ಗೊತ್ತಾಗಲಿಲ್ಲ.

ನಾಥಮುನಿ ಹೋದದ್ದು ಮೂರು ದಿನಗಳ ಸೆಮಿನಾರಿಗಿರಬೇಕು, ಬುಧವಾರ ರಾತ್ರಿ ನಾವು ಉಂಡು ಮಲಗುವ ಹೊತ್ತಿಗೆ ಟ್ಯಾಕ್ಸಿಯಲ್ಲಿ ಬಂದು ಮನೆಯ ಮುಂದಿಳಿದದ್ದು ಕಂಡು ಅದೇನೋ ಹೇಳಲಾಗದ ನೆಮ್ಮದಿಯಾಯಿತು. ಆದರೆ ಆ ನೆಮ್ಮದಿ ಹೆಚ್ಚು ಹೊತ್ತು ಉಳಿಯಲಿಲ್ಲ.

ಲಲಿತೆ ದೀಪವಾರಿಸಿ ಹಾಸಿಗೆ ಸೇರುತ್ತಿದ್ದಂತೇ ಅವಳ ಫೋನ್ ಹೊಡೆದುಕೊಂಡಿತು. ನೋಡಿದರೆ ಮಿಸೆಸ್ ನಾಥಮುನಿ. ನನ್ನತ್ತ ನೋಡಿ ಲಲಿತೆ ಸ್ಪೀಕರ್ ಆನ್ ಮಾಡಿದಳು.

"ಹಲೋ. ನಮಸ್ತೇ ಮೇಡಂ."

"ಹಲೋ. ನಾನು ಮಿಸೆಸ್ ನಾಥಮುನಿ. ಜಾಮ್‌ನಗರ್‌ನಿಂದ ಮಾತಾಡ್ತಿದೀನಿ."

"ಗೊತ್ತಾಯ್ತು ಗೊತ್ತಾಯ್ತು. ಚೆನ್ನಾಗಿದ್ದೀರಾ?"

"ಚಂದ ಎಲ್ಲಿ ಬಂತು? ಅವರು ಈಗ ಮನೆಗೆ ಬಂದರು ಅಲ್ಲವಾ? ಒಬ್ಬರೇ ಬಂದರಾ? ಅಥವಾ ಜತೇಲಿ ಯಾರಾದರೂ..."

"ಒಬ್ರೇ ಬಂದದ್ದು. ಈಗ ಒಬ್ರೇ ಕೂತುಕೊಂಡು ಬ್ರೆಡ್ ತಿಂತಾ ಇದಾರೆ. ಕಿಟಕೀನಲ್ಲಿ ಕಾಣಿಸ್ತಾ ಇದೆ."

"ನಿಜವಾಗ್ಲೂ ಒಬ್ರೇ ಇದಾರಾ?"

"ನಿಜವಾಗಲೂ ಒಬ್ರೇ. ನಾ ಯಾಕೆ ಸುಳ್ಳು ಹೇಳಲಿ? ಡೈನಿಂಗ್ ಟೇಬಲ್ ಮೇಲಿರೋದು ಒಂದೇ ತಟ್ಟೆ."

"ಅವಳು ಕಿಚನ್‌ನಲ್ಲೋ ಬೆಡ್‌ರೂಂನಲ್ಲೋ ಅಡಗಿ ಕೂತು ಬಾರಿಸ್ತಾ ಇರಬೇಕು. ಲೈಟ್ ಆರಿಸಿದ ಮೇಲೆ ಹೊರಗೆ ಬರ್ತಾಳೆ. ನೋಡ್ತಾ ಇರಿ."

ಏನು ಹೇಳಬೇಕೆಂದು ತೋಚದೇ ಲಲಿತೆ ನನ್ನತ್ತ ಪೆಚ್ಚಾಗಿ ನೋಡುತ್ತಿದ್ದಂತೇ ಲೈನ್ ಕಟ್ಟಾಯಿತು.

ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ. ಲಲಿತೆಯೂ ಹೊರಳಾಡುತ್ತಿದ್ದಳು.

ಬೆಳಿಗ್ಗೆ ಮನೆ ಮುಂದಿನ ಗಾರ್ಡನ್‌ನಲ್ಲಿ ನಾಥಮುನಿ ಕಾಣಿಸಿಕೊಂಡು ಸಣ್ಣಗೆ ತುಟಿಯರಳಿಸಿದ. ಅವನ ಬಲಗೈನ ಹೆಬ್ಬೆರಳಿಗೆ ಬ್ಯಾಂಡೇಜ್ ಸುತ್ತಿತ್ತು. "ಏನಾಯ್ತು?" ಅಂದೆ. ಅವನು ಉತ್ತರಿಸಲಿಲ್ಲ. ನಾನು ಒತ್ತಾಯಿಸಲಿಲ್ಲ. ಆತ ಮತ್ತೊಮ್ಮೆ ಸುಮ್ಮನೆ ನಕ್ಕು ಒಳಗೆ ಹೋಗುತ್ತಿದ್ದಂತೇ ಎದುರು ಮನೆಯ ನಂದಕಿಶೋರ್ ಕಾಣಿಸಿಕೊಂಡು ನನ್ನತ್ತ ಪ್ರಶ್ನಾರ್ಥಕವಾಗಿ ನೋಡಿದ. ನಾನು ಸಣ್ಣಗೆ ಮುಗುಳ್ನಕ್ಕೆ. ಮುಂದಿನ ಎರಡು ನಿಮಿಷಗಳಲ್ಲಿ ಸುತ್ತಲ ಹತ್ತೂ ಮನೆಯವರು ಒಬ್ಬೊಬ್ಬರಾಗಿ ಹೊರಬಂದು ನನ್ನನ್ನೇ ನೋಡುತ್ತಾ ನಿಂತರು. ಹೊಟ್ಟೆ ಕೆರೆದುಕೊಳ್ಳುತ್ತಾ ಬಂದ ಪಳನಿಚಾಮಿಯ ಹಿಂದೆ ಅವನ ಹೆಂಡತಿಯೂ ಬಂದಳು. ಅವಳು ಕೈಯಲ್ಲಿ ಸೌಟು ಹಿಡಿದಿದ್ದಳು ಮತ್ತು ಆ ಸೌಟಿನಲ್ಲಿ ಒಂದು ಕರಿಬೇವಿನ ಎಲೆ ಅಂಟಿಕೊಂಡಿತ್ತು.

ಸಂಜೆಯ ಹೊತ್ತಿಗೆ ಇದೆಷ್ಟು ವಿಪರೀತಕ್ಕಿಟ್ಟುಕೊಂಡಿತೆಂದರೆ ಸಿಕ್ಕಿದ ಎಲ್ಲರೂ ಏನಾದರೂ ಗೊತ್ತಾಯ್ತಾ ಎಂದು ಕೇಳಿ ಕೇಳೀ ಕಿರಿಕಿರಿ ಮಾಡಿಬಿಟ್ಟರು. ಯಾವತ್ತೂ ಮಾತಾಡದ ತ್ರಿಪುರಸುಂದರಿ ನುಲಿಯುತ್ತಾ ಬಂದು ಮುಂದೆ ನಿಂತು "ನಂಗೆ ಮೊದಲಿಂದಲೂ ಅನುಮಾನ ಇತ್ತು" ಅಂದಳು. ನಾಥಮುನಿಯ ಕಲೀಗ್ ಕಮಲಾಕಾಂತ್ ಝಾ "ಇವನು ಇದರಲ್ಲೂ ನನ್ನನ್ನ ಮೀರಿಸಿಬಿಟ್ಟನಲ್ಲ" ಎನ್ನುತ್ತಾ ಹಲ್ಲು ಕಡಿದ.

ಮನೆಯೊಳಗೆ ಕಾಲಿಡುತ್ತಿದ್ದಂತೇ ಲಲಿತೆ "ಮನೆ ಬದಲಾಯಿಸೋಣಾರೀ" ಅಂದಳು. ನಾಥಮುನಿ ಮಾತ್ರ ಡೈನಿಂಗ್ ಟೇಬಲ್ ಮೇಲೆ ದೊಡ್ಡ ತಟ್ಟೆ ತುಂಬಾ ಕೆಂಪಗೆ ಕನಿಯುತ್ತಿದ್ದ ಪರಂಗಿ ಹಣ್ಣಿನ ಉದ್ದುದ್ದನೆಯ ಹೋಳುಗಳನ್ನು ತುಂಬಿಕೊಂಡು ಅರ್ಧ ಮುಕ್ಕಾಲು ಗಂಟೆಯವರೆಗೆ ತಿನ್ನುತ್ತಾ ಕೂತಿದ್ದ. ತಟ್ಟೆ ಖಾಲಿಯಾಗುತ್ತಿದ್ದಂತೇ ಎಂಟೂವರೆಗೇ ಲೈಟ್ ಆರಿಸಿಬಿಟ್ಟ. ಅದಾಗಿ ಹತ್ತು ನಿಮಿಷದಲ್ಲಿ ವೆಲ್‌ಫೇರ್ ಅಸೋಸಿಯೇಷನ್‌ನ ಕಾರ್ಯದರ್ಶಿ ಡಾ. ವಿಲ್‌ಫ್ರೆಡ್ ಸ್ಯಾಮ್‌ರಾಜ್ ಬಂದ. ನಾಡಿದ್ದು ಶನಿವಾರ ಸಂಜೆ ಕ್ವಾರ್ಟರ್ಲಿ ಗೆಟ್‌ಟುಗೆದರ್ ಇದೆಯೆಂದೂ ಮಾಮೂಲಿನಂತೆ ಕಲ್ಚರಲ್ ಪ್ರೋಗ್ರಾಮ್ಸ್, ಡಿನ್ನರ್ ಸಹಾ ಇರುತ್ತದೆಂದು ಹೇಳಿ ಅದಕ್ಕಾಗಿ ನಾವು ಮೂವರಿಗೆ ಮೂರು ಊಟದ ಕೂಪನ್ ಕೊಟ್ಟು ಮುನ್ನೂರು ರೂಪಾಯಿ ತೆಗೆದುಕೊಂಡ. ನಾಥಮುನಿಯ ಕತ್ತಲುಗಟ್ಟಿದ ಮನೆಯತ್ತ ನಿಮಿಷದವರೆಗೆ ನೋಡುತ್ತಾ ನಿಂತವನು "ಅವರ ಕೂಪನ್ ಅನ್ನೂ ನೀವೇ ತೆಗೆದುಕೊಂಡುಬಿಡಿ" ಎನ್ನುತ್ತಾ ಅದನ್ನು ನನ್ನ ಕೈಗೆ ತುರುಕಿ "ಬೆಳಿಗ್ಗೆ ಅವರಿಂದ ತಗೋಂಡುಬಿಡಿ" ಎಂದು ಹೇಳಿ ನೂರು ರೂಪಾಯಿ ಪೀಕಿಸಿದ. ಮಲಗುವ ಹೊತ್ತಿಗೆ ಮಿಸೆಸ್ ನಾಥಮುನಿಯಿಂದ ಫೋನ್ ಬಂತು. ನಾಥಮುನಿಯವರಿಗೆ ಅಂತ ನಾವು ತೆಗೆದುಕೊಂಡ ಡಿನ್ನರ್ ಕೂಪನ್ ಒಂದೋ ಇಲ್ಲಾ ಎರಡೋ ಎಂದು ಮತ್ತೆ ಮತ್ತೆ ಕೇಳಿದಳು. ಒಂದೇ ಅಂತ ಲಲಿತೆ ಮತ್ತೆಮತ್ತೆ ಹೇಳಿದರೂ ನಂಬದೇ "ನಿಜ ಹೇಳಿ ಪ್ಲೀಸ್" ಎಂದು ಗೋಗರೆದಳು.



ಬೇಸರದಲ್ಲೇ ರಾತ್ರಿ ಕಳೆದು ಬೆಳಗಾಯಿತು.

ಬೆಳಿಗ್ಗೆ ಗಾರ್ಡನ್‌ನಲ್ಲಿ ಕಾಣಿಸಿಕೊಂಡ ನಾಥಮುನಿಗೆ ನಾಳೆ ಸಂಜೆಯ ಕಾರ್ಯಕ್ರಮದ ಬಗ್ಗೆ ಹೇಳಿ ಅವನ ಡಿನ್ನರ್ ಕೂಪನ್ ಕೈಗಿತ್ತೆ. ಥ್ಯಾಂಕ್ಸ್ ಎಂದು ಹೇಳಿ ಒಳಗೆ ಹೋಗಿ ಬಂದು ನೂರು ರೂಪಾಯಿ ಕೊಟ್ಟು ಮತ್ತೊಮ್ಮೆ ಥ್ಯಾಂಕ್ಸ್ ಅಂದ.

ಆ ರಾತ್ರಿ ಮಿಸೆಸ್ ನಾಥಮುನಿಯಿಂದ ಮತ್ತೆ ಫೋನ್ ಬಂತು. ಲಲಿತೆ ಭಯದಿಂದಲೇ ಸ್ಪೀಕರ್ ಆನ್ ಮಾಡಿದಳು.

"ಹಲೋ. ನಮಸ್ತೇ ಮೇಡಂ."

"ಅಲ್ಲಾ ಇವರೇ, ನಾನು ದೂರದಲ್ಲಿರೋ ಒಂಟಿ ಹೆಂಗಸು. ಏನೋ ಹೆಲ್ಪ್ ಮಾಡಿ, ದಾರಿ ತಪ್ತಾ ಇರೋ ಗಂಡನ ಮೇಲೆ ಒಂದು ಕಣ್ಣಿಡಿ ಅಂತ ರಿಕ್ವೆಸ್ಟ್ ಮಾಡಿಕೊಂಡ್ರೆ ನೀವು ಅವರ ಜತೇನೇ ಶಾಮೀಲಾಗಿಬಿಡೋದಾ? ಇದಕ್ಕಾ ನಾನು ಫ್ಲೈಟ್ ಟಿಕೆಟ್‌ಗೆ ಹನ್ನೆರಡು ಸಾವಿರ ಸುರಿದು ನಿಮ್ಮ ಮನೇವರೆಗೂ ಬಂದದ್ದು?"

"ಅಂ! ಏನು ಹೇಳ್ತಾ ಇದೀರಿ ನೀವು?"

"ಅಹಹಹ! ಮಾಡೋದು ಮಾಡಿಬಿಟ್ಟು ಏನೂ ಗೊತ್ತಿಲ್ಲ ಅಂತ ಮಳ್ಳಿ ಹಂಗೆ ನಾಟಕ ಆಡ್ತಿದೀಯಲ್ಲ ಅಮ್ಮಣ್ಣೀ? ನಿನ್ನಂಥಾ ಹೆಂಗಸು ಊರಲ್ಲಿ ಒಬ್ಬಳಿದ್ರೆ ಸಾಕು, ನೂರು ಮನೆ ನೀರುಪಾಲು."

ಲಲಿತೆ ಬೊಂಬೆಯಂತೆ ನಿಂತುಬಿಟ್ಟಳು. ಕಣ್ಣಲ್ಲಿ ಫಕ್ಕನೆ ಕಣ್ಣೀರು ಒಸರಿತು. ಸರ್ರನೆ ಅವಳ ಪಕ್ಕ ಸರಿದು ಫೋನ್ ಕಿತ್ತುಕೊಂಡೆ. ಕೋಪದಲ್ಲಿ "ಏಯ್" ಎಂದು ಕೂಗುತ್ತಿದ್ದಂತೇ ನನ್ನನ್ನು ಅಣಕಿಸುವಂತೆ ಅದು ಮೌನವಾಗಿಬಿಟ್ಟಿತು. ಅತುರಾತುರವಾಗಿ ಅದೇ ನಂಬರನ್ನು ಒತ್ತಿದೆ. ಅದೀಗ ಎಂಗೇಜ್ ಆಗಿತ್ತು. ಲಲಿತೆ ಕೆಳಗೆ ಕುಸಿದು ಬಿಕ್ಕುತ್ತಿದ್ದಳು.

ನಿದ್ದೆಯಿಲ್ಲದೇ ರಾತ್ರಿ ಕಳೆದೆವು.

ಅಂದು ಶನಿವಾರ. ಯೂನಿವರ್ಸಿಟಿಗೆ ಮಾಮೂಲಿನಂತೆ ರಜಾ. ಪುಟ್ಟಿಗೆ ಮಾತ್ರ ಸ್ಕೂಲು. ಐದೂವರೆಯ ಹೊತ್ತಿಗೆ ಮನೆಯ ಮುಂದೆ ಪೇಪರ್ ಬಿದ್ದ ಸದ್ದಾದಾಗ ಬಾಗಿಲು ತೆರೆದೆ. ಬಾಗಿ ಪೇಪರ್ ಎತ್ತಿಕೊಂಡು ನೆಟ್ಟಗೆ ನಿಲ್ಲುತ್ತಿದ್ದಂತೇ ಯಾರೋ ಕೇಕರಿಸಿ ಉಗಿದ ಸದ್ದು ತುಸು ಜೋರಾಗಿಯೇ ಕೇಳಿಸಿ ಅಸಹಜವೆನಿಸಿ ಪಕ್ಕಕ್ಕೆ ಹೊರಳಿದೆ. ಪೇಪರ್ ಹಿಡಿದ ನಂದಕಿಶೋರ ಧಢಾರನೆ ಬಾಗಿಲು ಮುಚ್ಚಿಕೊಂಡ.

ಪುಟ್ಟಿ ಮಾಮೂಲಿನಂತೆ ಏಳುಗಂಟೆಗೆ ಸ್ಕೂಲಿಗೆ ಹೊರಟ ನಂತರ ನಾವು ಬೆಳಗುಪೂರ್ತಿ ಮನೆಯ ಮುಂಬಾಗಿಲು ತೆರೆಯಲೇ ಇಲ್ಲ. ಕಣ್ಣುಗಳು ಕೆಂಪಗೆ ಊದಿಕೊಂಡಿದ್ದ ಲಲಿತೆ ಪಲ್ಯಕ್ಕೆ ಈರುಳ್ಳಿ ಹೆಚ್ಚುವಾಗ ಕೈಬೆರಳು ಕತ್ತರಿಸಿಕೊಂಡಳು. ಚಪಾತಿ ಲಟ್ಟಿಸುವಾಗ ಲಟ್ಟಣಿಗೆ ಕೈಯಿಂದ ಜಾರಿ ಕಾಲ ಮೇಲೆ ಬಿದ್ದು ಬಲಗಾಲಿನ ಹೆಬ್ಬೆರಳು ಮಾಗಿದ ತೊಂಡೆಹಣ್ಣಿನಂತೆ ಬಿರಿದುಹೋಯಿತು. ಡಿಸ್ಪೆನ್ಸರಿಗೆ ಹೋಗೋಣ ಅಂದರೆ ಉಹ್ಞೂಂ ಬರಲ್ಲ ಅಂದುಬಿಟ್ಟಳು. ನಾನೇ ಔಷಧಿ ಹಚ್ಚಿ ಬ್ಯಾಂಡೇಜ್ ಹಾಕಿದೆ.

ಮಧ್ಯಾಹ್ನ ಮನೆಗೆ ಬಂದ ಪುಟ್ಟಿ ಯಾಕೋ ತುಂಬಾ ಸಪ್ಪಗಿದ್ದಳು. ಏನಾಯ್ತು ಅಂದರೆ "ನಾನು ಇನ್ಯಾವತ್ತೂ ಕ್ಯಾಂಪಸ್ಸಿನ ಮಕ್ಕಳ ಜತೆ ಸ್ಕೂಲ್ ಬಸ್‌ನಲ್ಲಿ ಹೋಗಲ್ಲ, ದಿನಾ ನೀವೇ ಡ್ರಾಪ್ ಮಾಡೋದಾದ್ರೆ ಮಾತ್ರ ಸ್ಕೂಲಿಗೆ ಹೋಗ್ತೀನಿ" ಅಂದಳು ಕಣ್ಣೀರು ತುಳುಕಿಸುತ್ತಾ. "ಯಾಕೆ ಮಗೂ ಏನಾಯ್ತು?" ಎಂದು ಹತ್ತಿರ ಹೋದರೆ ಸಿಗದೇ ಒಳಗೆ ಓಡಿ ಲಲಿತೆಯ ಮಡಿಲಲ್ಲಿ ಹುದುಗಿ ದನಿಯೆತ್ತಿ ಅಳತೊಡಗಿದಳು. ಅವಳನ್ನು ಎದೆಗವಚಿಕೊಂಡು ಸಂತೈಸುತ್ತಿದ್ದ ಲಲಿತೆ ಬಿಕ್ಕುತ್ತಿದ್ದಳು.

ಸಂಜೆಯಾಗುತ್ತಿದ್ದಂತೇ ಮನೆಯೆದುರಿನ ಪಾರ್ಕಿನಲ್ಲಿ ಪೆಂಡಾಲ್ ಎದ್ದು ನಿಂತು "ಹಲೋ ಹಲೋ, ಮೈಕ್ ಟೆಸ್ಟಿಂಗ್, ಮೈಕ್ ಟೆಸ್ಟಿಂಗ್. ಹಲೋ ಹಲೋ" ಎಂಬ ಸದ್ದು ಕಿವಿ ಚುಚ್ಚತೊಡಗಿದಾಗ ಕಿಟಕಿಗಳನ್ನೆಲ್ಲಾ ಮುಚ್ಚಿಬಿಟ್ಟೆ. "ರಾತ್ರಿ ಊಟಕ್ಕೆ ನಾನೇ ಸಿಂಪಲ್ಲಾಗಿ ಏನಾದ್ರೂ ಮಾಡ್ತೀನಿ, ನೀನು ರೆಸ್ಟ್ ತಗೋ" ಎಂದು ಲಲಿತೆಗೆ ಹೇಳಿದೆ. ಪುಸ್ತಕವೊಂದನ್ನು ಹಿಡಿದು ಕುಳಿತಿದ್ದ ಪುಟ್ಟಿಗೆ ಬೋರ್ನ್‌ವಿಟಾ ಮಾಡಿಕೊಟ್ಟು ಅವಳು ಅದನ್ನು ಕುಡಿದು ಮುಗಿಸುವವರೆಗೂ ಪಕ್ಕದಲ್ಲೇ ಕುಳಿತಿದ್ದೆ.

ಮೂವರೂ ಮೌನವಾಗಿ ಊಟ ಮುಗಿಸಿದಾಗ ಒಂಬತ್ತು ಗಂಟೆ. ಊಟವಾದ ಮೇಲೆ ಪುಟ್ಟಿ ಮತ್ತೆ ತನ್ನ ಪುಸ್ತಕಕ್ಕೆ ಹಿಂತಿರುಗಿದಳು. ನಾನೂ ಲಲಿತೆಯೂ ಟೀವಿ ನೋಡುತ್ತಾ ಕುಳಿತೆವು. ಅರ್ಧಗಂಟೆಯಲ್ಲಿ ಅದು ಸಾಕೆನಿಸಿ ಆಫ್ ಮಾಡುತ್ತಿದ್ದಂತೇ ಕಾಲಿಂಗ್ ಬೆಲ್ ಮೊಳಗಿತು. ಮುಂದಿನ ಎರಡು ಕ್ಷಣಗಳಲ್ಲಿ ತಾಳ್ಮೆಗೆಟ್ಟು ಮತ್ತೆಮತ್ತೆ ಕಿರುಚಿತು.

ಓಡಿಹೋಗಿ ಬಾಗಿಲು ತೆರೆದೆ. ನಾಥಮುನಿ ಬಿರುಗಾಳಿಯಂತೆ ಒಳಗೆ ನುಗ್ಗಿದವನು ಸೋಫಾದಲ್ಲಿ ಕುಸಿದು ಬೊಗಸೆಯಲ್ಲಿ ಮುಖ ಮುಚ್ಚಿಕೊಂಡ. "ಎಲ್ರೂ ಸೇರಿ ನನ್ನನ್ನ ಅವಮಾನ ಮಾಡಿಬಿಟ್ರು. ತುಂಬ... ತುಂಬ... ಅವಮಾನ ಮಾಡಿಬಿಟ್ರು" ಎನ್ನುತ್ತಾ ಬಿಕ್ಕಿದ. ನಾನು ದಿಗ್ಭ್ರಮೆಗೊಂಡಿದ್ದೆ. ನನಗೆ ತಿಳಿದಿದ್ದ ನಾಥಮುನಿಯಿಂದ ಇಂತಹ ವರ್ತನೆಯನ್ನು ನಾನು ಕನಸಿನಲ್ಲೂ ನಿರೀಕ್ಷಿಸಿರಲಿಲ್ಲ. ಲಲಿತೆಯತ್ತ ತಿರುಗಿದೆ. ಅವಳು ಹೂಜಿಯಿಂದ ತಣ್ಣನೆಯ ನೀರನ್ನು ಲೋಟಕ್ಕೆ ಬಗ್ಗಿಸಿ ನನ್ನತ್ತ ಚಾಚಿದಳು. ಏನೂ ತೋಚದೆ ನಿಂತವನಿಗೆ ಅದು "ಐ ಡೋಂಟ್ ಡಿಸರ್ವ್ ದಿಸ್, ಐ ಡೋಂಟ್ ಡಿಸರ್ವ್ ದಿಸ್" ಎಂದು ಒರಲುತ್ತಿದ್ದ ನಾಥಮುನಿಗೆ ಎಂದು ಕಣ್ಣಿನಲ್ಲೇ ಸನ್ನೆ ಮಾಡಿದಳು. ಕೈಚಾಚಿ ಲೋಟ ತೆಗೆದುಕೊಂಡೆ. ಒಂದು ಹೆಜ್ಜೆ ಮುಂದಿಟ್ಟೆ.

ಅವನು ತಲೆಯೆತ್ತಿದ. ಕಣ್ಣುಗಳಿಂದ ಧಾರಾಕಾರವಾಗಿ ನೀರಿಳಿಯುತ್ತಿತ್ತು. "ಇಟೀಸ್ ಓಕೆ, ಇಟೀಸ್ ಓಕೆ" ಎನ್ನುತ್ತಾ ಮತ್ತೊಂದು ಹೆಜ್ಜೆ ಮುಂದಿಟ್ಟೆ.

ಅವನು ಕಣ್ಣೊರೆಸಿಕೊಂಡ. "ಅವರ ಸ್ಕಿಟ್ ನನ್ನ ಬಗ್ಗೇ. ಅದು ನ್ಯಾಯಾನಾ? ಆ ಹೆಂಗಸರ ಹಾಡು ಕೇಳಿದ್ರಾ? ಇಟೀಸ್ ಟೂ ಮಚ್. ಆ ಮಕ್ಕಳ ಡ್ಯಾನ್ಸ್... ಓಹ್" ಅವನ ದನಿ ದಯನೀಯವಾಗಿತ್ತು. ನಾನು ಆತುರಾತುವಾಗಿ ಮತ್ತೊಂದು ಹೆಜ್ಜೆ ಮುಂದಿಟ್ಟೆ.

ಅವನು ಛಕ್ಕನೆ ಮೇಲೆದ್ದ. "ಓಹ್ ನೋ, ಓಹ್ ನೋ..." ಎಂದು ದನಿಯೆತ್ತರಿಸಿ ಕೂಗುತ್ತಾ ಬಾಗಿಲತ್ತ ಓಡಿದ. ಕಾಲುಗಳನ್ನು ಎಳೆದುಹಾಕುತ್ತಾ ಬಾಗಿಲು ದಾಟಿ ಹೊರಟುಹೋದ. ನಾನು ಗರಬಡಿದು ನಿಂತಿದ್ದೆ.

ಆ ರಾತ್ರಿ ಮಿಸೆಸ್ ನಾಥಮುನಿಯಿಂದ ಯಾವ ಫೋನೂ ಬರಲಿಲ್ಲ.

*****

ಎಂದಿನಂತೆ ಅಂದೂ ಬೆಳಗಾಯಿತು. ಎಂದಿನಂತೇ ಪ್ರೊಫೆಸರ್ ನಾಥಮುನಿಯವರ ದಿನ ಕತ್ತಲಲ್ಲೇ ಆರಂಭವಾಗಿತ್ತು. ನೆಮ್ಮದಿಯ ನಿದ್ದೆಯಿಲ್ಲದ ಮೂರನೆಯ ರಾತ್ರಿಯನ್ನು ಕಳೆದು ನಾನೂ ಲಲಿತೆಯೂ ನಾಲ್ಕು ಗಂಟೆಗೆಲ್ಲಾ ಹಾಸಿಗೆ ಬಿಟ್ಟು ಕಾಫಿ ಮಾಡಿಕೊಂಡು ಕುಡಿಯುತ್ತಾ ಕುಳಿತೆವು. ನಾಥಮುನಿ ಮನೆಯೊಳಗೇ ಶಥಪಥ ಹಾಕುತ್ತಿದ್ದ. ನಾವು ಕುಡಿದು ಮುಗಿಸುವ ಹೊತ್ತಿಗೆ ಅವನು ಎಲ್ಲೋ ಒಳಗೆ ಸೇರಿಕೊಂಡಿದ್ದ.

ಲಲಿತೆ ಸ್ನಾನದ ಮನೆ ಹೊಕ್ಕಳು. ನಾನು ಮತ್ತೆ ಹಾಸಿಗೆಯಲ್ಲುರುಳಿದೆ. ಮಗ್ಗಲು ಬದಲಾಯಿಸಿ ಕನವರಿಸಿಕೊಳ್ಳುತ್ತಿದ್ದ ಪುಟ್ಟಿಯ ಬೆನ್ನನ್ನು ಮೃದುವಾಗಿ ತಟ್ಟತೊಡಗಿದೆ. ಸಣ್ಣಗೆ ಜೋಂಪು ಹತ್ತಿತು.

ಯಾರೋ ಮೈ ಅಲುಗಿಸಿದಂತಾಗಿ ಗಕ್ಕನೆ ಕಣ್ಣು ಬಿಟ್ಟೆ. ಲಲಿತೆ ಗಾಬರಿಯಲ್ಲಿ "ರೀ ರೀ" ಎನ್ನುತ್ತಿದ್ದಳು. ನಾಥಮುನಿಯ ಮನೆಯ ಕುಕ್ಕರ್ ದೀರ್ಘವಾಗಿ ಸಿಳ್ಳು ಹಾಕಿತು.

"ಇದು ಆರನೇ ವಿಶಲ್. ಯಾವತ್ತೂ ಹಿಂಗಾಗಿರ್ಲಿಲ್ಲ" ಲಲಿತೆ ರಭಸವಾಗಿ ನನ್ನ ಭುಜ ಅಲುಗಿಸಿದಳು. "ಹೋಗಿ ನೋಡ್ರೀ" ಗೋಗರೆದಳು. ನಾನು ಎದ್ದು ಕುಳಿತೆ.

"ಅವರ ಮನೇಲಿರೋದು ಒಂದು ಹಾಕಿನ್ಸ್ ಕುಕ್ಕರ್ ಮಾತ್ರ. ಅವರು ಬೇಯಿಸೋ ಬೇಳೆ, ತರಕಾರಿ, ಅನ್ನಕ್ಕೆ ಎರಡು ಸಿಳ್ಳು ಸಾಕು. ಈವತ್ತು ಏನೋ ಆಗಿದೆ. ಅವ್ರು ಸ್ಟೌ ಆಫ್ ಮಾಡ್ತಾ ಇಲ್ಲ. ನಂಗೆ ಭಯವಾಗ್ತಾ ಇದೆ."

ಕುಕ್ಕರ್ ಮತ್ತೊಮ್ಮೆ ದೀರ್ಘವಾಗಿ ಕೂಗಿತು.

"ಈವತ್ತು ರಾಜ್ಮಾ ಬೇಯಿಸ್ತಾ ಇರಬೇಕು" ಅಂದೆ.

"ಇಲ್ಲಾರೀ. ಆವಯ್ಯ ಪಾಲಕ್ ತೊಳೆದು ಕುಕ್ಕರ್ ಪಾತ್ರೆ ಒಳಗೆ ಹಾಕೋದನ್ನ ನಾನೇ ನೋಡ್ದೆ. ಸ್ಟೌ ಹಚ್ಚಿ ಕುಕ್ಕರ್ ಇಟ್ಟದ್ದನ್ನೂ ನೋಡ್ದೆ. ಆಮೇಲೆ ಅವ್ರು ಕಾಣಿಸ್ತಾ ಇಲ್ಲ..." ಅವಳ ಮಾತುಗಳನ್ನು ಕತ್ತರಿಸಿ ಕುಕ್ಕರ್ ಮತ್ತೊಮ್ಮೆ ಒಡಕು ಒಡಕಾಗಿ ಕೂಗಿತು.

"ಇದು ಎಂಟನೇದು..." ಲಲಿತೆಯ ಮಾತನ್ನು ನಾಥಮುನಿಯ ಕುಕ್ಕರ್ ಮತ್ತೊಂದು ಸಿಳ್ಳಿನ ಸೂಚನೆ ನೀಡಿ ಕತ್ತರಿಸಿತು. ಒಂಬತ್ತನೆಯ ದೀರ್ಘ ಕೂಗನ್ನು ನಿರೀಕ್ಷಿಸುತ್ತಾ "ಇದೋ ಹೊರಟೆ" ಎನ್ನುತ್ತಾ ಹ್ಯಾಂಗರ್‌ನಲ್ಲಿದ್ದ ಶರಟನ್ನು ಆತುರಾತುರವಾಗಿ ಎಳೆದುಕೊಳ್ಳುತ್ತಿದ್ದಂತೇ ಅರೆಕ್ಷಣದಲ್ಲಿ ಸಿಳ್ಳು ನಿಂತುಹೋಯಿತು. ಇಡೀ ಜಗತ್ತೇ ಚಣಕಾಲ ಮೌನವಾಗಿಬಿಟ್ಟಿತು. ಮರುಕ್ಷಣ ನಾಥಮುನಿಯ ಮನೆಯಲ್ಲಾದ ಸ್ಫೋಟ ದಿಕ್ಕುದಿಕ್ಕಿನಲ್ಲಿ ಪ್ರತಿಧ್ವನಿಸಿತು. ಪುಟ್ಟಿ ಚಟ್ಟನೆ ಚೀರುತ್ತಾ ಎದ್ದು ಕುಳಿತಳು.

"ಕುಕ್ಕರ್ ಸಿಡಿದುಹೋಯ್ತು. ಅಯ್ಯೋ ದೇವ್ರೇ" ಎನ್ನುತ್ತಾ ಲಲಿತೆ ಮುಂಬಾಗಿಲತ್ತ ಓಡಿದಳು. ನಾನು ಅವಳನ್ನು ದಾಟಿ ಮುಂದೆ ಓಡಿದೆ. ಬಾಗಿಲು ಸಮೀಪಿಸುವಷ್ಟರಲ್ಲಿ ಮನೆಯ ಮುಂದೆ ಜನರ ಗದ್ದಲವೋ ಗದ್ದಲ. ಯಾರೋ ಹಾರೆಯಿಂದ ನಾಥಮುನಿಯ ಮನೆಯ ಬಾಗಿಲನ್ನು ಒಡೆಯುತ್ತಿದ್ದರು. "ಆ ಪೆಂಡಾಲ್ ತೆಗೆಯೋದು ಬೇಡ. ಕುರ್ಚಿಗಳೆಲ್ಲಾ ಅಲ್ಲೇ ಇರಲಿ ಅಂತ ಹೇಳಿ. ಎಲ್ಲಾ ಈವತ್ತೂ ಬೇಕಾಗುತ್ತೆ ಅನ್ಸುತ್ತೆ. ಹೊಸದಾಗಿ ಮತ್ತೆ ಹಾಕೋ ತಾಪತ್ರಯ ಯಾಕೆ?" ವೆಲ್‌ಫೇರ್ ಅಸೋಸಿಯೇಷನ್ ಪ್ರೆಸಿಡೆಂಟ್ ಪ್ರೊಫೆಸರ್ ಡಿ. ಕೆ. ಯಾದವ್ ಅದ್ಯಾರಿಗೂ ಕೂಗಿ ಹೇಳಿದರು.

ಬಾಗಿಲು ತೆರೆಯಲು ಹೋದ ನನ್ನ ಕೈಯನ್ನು ಲಲಿತೆ ತಡೆದಳು. ಇಬ್ಬರೂ ಅಲ್ಲೇ ಗೋಡೆಗೊರಗಿ ಕುಳಿತೆವು. ಅದೆಷ್ಟು ಹೊತ್ತು ಹಾಗೆ ಕುಳಿತಿದ್ದೆವೋ ಗೊತ್ತಿಲ್ಲ. ಲಲಿತೆ ಒಮ್ಮೆಲೆ ಎದ್ದಳು. ಟೇಬಲ್ ಮೇಲಿದ್ದ ತನ್ನ ಫೋನನ್ನು ಎತ್ತಿಕೊಂಡು ಬಂದು ನನ್ನ ಕೈಲಿತ್ತಳು. "ತಿಳಿಸಿಬಿಡೋದು ನಮ್ಮ ಕರ್ತವ್ಯ. ನೀವೇ ಹೇಳಿಬಿಡಿ ಆಯಮ್ಮನಿಗೆ."

ಮೌನವಾಗಿ ಫೋನ್ ಕೈಗೆ ತೆಗೆದುಕೊಂಡೆ. ಮಿಸೆಸ್ ನಾಥಮುನಿಯ ನಂಬರ್ ಹುಡುಕಿ ಒತ್ತಿದೆ. ಕಿವಿಗೆ ಹಿಡಿಯುತ್ತಿದ್ದಂತೇ ಅತ್ತಲಿಂದ ಮಾತು ಬಂತು:

"ದಿಸ್ ನಂಬರ್ ಡಸ್ ನಾಟ್ ಎಗ್ಸಿಸ್ಟ್."

ಮತ್ತೆ ಒತ್ತಿದೆ. ಅದೇ ಮಾತು. ಮತ್ತೊಮ್ಮೆ... ಮಗದೊಮ್ಮೆ...

"ಏನಾಯ್ತು?" ಎಂದಳು ಲಲಿತೆ ಗಾಬರಿಯಲ್ಲಿ. ಮಿಸೆಸ್ ನಾಥಮುನಿಯ ನಂಬರನ್ನು ಮತ್ತೊಮ್ಮೆ ಒತ್ತಿ ಫೋನನ್ನು ಅವಳ ಕಿವಿಗೆ ಹಿಡಿದೆ.

❑ **ಪ್ರೇಮಶೇಖರ**



ಆಗಸ್ಟ್ 15ರಂದು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕುಂದಾಪುರ ನಾರಾಯಣ ಖಾರ್ವಿ, ಅಕಾಡೆಮಿ ರಿಜಿಸ್ಟ್ರಾರ್ ಡಾ. ದೇವದಾಸ ಪೈ, ಅಕಾಡೆಮಿ ಸದಸ್ಯ ಬಿ. ಪುಂಡಲೀಕ ಮರಾಠೆ ಶಿರ್ವ ಇವರು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಪುಷ್ಪಗುಚ್ಛ ನೀಡಿ ಸ್ವಾಗತಿಸುತ್ತಿರುವುದು.

# ಮದ್ದಿಲ್ಲದ ಭ್ರಷ್ಟಾಚಾರವೆಂಬ 'ಕ್ಯಾನ್ಸರ್'ಗೆ ಅಣ್ಣಾ ಹಜಾರೆಯೆಂಬ ಇಂಜೆಕ್ಷನ್




ಎರಡನೇ ತಲೆಮಾರಿನ ತರಂಗಾಂತರಂಗ ಹಗರಣ, ಕಾಮನ್‌ವೆಲ್ತ್ ಹಗರಣ, ಆದರ್ಶ ಸೊಸೈಟಿ ಹಗರಣ ಮುಂತಾದ ಭ್ರಷ್ಟಾಚಾರ ಕ್ಯಾನ್ಸರ್ ಗುಳ್ಳೆಗಳಿಂದ ತತ್ತರಿಸುತ್ತಿರುವ ನಮ್ಮ ದೇಶದ ಅವಸ್ಥೆಯನ್ನು ಕಂಡು ದೇಶದ ಒಂದು ವರ್ಗದ ಜನರು ಸಿನಿಕರಾಗಿ ಹೋದರೆ ಇನ್ನೊಂದು ವರ್ಗದ ಜನ ಒಳಗಿಂದೊಳಗೆ ತತ್ತರಿಸುತ್ತಿದ್ದರು. ವಿಶ್ವಮಟ್ಟದ ಪ್ರಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ. ಮನಮೋಹನ್ ಸಿಂಗ್ ಅವರ ಮನಸ್ಸೂ ವಿಚಲಿತವಾದಂತೆ ಇತ್ತು. ಪ್ರಧಾನಿಯ ಕುರ್ಚಿಯ ನಾಲ್ಕು ಕಾಲುಗಳು ಗಟ್ಟಿಮುಟ್ಟಾಗಿದ್ದರೂ ಅದರಲ್ಲಿ ಕುಳಿತುಕೊಳ್ಳುವ ಮೆತ್ತೆಯ ಹಾಸಿನಲ್ಲಿ ಮುಳ್ಳುಗಳು ಅವರನ್ನು ಚುಚ್ಚುತ್ತಿದ್ದಾವೆ. ಚುಚ್ಚುವ ಕುರ್ಚಿಯಿಂದ ಎದ್ದು ನಿಂತು ತನ್ನ ಪಾಡನ್ನು ಹೇಳಲು ಅವರಿಗೆ ಅವರ ಮನೋಸ್ಥಿತಿಯ ಸ್ನೇಹಿತರಾಗಲೀ, ಸಲಹಾಗಾರರಾಗಲೀ ಸದ್ಯ ಸರಕಾರದಲ್ಲಿ ಅಥವಾ ಪಕ್ಷದಲ್ಲಿ ಯಾರೂ ಇಲ್ಲ. ಎಲ್ಲವನ್ನು ಮೂಕವಾಗಿ ಅನುಭವಿಸುತ್ತಿರುವ ಮನಮೋಹನ್ ಸಿಂಗ್ ಅವರನ್ನು ಜನ 'ಮೂಕ ಪ್ರಧಾನಿ' ಎಂದು ಮೂದಲಿಸುತ್ತಿದ್ದಾರೆ.

ಇಂತಹ ಪ್ರಧಾನಿಯವರ ಮೂಕ ವೇದನೆಯನ್ನು ಅರಿತು ಅದರ ಹಲವು ಕಾರಣಗಳಲ್ಲಿ ಒಂದಾದ ಭ್ರಷ್ಟಾಚಾರದ ಕುರಿತು ಸಮಾಲೋಚಿಸಿ ಸಲಹೆ ನೀಡಲು ದೂರದ ಮಹಾರಾಷ್ಟ್ರದ ರಾಳೇಗಣ ಸಿದ್ದಿಯ ಮುದುಕ ಕಿಶನ್ ಬಾಪಟ್ ಬಾಬೂರಾವ್ ಕಳೆದ ವರ್ಷ ದೆಹಲಿಗೆ ಪ್ರಯಾಣ ಬೆಳೆಸಿದ್ದರು. ಪ್ರಧಾನಿ ನಿವಾಸದಲ್ಲಿ ಹಲವು ಗಂಟೆಗಳಷ್ಟು ಕಾಲ ಕುಳಿತು ಚರ್ಚಿಸಿದರು. ಪ್ರಧಾನಿ ಮನಮೋಹನ್ ಸಿಂಗ್ ಅವರ ಗಂಟಿಕ್ಕಿದ ಮುಖದಲ್ಲಿ ನಗು ಹುಟ್ಟಿಸುವಂತಹ ಕೆಲಸ ಮಾಡಲು ಅವರು ತಯಾರಿದ್ದರು. ಕುರ್ಚಿಯ ಮೆತ್ತೆಯ ಮೇಲಿನ ಮುಳ್ಳುಗಳನ್ನು ಕಿತ್ತೆಸೆಯಲು ಉಪಾಯಗಳನ್ನು ಹುಟ್ಟುಹಾಕಿದ್ದರು. ಅವುಗಳಲ್ಲಿ ಒಂದು, ಕಳೆದ ನಾಲ್ಕು ದಶಕಗಳಿಂದಲೂ ನೆನೆಗುದಿಗೆ ಬಿದ್ದಿದ್ದ ಲೋಕಪಾಲ್ ಮಸೂದೆ. ಆದಷ್ಟು ಬೇಗ ಅದನ್ನು ಕಾನೂನು ಆಗಿ ತರೋಣ ಎಂದು ಮನಮೋಹನ್ ಸಿಂಗ್ ಅವರಿಗೆ ಮನಮುಟ್ಟುವಂತೆ ಹೇಳಿದರು. ಸಿಂಗ್ ಅವರೂ ಆಗ ಮನಃಪೂರ್ವಕವಾಗಿ ಒಪ್ಪಿದ್ದರು.

ರಾಜಕೀಯ ಎನ್ನುವುದೇ ಹೀಗೆ. ಪ್ರಧಾನಿಯಾಗಬೇಕೆಂದು ಜೀವನವಿಡೀ ಕನಸುಗಳನ್ನು ಕಂಡವರು, ಅದಕ್ಕಾಗಿ ಹಲವಾರು ನೈಪುಣ್ಯಗಳನ್ನು ಕಳೆಗೂಡಿಸಿದವರು, ಅಂತಹ ಮಹಾತ್ವಾಕಾಂಕ್ಷೆಯಿಂದಲೇ ರಂಗಕ್ಕೆ ಇಳಿದವರು ಪ್ರಧಾನಿಯಾಗದೇ ಉಳಿಯುತ್ತಾರೆ. ಇನ್ಯಾರೋ ಆಗಿದ್ದಾರೆ. ಮನಮೋಹನ್ ಸಿಂಗ್ ಅವರ ಸುತ್ತಿರುವ ಮಂತ್ರಿಮಂಡಲದ ಬಹಳಷ್ಟು ಮಂದಿಗೆ ಲೋಕಪಾಲ್ ಮಸೂದೆ ಅಷ್ಟೊಂದು ಅಗತ್ಯವೂ ಆಗಿರಲಿಲ್ಲ, ಮುಖ್ಯವೂ ಆಗಿರಲಿಲ್ಲ. ರಾಜಕೀಯವನ್ನು ತಮ್ಮ ಎಳವೆಯಿಂದಲೇ ಬದುಕನ್ನಾಗಿ ಮಾಡಿದವರಿಗೆ ಇದೆಲ್ಲಾ ಬೇಕಾಗಿರಲಿಲ್ಲ. ಇಂದು ಅಧಿಕಾರದಲ್ಲಿ ನಾವಿದ್ದೇವೆ, ನಮ್ಮಲ್ಲಿ ಕೆಲವರು ಈಗಾಗಲೇ ಬಹಳಷ್ಟು ಬಾಚಿಕೊಂಡಿದ್ದಾರೆ. ನಾವೂ ಬಾಚಿಕೊಳ್ಳುತ್ತಿದ್ದೇವೆ. ಅದಕ್ಕೆ ಈಗ ಕಡಿವಾಣ ಯಾಕೆ. ಈಗಿರುವ ವ್ಯವಸ್ಥೆಯಲ್ಲಿಯೇ ನಮಗೆ ಬಾಚಿಕೊಳ್ಳಲು ಅವಕಾಶವೂ ಇದೆ. ಜೈಲಿಗೆ ಕಳುಹಿಸಲು ಮಾರ್ಗವೂ ಇದೆ. ಇದು ಅವರ ನಂಬಿಕೆಯಾಗಿತ್ತು.

ಅದ್ಭುತ ಧೈರ್ಯ, ಸ್ವತಂತ್ರ ಮನಸ್ಸು ಹಾಗೂ ತತ್ವಕ್ಕಾಗಿ ಜೀವ ಬೇಕಾದರೂ ನೀಡಲು ಸಿದ್ಧವಾಗಿರುವಂತಹ ನಿಲುವುಗಳನ್ನು ಹೊಂದಿರುವ ಕಿಶನ್ ಬಾಬೂರಾವ್ ಯಾನೆ ಅಣ್ಣಾ ಹಜಾರೆ ಈ ಬಾರಿ ಇದು ತನ್ನ ಕೊನೆಯ ಅವಕಾಶ ಎಂದು ಮನಗಂಡರು. ಪ್ರಧಾನಿಗೆ ಸಮಯದ ಗಡುವನ್ನು ಕೊಟ್ಟು ಹೇಳಿದರು. ನಿಮ್ಮ ಮುಖದಲ್ಲಿ, ಅಂತೆಯೇ ಜನರ ಮುಖದಲ್ಲಿಯೂ ನಾನು ನಗುವನ್ನು ಕಾಣಲು ಹಾತೊರೆಯುತ್ತಿದ್ದೇನೆ. ಸಮಯದೊಳಗೆ ನಿರ್ಧಾರಕ್ಕೆ ಬನ್ನಿ. ಜತೆಯಾಗಿ ಭ್ರಷ್ಟಾಚಾರವೆಂಬ ಕ್ಯಾನ್ಸರ್ ಅನ್ನು ನಿರ್ನಾಮ ಮಾಡೋಣ ಎಂದರು. ಡಾ. ಮನಮೋಹನ್ ಸಿಂಗ್ ಅವರ ಸರಕಾರ ಕೊಟ್ಟ ಮಾತು ನೆರವೇರಿಸುವಂತೆ ಕಾಣಲಿಲ್ಲ. ಎಪ್ರಿಲ್ ತಿಂಗಳಲ್ಲಿ ಅಣ್ಣಾ ಹಜಾರೆ ಅವರು ದೆಹಲಿಯ ಜಂತರ್‌ಮಂತರ್ ನಲ್ಲಿ ಐದು ದಿನ ಉಪವಾಸ ಕೂತರು. ಸರಕಾರದ ನಿರ್ಲಿಪ್ತತೆಯಿಂದಾಗಿ ಅಣ್ಣಾ ಹಜಾರೆ ಅವರು ಆಗಸ್ಟ್ 16 ರಂದು ಮತ್ತೆ ಉಪವಾಸ ಆರಂಭಿಸುವ ಮಾತಾಡಿದರು. ಬೆಚ್ಚಿ ಬಿದ್ದ ಸರಕಾರದ ಚಿಲ್ಲರೆ ರಾಜಕೀಯ ವ್ಯಕ್ತಿಗಳು ನಿಜಕ್ಕೂ ಗಾಬರಿಗೊಂಡರು. ಅಣ್ಣಾ ಹಜಾರೆ ತಿಹಾರ್ ಜೈಲಿಗೆ ಹೋದರೂ ತಮ್ಮ ಬೆದರದ ನಿಲುವಿನಿಂದಾಗಿ ಸರಕಾರವನ್ನು ಮಣಿಸುವಲ್ಲಿ 13 ದಿನಗಳ ಉಪವಾಸ ಕುಳಿತರು. ದೆಹಲಿಯ ರಾಮಲೀಲಾ ಮೈದಾನ ಮಾಧ್ಯಮಗಳಿಗೆ 'ಪೀಪ್ಲಿ ಲೈವ್' ಆಯಿತು. ಒಂದೊಮ್ಮೆ ಅಣ್ಣಾ ಹಜಾರೆ ತೆಗೆದುಕೊಂಡ ನಿಲುವುಗಳು ಪ್ರಜಾಸತ್ತಾತ್ಮಕ ಧ್ಯೇಯಗಳನ್ನು ಪ್ರಶ್ನಿಸುವಂತೆ ಇದ್ದವು. ಭಾರತದ ಅಭಿವೃದ್ಧಿಯ ಆಧಾರಸ್ಥಂಭವಾದ ಪ್ರಜಾತಾಂತ್ರಿಕತೆಗೆ ಏಟು ಬೀಳುವ ಭಯವೂ ಉಂಟಾಯಿತು. ನಾವೇ ಆರಿಸಿ ಕಳುಹಿಸಿದ ನಮ್ಮ ಪ್ರತಿನಿಧಿಗಳನ್ನು ಓರ್ವ ನಿವೃತ್ತ ಸೇನಾ ಟ್ರಕ್ ಚಾಲಕನು ನಿಯಂತ್ರಿಸುವುದೆಂದರೆ ನಾವು ಕೊಟ್ಟ ಮತಗಳಿಗೆ ಬೆಲೆಯಿಲ್ಲದಂತಾಯಿತೇ ಎಂಬುದು ನಿಜವಾದ ಪ್ರಜೆಯ ಆತಂಕವಾಗಿರುವುದು ಸೋಜಿಗವೇನಲ್ಲ. ಅಣ್ಣಾ ಹಜಾರೆಯವರಿಗೆ ಈ ದಿನಗಳು ಹೊಸ ಹುಟ್ಟಿಗಾಗಿ ಕಾಡುವ ನೋವಾಗಿತ್ತು. ಕಣಿವೆಯಾಚೆಗಿನ ಬೆಳಕಿನಲ್ಲಿ ಅವರು ವಿಶ್ವಾಸ ವಿಟ್ಟಿದ್ದರು. ಹತ್ತುದಿನಗಳ ನಂತರವಾದರೂ ಸರಕಾರ ವಿರೋಧ ಪಕ್ಷಗಳ ಜತೆಗೆ ಕುಳಿತು ಅಣ್ಣಾ ಹಜಾರೆ ಮುಂದೆ ತನ್ನ ಅಸಹಾಯಕ ಕೈಯನ್ನು ಒಡ್ಡಿತು. ಐತಿಹಾಸಿಕ ಚರ್ಚೆ ಸಂಸತ್ತಿನ ಎರಡೂ ಸದನಗಳಲ್ಲೂ ನಡೆಯಿತು. ಮದ್ದಿಲ್ಲದ ಭ್ರಷ್ಟಾಚಾರವೆಂಬ 'ಕ್ಯಾನ್ಸರ್'ಗೆ ಅಣ್ಣಾ ಹಜಾರೆ ಕೊಟ್ಟ ಇಂಜೆಕ್ಷನ್ ಸರಕಾರವನ್ನು ನೋವಿಗೀಡುಮಾಡಿತು. ಅವರ ಉಪವಾಸ ದೇಶದೆಲ್ಲೆಡೆ ಜನರನ್ನು ಪ್ರಚೋದಿಸಿದ ರೀತಿ ಇತ್ತೀಚಿನ ವರ್ಷಗಳಲ್ಲಿ ದೇಶದ ಇಂದಿನ ಇತಿಹಾಸಕಾರರು ಕಂಡಿರಲಿಲ್ಲ. ಗಾಂಧೀಜಿ ಅವರ ಅಹಿಂಸಾತ್ಮಕ ಹೋರಾಟ ತನಗೆ ಪ್ರೇರಕ ಎಂದ ಅಣ್ಣಾ ಹಜಾರೆಯವರಿಗೆ ಬೆಂಗಳೂರಿನ ಫ್ರೀಡಂ ಪಾರ್ಕ್ ನಿಂದ ಹಿಡಿದು ಪಂಜಾಬಿನ ಲುಧಿಯಾನದ ವರೆಗೂ ಬೆಂಬಲ ದೊರೆಯಿತು. ಭ್ರಷ್ಟಾಚಾರದಿಂದ ದೇಶದ ಜನತೆ ರೋಸಿಹೋಗಿದ್ದರು. ಜನನಾಯಕರೆನಿಸಿಕೊಂಡಿರುವ ರಾಜಕಾರಣಿಗಳಿಂದ ಭ್ರಮನಿರಶನ ಗೊಂಡಿದ್ದರು. ಜನಸಾಮಾನ್ಯರಲ್ಲಿ ಸುಪ್ತವಾಗಿದ್ದ ಸಿಟ್ಟನ್ನು ಹೊರಗೆಡಹಲು ಹಜಾರೆಯವರ ಹೋರಾಟ ಒಂದು ಮಾಧ್ಯಮವಾಯಿತು. ಜನ ಬೀದಿಗಿಳಿದರು. ತ್ರಿವರ್ಣ ಧ್ವಜವನ್ನು ಹಾರಿಸಿದರು. ಭಾರತ ಮಾತೆಗೆ ಜಯಕಾರ ಹಾಕಿದರು. ದೇಶ ಪ್ರೇಮವನ್ನು ಮೆರೆದರು. ಜನರ ಆಕ್ರೋಶ ಶಾಂತರೂಪದ ಪ್ರತಿಭಟನೆಯಾಗಿ ಪರಿಣಮಿಸಿತು. ಒಂದು ಪ್ರಜಾಸತ್ತಾತ್ಮಕ ಚಳವಳಿ ಎಂದರೆ ಅದು ಅಧಿಕಾರ ನಡೆಸುವವರನ್ನು ಜನ ಸಮಷ್ಟಿಯಾಗಿ ಪ್ರಶ್ನಿಸುವ, ಅವರಿಂದ ಏನನ್ನೋ ಆಗ್ರಹಿಸುವ ಪ್ರಕ್ರಿಯೆ. ಒಂದು ಆರೋಗ್ಯಕರ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೀಗೆ ಆಗ್ರಹಿಸುವ ಮತ್ತು ಸವಾಲೆಸೆಯುವ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿರಬೇಕು. ಇದು ಜನತೆಯ ಒಗ್ಗಟ್ಟಿಗೆ ಸಂದ ಐತಿಹಾಸಿಕ ಜಯ, ನಾಗರಿಕ ಹೋರಾಟಗಾರರ ಶ್ರಮಕ್ಕೆ ಸಿಕ್ಕ ಪ್ರತಿಫಲ, ಇಂದು ಅಣ್ಣಾ ಹಜಾರೆ ಕೇವಲ ವ್ಯಕ್ತಿಯಾಗಿ ಉಳಿದಿಲ್ಲ. ನೋಡನೋಡುತ್ತಿದ್ದಂತೆ ಒಂದು ಪ್ರತೀಕವಾಗಿಬಿಟ್ಟಿದ್ದಾರೆ ಎಂದು ಮಾಧ್ಯಮಗಳು ಹೇಳತೊಡಗಿದವು. ಅಣ್ಣಾ ಹಜಾರೆ ಅವರಿಗೆ ಹೋರಾಟ ಇದೇನು ಮೊದಲ ಸಲವಲ್ಲ. ಮಾಹಿತಿ ಹಕ್ಕು ಕಾಯ್ದೆ ಅವರ ಹೋರಾಟದ ಪ್ರತಿಫಲ. ರಾಳೇಗಣ ಸಿದ್ದಿಯ ಅಭಿವೃದ್ಧಿಗಾಗಿ ಸರಕಾರದ ಜತೆ ಮಾಡಿದ ಹೋರಾಟ ಅವರಿಗೆ ಬಹಳಷ್ಟು ಸಫಲತೆಯನ್ನು ಕೊಟ್ಟಿದೆ. ಇಂದು ಆ ಗ್ರಾಮ ಒಂದು ಮಾದರಿ ಗ್ರಾಮವಾಗಿದೆ. ಅಣ್ಣಾ ಹಜಾರೆ ಅವರು ಭಾರತೀಯ ಸೇನೆಯಲ್ಲಿ 15 ವರ್ಷ ಸೇವೆ ಸಲ್ಲಿಸಿದ್ದಾರೆ. ಸೇನೆಯಿಂದ ಸ್ವಯಂ ನಿವೃತ್ತಿ ಪಡೆದು ತನ್ನ ಹುಟ್ಟೂರಿನತ್ತ ಪಾದ ಬೆಳೆಸಿದ ಅವರು ಭ್ರಷ್ಟಾಚಾರಿ ವಿರೋಧಿ ಜನ ಆಂದೋಲನವನ್ನು 1991ರಲ್ಲಿ ಆರಂಭಿಸಿದರು. ಉಪವಾಸ ನಿಲ್ಲಿಸುವ ಮುನ್ನ ಅಣ್ಣಾ ಹಜಾರೆ ಈ ಹೋರಾಟ ಇಲ್ಲಿಗೇ ನಿಲ್ಲುವುದಿಲ್ಲ ಎಂದಿದ್ದಾರೆ. ಭ್ರಷ್ಟಾಚಾರ ಹೋಗಲಾಡಿಸಲು ಪದೇಪದೇ ಇಂತಹ ಆಘಾತ ನೀಡಬೇಕು. ಅಧಿಕಾರದ ವಿಕೇಂದ್ರೀಕರಣ, ಕೃಷಿಕರು ಮತ್ತು ಕಾರ್ಮಿಕರನ್ನು ರಕ್ಷಿಸಲು ಶಾಸನ, ಸಾಮಾಜಿಕ ಸಬಲೀಕರಣ, ಶಿಕ್ಷಣದ ವಾಣಿಜ್ಯೀಕರಣಕ್ಕೆ ನಿಯಂತ್ರಣ ಮುಂತಾದ ವಿಷಯಗಳನ್ನು ಶೀಘ್ರವೇ ಕೈಗೆತ್ತಿಕೊಳ್ಳಬೇಕಿದೆ ಎಂದು ಅಣ್ಣಾ ಹಜಾರೆ ಹೇಳುತ್ತಿದ್ದಾರೆ. ಕ್ಯಾನ್ಸರ್ ರೂಪದಲ್ಲಿ ಇಡೀ ಸಮಾಜಕ್ಕೆ ಅಂಟಿರುವ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದು ಒಂದು ಕಾನೂನಿನಿಂದ ಆಗುವ ಕೆಲಸವಲ್ಲ ಎಂದು ಎಲ್ಲರಿಗೂ ಗೊತ್ತಿರುವ ವಿಚಾರ. ಬೃಹತ್ತಾದ ಒಂದು ಚಳವಳಿಯಿಂದಲೂ ಅದನ್ನು ಕಿತ್ತೆಸೆಯಲಾಗದು. ರಾಳೇಗಣ ಸಿದ್ದಿಯ ಮುದುಕ ಅಣ್ಣಾ ಹಜಾರೆ ಅವರ ಕೆಲವೊಂದು ನಿರ್ಣಯಗಳು ಅವರನ್ನು ಜನವಿರೋಧಿಯನ್ನಾಗಿ ಮಾಡುತ್ತವೆ. ಅವರ ಸಹವರ್ತಿಗಳ ಅನುಮಾನಾಸ್ಪದ ವರ್ತನೆಗಳು, ಹೋರಾಟದ ಹಿಂದೆ ಮುಗ್ದ ಜನರನ್ನು ಮೋಸಗೊಳಿಸಬಲ್ಲ ನಗರದ ಮುಖವಾಡಗಳು ಹಜಾರೆಯವರ ಬಿಳಿಟೋಪಿಯ ಮೇಲೆ ಮಸುಕಾಗಿ ಮೂಡುವ ಕಪ್ಪುಗೆರೆಗಳಾಗಿವೆ. ರಾಳೇಗಣ ಸಿದ್ಧಿಯಲ್ಲಿ ವ್ಯಾಪಕ ಕ್ಷೇತ್ರಕಾರ್ಯವನ್ನು ಮಾಡಿದರೂ ಅಣ್ಣಾ ಹಜಾರೆ ಅನುಸರಿಸಿದ ಮಾರ್ಗದಲ್ಲಿ ಕೆಲವೊಮ್ಮೆ ಹೊಂಡಗಳು ಎದ್ದು ಕಾಣುತ್ತವೆ. ಕಳೆದ ಎರಡು ದಶಕಗಳಲ್ಲಿ ಗ್ರಾಮದಲ್ಲಿ ಪಂಚಾಯಿತಿ ಚುನಾವಣೆಗಳನ್ನೇ ನಡೆಸದೆ, ರಾಷ್ಟ್ರೀಯ ಚುನಾವಣೆಗಳ ಸಂದರ್ಭಗಳಲ್ಲಿ ಪ್ರಚಾರಕ್ಕೇ ಅವಕಾಶ ನೀಡದೇ ಆಧುನಿಕ ಪ್ರಜಾಪ್ರಭುತ್ವದ ಆದರ್ಶಗಳನ್ನು ಗಾಳಿಗೆ ತೂರಿರುವುದು ಅವರ ನಡತೆಯಲ್ಲಿ ಹುಳುಕು ಹುಡುಕುವ ಕೆಲಸವಲ್ಲ. ನಿಜ ಸತ್ಯ. ಅಣ್ಣಾ ಹಜಾರೆ ಸಮಾಜದ ಹೊಸ ವರ್ಗಕ್ಕೆ ಆಶಾದೀಪವಾಗಿರುವುದು ನಿಜ. ಅಣ್ಣಾ ಬೆಂಬಲಿಗರು ಪ್ರಜಾತಂತ್ರವನ್ನು ಅರ್ಥೈಸಿ ಅದರ ತಳಹದಿಯ ಮೇಲೆ ನಿಂತು ಕೊಳೆತಿರುವ ವ್ಯವಸ್ಥೆಯನ್ನು ಪಕ್ಷಾತೀತರಾಗಿ ಪ್ರಶ್ನಿಸಬೇಕು. ಅಣ್ಣಾ ಹಜಾರೆಯವರ ಬೆಳಕು ಮುಂಜಾನೆಯ ಮಂದಕಿರಣವಾಗಿ ಸಮಾಜದಲ್ಲಿ ಹೊಸ ಚೈತನ್ಯವನ್ನು ತರಬೇಕು.

❑ **ಬಾಲಕೃಷ್ಣ ನಾಯ್ಕ್ ಡಿ.**

# ಅಣ್ಣಾ ಮೇನಿಯಾ

ಒಂದು ಕಾಲದಲ್ಲಿ 'ಮೈ ಅಣ್ಣಾ ಹೂಂ' ಅಂದರೆ ಅವನೊಬ್ಬ ಡಾನ್ ಆಗಿರಬೇಕು... ಅಥವಾ ಹಾಗಂತ ತನ್ನನ್ನು ತಾನು ಕರೆಸಿಕೊಳ್ಳಬೇಕು ಎಂದೇ ಆಗಿತ್ತು. ಆದರೆ ಆಗಸ್ಟ್ 2011ರಲ್ಲಿ ಯಾರಾದರೂ 'ಅಣ್ಣಾ' ಅಂದರೆ ಆತ ಸತ್ಯಾಗ್ರಹಿ ಅಂತಲೇ ಬಿಂಬಿಸುವಂತಾಗಿತ್ತು...

ಅಲ್ಲಿ ಸೇರಿದ ಜನರೆಲ್ಲರ ತಲೆಯ ಮೇಲೊಂದು ಬಿಳಿ 'ಅಣ್ಣಾ ಟೋಪಿ', ಕೆನ್ನೆಯ ಮೇಲೆ ಕೇಸರಿ–ಬಿಳಿ–ಹಸುರು ಬಣ್ಣ, ಕೈಗಳಲ್ಲಿ ತ್ರಿವರ್ಣ ಧ್ವಜ... ಇವುಗಳೇ ಕಂಗೊಳಿಸುತ್ತಿತ್ತು. ಅವರೆಲ್ಲಾ ಅಣ್ಣಾ ಹಜಾರೆ ಅವರ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಬಂದವರೆಂದು ಹೇಳುವುದರಲ್ಲಿ ಎರಡು ಮಾತಿಲ್ಲ. ಅದರಲ್ಲಿ ದೇಶದ ಮುಂದಿನ ಜನಾಂಗವಾದ ಯುವ ಪೀಳಿಗೆಯೇ ಅತ್ಯಧಿಕ ಸಂಖ್ಯೆಯಲ್ಲಿತ್ತು.

ಗುಂಪು ಗುಂಪಾಗಿ ಶ್ವೇತ ವರ್ಣದ ಟೊಪ್ಪಿಗೆಯೊಂದಿಗೆ ಕಂಗೊಳಿಸುತ್ತಿರುವ ಯುವ ಜನತೆಯನ್ನು ನೋಡುವುದೇ ಅದೊಂಥರಾ ಚೆಂದ. ಅವರೆಲ್ಲಾ ರಾಮಲೀಲಾ ಮೈದಾನದೊಳಗೆ ಹೋಗಲು ಅದೆಷ್ಟೋ ಕಿಲೋ ಮೀಟರುಗಟ್ಟಲೆ ಸರತಿಯ ಸಾಲಿನಲ್ಲಿ ಗಂಟೆಗಟ್ಟಲೆ ಕಾಯುತ್ತಿದ್ದರು. ಆ ಸಾಲಿನಲ್ಲೂ ಅಣ್ಣಾ ಹಜಾರೆಯವರಿಗೆ ಜೈಕಾರಗಳು ಕೇಳುತ್ತಿದ್ದವು. ಅವರ ಕೈಯಲ್ಲಿ ಹಿಡಿದಿರುವ ಬ್ಯಾನರುಗಳು ವಿವಿಧ ರೂಪದವುಗಳಾಗಿದ್ದವು.

ಕೆಲವರ ವೇಷ ಭೂಷಣಗಳೂ ವಿಚಿತ್ರ ವಿಭಿನ್ನ. ಕೃಷ್ಣನ ವೇಷ ತೊಟ್ಟ ಬಾಲಕನ ತಲೆಯಲ್ಲಿ "ಮೈ ಅಣ್ಣಾ ಹೂಂ" ಟೋಪಿ. ಬೋಳಿಸಿದ ತಲೆಯಲ್ಲಿ 'ನಾನೇ ಅಣ್ಣಾ' ಎಂಬ ಕೂದಲಿನ ವಿನ್ಯಾಸ. ಅಣ್ಣಾ ಅವರ ಮುಖವಾಡ ತೊಟ್ಟು ಸೂಪರ್ ಮ್ಯಾನ್ ಧಿರಿಸಿಂದ ಬಂದ ಸೂಪರ್ ಅಣ್ಣಾ ಹಜಾರೆ. ಮೈಯಿಡೀ ಬಣ್ಣ ಬಳಿದುಕೊಂಡು ಗಾಂಧೀಜಿಯ ಪ್ರತಿಮೆಯಂತೆ ನಿಂತಲ್ಲೇ ನಿಂತ ವ್ಯಕ್ತಿ, ದೊಡ್ಡ ಮೀಸೆ, ನೀಳ ಮೀಸೆ, ಕುರುಚಲು ಗಡ್ಡಗಳಿಗೆ ತ್ರಿವರ್ಣ ಬಣ್ಣ ಹಚ್ಚಿ ನಿಂತಿರುವ ವ್ಯಕ್ತಿಗಳು... ಅಬ್ಬಬ್ಬಾ... ಅದೆಷ್ಟು ಭಿನ್ನ ವಿಭಿನ್ನ ವೇಷ. ನಂಗೇನೋ ಉಡುಪಿಯ ಮೊಸರು ಕುಡಿಕೆಯ ವಿವಿಧ ವೇಷಗಳ ನೆನಪಾಯಿತು.

ನೆರೆದಿದ್ದ ಯುವತಿಯರ ಕೈಗಳಲ್ಲೂ ಚಿಕ್ಕ ಧ್ವಜ, ದೊಡ್ಡ ಹಾರಾಡುವ ಧ್ವಜ, ಜಡೆಗೆ ಬಿಗಿದ ತ್ರಿವರ್ಣ ರಿಬ್ಬನುಗಳು, ಕೈಗೆ ಸುತ್ತಿಕೊಂಡ ಕೇಸರಿ–ಬಿಳಿ–ಹಸಿರು ಕರ್ಚೀಫುಗಳು. ಹಣೆಗೆ ತ್ರಿವರ್ಣ ಹಣೆಬೊಟ್ಟು, ಕೈ ಬಳೆಗಳೂ ತ್ರಿವರ್ಣ. ಬ್ಯಾಜುಗಳು, ಸ್ಟಿಕ್ಕರುಗಳು ಅದೇನೇನು ಸಾಧ್ಯವೋ ಅದೆಲ್ಲವನ್ನೂ ತ್ರಿವರ್ಣಮಯವಾಗಿ ಧರಿಸಿದ್ದರು ಇವರುಗಳು.

ಟೋಪಿ, ಧ್ವಜ, ಬ್ಯಾಜುಗಳನ್ನು ಮಾರುವ ಬೀದಿ ವ್ಯಾಪಾರಿಗಳಿಗೆ ಖುಷಿಯೋ ಖುಷಿ. ದಿನದಿಂದ ದಿನಕ್ಕೆ ವ್ಯಾಪಾರಿಗಳ ಸಂಖ್ಯೆ ಹೆಚ್ಚುತ್ತಲೇ ಇತ್ತು. ನೆರೆದ ಜನರು ಮುಗಿ ಬಿದ್ದು ಖರೀದಿ ನಡೆಸುತ್ತಿದ್ದರು. ಮೊದಲ ದಿನ ಐದು ರೂಪಾಯಿಗಳಿಗೆ ಮಾರುತ್ತಿದ್ದ ಒಂದು ಟೊಪ್ಪಿಯ ಬೆಲೆ ಮರುದಿನ 20 ರುಪಾಯಿಗೆ ನೆಗೆದಿತ್ತು. "ನಾನು ನನ್ನ ಲೈಫಲ್ಲಿ ಇಷ್ಟೊಂದು ತ್ರಿವರ್ಣ ಧ್ವಜ ಮಾರಿರಲಿಲ್ಲ. ದಿನಕ್ಕೆ ಸುಮಾರು 500ರಿಂದ 1000 ರೂ ತನಕವೂ ಲಾಭ ಪಡೆಯುತ್ತಿದ್ದೇನೆ" ಎಂದು ಹರ್ಷ ವ್ಯಕ್ತಪಡಿಸುತ್ತಾರೆ ರಾಜಸ್ತಾನದಿಂದ ಬಂದ ಬೀದಿ ವ್ಯಾಪಾರಿ ರಜಾಕ್. ಇವರಂತೆ ಮುಖಕ್ಕೆ ತ್ರಿವರ್ಣ ಬಣ್ಣ ಬಳಿಯುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಏರುತ್ತಿತ್ತು.

ಅಲ್ಲಿ ಸೇರಿದ ಅದೆಷ್ಟು ಜನರಿಗೆ ಅಣ್ಣಾ ಹಜಾರೆ ಬಗ್ಗೆಯೋ ಲೋಕಪಾಲ ಮಸೂದೆಯ ಬಗ್ಗೆಯೋ ತಿಳಿದಿದೆ ಎಂಬುದು ಗೊತ್ತಿಲ್ಲ... ಆದರೂ ಅದರಲ್ಲಿ ಹಲವರಾದರೂ ನಿಜವಾಗಿ ಭ್ರಷ್ಟಾಚಾರದ ವಿರುದ್ಧ ದನಿಯೆತ್ತಿದ್ದರು.

"ಇಂದು ಅಣ್ಣಾ ಹಜಾರೆ ಅವರು ನಡೆಸುತ್ತಿರುವ ಸತ್ಯಾಗ್ರಹ ನಮ್ಮ ಮುಂದಿನ ಪೀಳಿಗೆಯ ಏಳಿಗೆಗಾಗಿ ಆಗಿದೆ ಅದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಇದರಲ್ಲಿ ನಾವು ಶಾಂತಿಯುತವಾಗಿ ಭಾಗವಹಿಸುತ್ತಿದ್ದೇವೆ" ಎನ್ನುತ್ತಾರೆ ಸೌತ್ ಡೆಲ್ಲಿಯ ಆರ್. ಪಿ ಯಾದವ್. ಸಂಪೂರ್ಣ ಅಂಧರಾಗಿದ್ದರೂ ಅವರು ತಮ್ಮ ಮಕ್ಕಳಾದ ಪೂರ್ಣಿಮಾ ಮತ್ತು ಪಲ್ಲವಿ ಅವರೊಂದಿಗೆ ರಾಮಲೀಲಾ ಮೈದಾನಕ್ಕೆ ಬಂದು ಅಣ್ಣಾ ಹಜಾರೆ ಅವರಿಗೆ ತಮ್ಮ ಬೆಂಬಲವನ್ನು ಸೂಚಿಸಿ ಭಾಗವಹಿಸಿದರು.

ಇವರಂತೆಯೇ ಇಲ್ಲಿ ಸೇರಿದ್ದ ಸಹಸ್ರಾರು ಹಜಾರೆ ಬೆಂಬಲಿಗರಲ್ಲಿ ಅನೇಕರು ತಮ್ಮನ್ನು ತಾವು ವಿವಿಧ ರೂಪದಲ್ಲಿ ಮೈದಾನದಲ್ಲಿ ಅಳವಡಿಸಿಕೊಂಡಿದ್ದರು. ಕೆಲವರು ರಾಮಲೀಲಾ ಮೈದಾನದ ಸ್ವಚ್ಛತೆಯನ್ನು ಕಾಪಾಡಿಕೊಂಡರೆ. ಇನ್ನು ಕೆಲವರು ಮಳೆಯಿಂದ ನಿಂತ ಕೊಚ್ಚೆಯನ್ನು ತೆಗೆಯುತ್ತಿದ್ದರು. ಇನ್ನು ಹಲವರು ಬಂದಿದ್ದ ಜನರ ಓಡಾಟಕ್ಕೆ ಸುಗಮ ವ್ಯವಸ್ಥೆಯನ್ನು ಒದಗಿಸುತ್ತಿದ್ದರು. ಕೆಲವರು ಭಿತ್ತಿ ಪತ್ರಗಳನ್ನು ತಂದು ಸೇರಿರುವ ಜನತೆಗೆ ಲೋಕಪಾಲ ಮಸೂದೆಯ ಬಗ್ಗೆ ತಿಳಿಸಿ ಹೇಳುತ್ತಿದ್ದರು.

ಇಲ್ಲಿ ಕಾರ್ಯನಿರ್ವಹಣೆಗೆ ನೇಮಕಗೊಂಡ ಪೋಲಿಸ್ ಪೇದೆಯವರು ಹೇಳುವಂತೆ "ನಮಗೆ ಈ ಪ್ರತಿಭಟನೆ ಯಾವುದೇ ಹೆಚ್ಚಿನ ಹೊರೆ ಇಲ್ಲದಂತೆ ಮಾಡಿದೆ. ಎಲ್ಲಾ ಅಣ್ಣಾ ಹಜಾರೆ ಬೆಂಬಲಿಗರೇ ನೋಡಿಕೊಳ್ಳುತ್ತಾರೆ. ಆದ್ದರಿಂದಲೇ ಇಲ್ಲಿ ಸಣ್ಣ ಪುಟ್ಟ ಅಹಿತಕರ ಘಟನೆಗಳು ನಡೆದಿಲ್ಲ" ಎಂದು ಅಭಿಪ್ರಾಯ ಪಡುತ್ತಾರೆ.

ಇದಕ್ಕೆ ಪೂರಕವಾಗಿ ಫ್ರಾನ್ಸ್ ದೇಶದ ಮಾರ್ಸೆಲ್‌ನ ಕ್ಲೆಮೆಂಟ್ ಬಾಡೆಟ್ ಅವರು "ಸಹಸ್ರಾರು ಜನರು ಒಂದೆಡೆ ಸೇರಿದರೂ ಯಾವುದೇ ಗಲಾಟೆ ಗಲಭೆ ಇಲ್ಲದೆ, ಶಾಂತಿಯುತ ಪ್ರದರ್ಶನ ನಡೆಸಿದ್ದನ್ನು ನಾನಿದುವರೆಗೂ ಪ್ರಪಂಚದ ಯಾವ ಮೂಲೆಯಲ್ಲೂ ಕಂಡು ಕೇಳಿರಲಿಲ್ಲ..." ಎನ್ನುತ್ತಾರೆ.

ಇನ್ನು ಕೆಲವರು ಈ ಸತ್ಯಾಗ್ರಹವನ್ನು ಎರಡನೇ ಸ್ವಾತಂತ್ರ್ಯ ಸಂಗ್ರಾಮ ಎಂದು ಬಣ್ಣಿಸುತ್ತಾರೆ. ಅವರಿಗೆ ಅಣ್ಣಾ ಹಜಾರೆ ಗಾಂಧೀಜಿಯಂತೆ ಕಾಣುತ್ತಾರೆ. ಬೆಂಗಳೂರಿನಲ್ಲಿದ್ದ ಸ್ಪೇನ್ ದೇಶದ ರಾಜಕೀಯ ಸಂಶೋಧನಾ ವಿದ್ಯಾರ್ಥಿ ಲಾರೆನ್ಸ್ ಅವರು ಅಣ್ಣಾ ಹಜಾರೆ ಪ್ರತಿಭಟನೆಯಲ್ಲಿ ಭಾಗವಹಿಸಲೆಂದೇ ದೆಹಲಿಯ ರಾಮಲೀಲಾ ಮೈದಾನಕ್ಕೆ ಬಂದಿದ್ದರು. ಅವರೂ ಅಣ್ಣಾ ಹಜಾರೆ ಅವರಲ್ಲಿ ಇನ್ನೊಬ್ಬ ಗಾಂಧಿಯನ್ನು ಕಂಡರಂತೆ. ಅವರನ್ನುವಂತೆ "ಭಾರತೀಯ ರಾಜಕಾರಣದಲ್ಲಿ ಗಾಂಧಿಯ ಬಗ್ಗೆ ಕೇಳಿದ್ದೇನೆ. ಆದರೆ ಇಂದು ಸ್ವತಹ ಅವರ ಪ್ರತಿರೂಪವಾದ ಅಣ್ಣಾ ಹಜಾರೆ ಅವರನ್ನು ಕಂಡು ನನಗೆ ಮಹಾತ್ಮಾ ಗಾಂಧೀಜಿಯವರ ಸತ್ಯಾಗ್ರಹ



ಕಣ್ಣೆದುರಿಗೆ ಬಂದಂತಾಗುತ್ತಿದೆ. ನಾನು ಮಂಡಿಸುವ ಸಂಶೋಧನೆಯಲ್ಲಿ ಭಾರತೀಯರು ನಡೆಸುವ ಪ್ರತಿಭಟನೆಯ ಬಗ್ಗೆ ಇತರ ದೇಶಗಳು ಪ್ರೇರಣೆ ಪಡೆಯುವಂತೆ ನಮೂದಿಸುತ್ತೇನೆ" ಅನ್ನುತ್ತಾರೆ.

ಇವಿಷ್ಟು ಒಂದೆಡೆಯಾದರೆ ಇನ್ನು ಕೆಲವರು ಮೋಜು ಮಸ್ತಿಗಾಗಿ ಪ್ರತಿಭಟನಾ ಮೈದಾನಕ್ಕೆ ಬಂದವರಿದ್ದಾರೆ. ಮುಖಕ್ಕೆ ಬಣ್ಣ ಬಳಿದು ನಲಿದಾಡುವುದೆಂದರೆ ಅದೇನೋ ಸಂತಸ. ಅದು ಸಾಲದೆಂಬಂತೆ ಡೋಲು ತಮಟೆಗಳ ಸಾಥ್ ಬೇರೆ. ಇನ್ನೇನು ಬೇಕು ಹೇಳಿ. ಅದನ್ನು ಅನುಭವಿಸಲೆಂದೇ ಬಂದವರು ಅನೇಕರಿದ್ದಾರೆ. ಇನ್ನು ಕೆಲವರಿಗೆ ವೀಕೆಂಡ್ ಎಂಜಾಯ್‌ಮೆಂಟ್ ಕೂಡಾ ಅಣ್ಣಾ ಹಜಾರೆ ಅವರ ಹೆಸರಲ್ಲಾಯಿತು.

ಇಲ್ಲಿ ಬಂದು ಸೇರಿದ ಕೆಲವರಿಗಂತೂ ತಾವು ಯಾಕೆ ಬಂದಿದ್ದೇವೆ ಎಂಬ ಅರಿವೂ ಇರಲಿಲ್ಲ. ಅಣ್ಣಾ ಹಜಾರೆ ಬಗೆಗಾಗಲೀ, ಲೋಕಪಾಲ ಮಸೂದೆಯ ಬಗೆಗಾಗಲೀ ಏನೊಂದೂ ಮಾಹಿತಿ ಇದ್ದಂತೆ ಕಾಣಲಿಲ್ಲ.

'ಏನಮ್ಮಾ ನಿನಗೆ ಹಜಾರೆ ಅಜ್ಜ ಅಂದರೆ ಯಾರೂಂತ ಗೊತ್ತಿದೆಯಾ' ಎಂದು ಅಣ್ಣಾ ಹಜಾರೆ ಗೆಟಪ್ಪಿನಲ್ಲಿ ಕಂಡ ಸುಮಾರು 8 ವರ್ಷದ ಮುದ್ದು ಶಿಶಿರಾ ಎಂಬ ಬಾಲಕಿಯನ್ನು ಕೇಳಿದೆ. ಸಿದ್ಧ ಉತ್ತರ 'ಇಲ್ಲ' ಕೇಳಿಬಂತು. ಜತೆಗಿದ್ದ ಪೋಷಕರು ಆಕೆಗೆ 'ಅಣ್ಣಾ' ಯಾರೆಂದು ಹೇಳಿರಲಿಲ್ಲ. ಆದರೆ ಆಕೆಯನ್ನು ಹಜಾರೆ ವೇಷ ತೊಡಿಸಿ ಛದ್ಮವೇಷಕ್ಕೆ ಕರೆತಂದಂತೆ ಭಾಸವಾಗುತ್ತಿತ್ತು.

ಆಕೆಯಷ್ಟೇ ಅಲ್ಲ ಸುಮಾರು 18 ವರ್ಷದ ಯುವ ಆಕರ್ಷಣೆಗೂ ಲೋಕಪಾಲ ಮಸೂದೆಯ ಬಗ್ಗೆ ಕೇಳಿದರೆ ತೊದಲುತ್ತಾನೆ. ಆದರೆ ಅಲ್ಲಿ ಕೇಳಿಬರುತ್ತಿದ್ದ ಡೋಲು ತಮಟೆಯ ನಾದಕ್ಕೆ ಹುಚ್ಚೆದ್ದು ತನ್ನ ಸಹಪಾಠಿಗಳೊಂದಿಗೆ ಕುಣಿಯುತ್ತಿದ್ದ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧಿ ಟೋಪಿ ಅಂದರೆ ಅದು ಖಾದಿಯಾಗಿತ್ತು ಆದರೆ ಇಂದು ಅಣ್ಣಾ ಟೋಪಿ ಪ್ಲಾಸ್ಟಿಕ್ ಆಗಿ ಪರಿವರ್ತನೆಗೊಂಡಿದೆ. ಇದು ಆಧುನಿಕತೆಯೋ ಅಥವಾ ಬದಲಾವಣೆಯ ಸೂಚ್ಯವೋ? ಅಂತೂ ಯುವಕರು ಅಣ್ಣಾ ಟೋಪಿ ಧರಿಸಿದ್ದಂತೂ ನಿಜ.

ಮೊದ ಮೊದಲು ಅಣ್ಣಾ ಹಜಾರೆ ಅವರ ನಿಲುವನ್ನು ವಿರೋಧಿಸುತ್ತಿದ್ದ ಹಲವರು ನಂತರ ಬೇರೆಯೇ ಕಾರಣಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಅಷ್ಟಕ್ಕೂ ಇಲ್ಲಿ ಅಣ್ಣಾ ಹಜಾರೆ ಅವರಿಗೆ ಅಭೂತಪೂರ್ವ ಬೆಂಬಲ ಸಿಕ್ಕದ್ದು ಯಾಕೆಂದರೆ, ಸರಕಾರದ ಒಂದೇ ತಪ್ಪಿಗಾಗಿ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬನ ವಾಕ್‌ಸ್ವಾತಂತ್ರ್ಯಕ್ಕೆ ತನ್ನದೇ ಆದ ಒಂದು ರೀತಿಯ ಮಹತ್ವ ಇದೆ ಅದನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಇಲ್ಲಿ ಆದದ್ದೂ ಅದೇ, ಎಲ್ಲಿಯ ತನಕ ಅಣ್ಣಾ ಹಜಾರೆ ಅವರು ಸರಕಾರದ ಕಾರ್ಯತಂತ್ರಕ್ಕೆ ಬಗ್ಗುವುದಿಲ್ಲ ಎಂದು ತಿಳಿಯಿತೋ ಅಂದು ಅವರು ಅಣ್ಣಾ ಹಜಾರೆಯವರನ್ನು ಬಂಧಿಸುವ ಪ್ರಯತ್ನಕ್ಕೆ ಕೈ ಹಾಕಿದರು, ಆದರೆ ನಿಜವಾದ ಪ್ರತಿಭಟನೆಗೆ ಭಾರತೀಯರು ಧುಮುಕಿದ್ದೇ ಅಂದು. ಒಬ್ಬ ಸಾಮಾನ್ಯ ಪ್ರಜೆಗೆ ತನ್ನ ನಿಜವಾದ ಹಕ್ಕನ್ನು ತೋರ್ಪಡಿಸುವ ವ್ಯವಸ್ಥೆ ಈ ದೇಶದಲ್ಲಿ ಇಲ್ಲ ಎಂದಾದಲ್ಲಿ ಇಲ್ಲಿನ ಸರಕಾರಕ್ಕೆ ನಾವ್ಯಾಕೆ ಹೆದರಬೇಕು ಎಂದು ಅಣ್ಣಾ ಹಜಾರೆ ಅವರನ್ನು ಬಂಧಿಸಿಟ್ಟ ತಿಹಾರ ಜೈಲಿಗೆ ಮುತ್ತಿಗೆ ಹಾಕಿದರು. ಯಾವಾಗ ಜನರು ಜಗ್ಗುವುದಿಲ್ಲ ಎಂದು ಸರಕಾರಕ್ಕೆ ಮನಗಾಣಿತೋ ಅಂದೇ ಜನ ನಾಯಕನನ್ನು ಬಿಡುಗಡೆಗೊಳಿಸಲಾಯಿತು. ಕೊನೆಗೂ 13 ದಿನದ ಉಪವಾಸದ ನಂತರ ಅಣ್ಣಾ ಹಜಾರೆ ಧನಾತ್ಮಕ ಭರವಸೆಯಿಂದ ಉಪವಾಸ ತ್ಯಜಿಸಿದರು; ಆದರೆ ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನಲ್ಲ !!!

ಅಂತೂ ಇಂತೂ ಲೋಕಪಾಲ ಮಸೂದೆಗೆ ಚಾಲನೆ ದೊರಕಿದೆ. ಆದರೆ ಲೋಕಪಾಲ್ ಮಸೂದೆ ಅಂಗೀಕಾರಗೊಂಡು ಚಾಲ್ತಿಗೆ ಬರಲು ಇನ್ನೂ ಹಲವಾರು ತಿಂಗಳುಗಳು ಬೇಕಾಗಬಹುದು. ಲೋಕಪಾಲ ಮಸೂದೆಯಿಂದ ಭ್ರಷ್ಟಾಚಾರ ಎಷ್ಟು ಕಡಿಮೆ ಆಗುತ್ತದೆಯೋ. ಅದೆಷ್ಟು ಜನ ಭ್ರಷ್ಟಾಚಾರಿಗಳು ಲೋಕಪಾಲರ ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೋ ಗೊತ್ತಿಲ್ಲ. ಆದರೆ ಭಾರತೀಯರಲ್ಲಿ ಒಬ್ಬ ಸಾಮಾನ್ಯ ಪ್ರಜೆಯೂ ತನ್ನ ಬೇಡಿಕೆಯನ್ನು ನೇರವಾಗಿ ಸರಕಾರಕ್ಕೆ ತಿಳಿಸುವಷ್ಟು ಸಮರ್ಥ ಎನ್ನುವುದು ಅಣ್ಣಾ ಅವರಂಥ ಸಾಮಾನ್ಯ ವ್ಯಕ್ತಿಯಿಂದ ಸಾಬೀತಾಯಿತು.

ಒಟ್ಟಾರೆಯಾಗಿ ಈ ಸತ್ಯಾಗ್ರಹ ಭ್ರಷ್ಟಾಚಾರದ ಬಗ್ಗೆ ಭಾರತದ ಸಾಮಾನ್ಯ ಪ್ರಜೆನೊಬ್ಬನಲ್ಲಿ ಅರಿವು ಮೂಡಿಸಿದ್ದಂತೂ ನಿಜ.

"ನಿಮ್ಮ ಜೇಬಲ್ಲಿ 'ಅಣ್ಣಾ ಟೋಪಿ' ಸದಾ ಇರಲಿ, ಅಗತ್ಯ ಬಿದ್ದಾಗ ಅದನ್ನು ತೆಗೆದು ಪ್ರದರ್ಶಿಸಿ" ಎನ್ನುವ ಕಿರಣ್ ಬೇಡಿಯವರ ಕರೆಯನ್ನು ಅದೆಷ್ಟು ಜನರು ಪಾಲಿಸುತ್ತಾರೋ.

ಅವರ ಅಭಿಮಾನಿಗಳೂ ತಮ್ಮ ಟೋಪಿಯನ್ನು ಭದ್ರವಾಗಿ ತಮ್ಮ ಜೇಬಲ್ಲಿಟ್ಟಿದ್ದಾರೆ. ಸಂದರ್ಭ ಬಂದಾಗ ಈ ಟೋಪಿಯನ್ನು ತಲೆಗೇರಿಸಿ ದೇಶದ ಪ್ರತಿಯೊಬ್ಬ ಪ್ರಜೆಯೂ 'ಅಣ್ಣಾ ಹಜಾರೆ' ಆಗಬಲ್ಲ ಎಂಬುದನ್ನು ತೋರಿಸುವವರಿದ್ದಾರೆ.

**❑ ಪ್ರಕಾಶ್ ಶೆಟ್ಟಿ ಉಳೆಪಾಡಿ**

### ಫ್ಯಾಶನ್ ಲೋಕದಲ್ಲಿ ಅಣ್ಣಾ...



ಬಸ್ಸುಗಳು ಟೋಪಿಗಳಿಂದ ತುಂಬಿತ್ತು, ಮೆಟ್ರೋ ಸ್ಟೇಷನ್ನುಗಳು ಅಣ್ಣಾ ಧರಿಸಿನಂತೆ ಕಂಗೊಳಿಸುತ್ತಿತ್ತು. ಶಾಲಾ ಕಾಲೇಜುಗಳಲ್ಲಿ ಅಣ್ಣಾ ಹೆಸರಲ್ಲಿ ವಿಶೇಷ ಧಿರಿಸುಗಳೂ ಧರಿಸಲ್ಪಟ್ಟಿದ್ದವು. ಕಛೇರಿಗಳಲ್ಲಿ ಕ್ಯಾಷ್ಯುವಲ್ ಡೇ ದಿನ ಆಫೀಸರುಗಳು ಟೋಪಿ ಜೊತೆ ಎಕ್ಸಟ್ರಾ ಕಳೆ ತಂದಿದ್ದರು. ಆ ಸಮಯದಲ್ಲಿ ಭಾರತದಾದ್ಯಂತ ನಡೆದ ಫ್ಯಾಷನ್ ಶೋಗಳಲ್ಲಿ ಬಿಳಿ ಟೋಪಿಗಳೇ ಪ್ರಮುಖ ಪಾತ್ರವಹಿಸಿದ್ದವು. ಕೊನೆ ಕೊನೆಗೆ ಮೂಲೆ ಗುಂಪಾಗಿದ್ದ ಕೆಲ ಮಾಡೆಲ್‌ಗಳು ಪ್ರಚಾರಕ್ಕಾಗಿ ತಮ್ಮ ನಗ್ನ ದೇಹಗಳನ್ನು ಅಣ್ಣಾ ಟೊಪ್ಪಿಗೆಯೊಂದಿಗೂ ಪ್ರದರ್ಶಿಸಿದರು. ಒಟ್ಟಾರೆಯಾಗಿ ಆಗಸ್ಟ್ ದ್ವಿತೀಯಾರ್ಧ ಫ್ಯಾಷನ್ ಪ್ರಿಯರಿಗೂ ಅಣ್ಣಾ ಹಜಾರೆ ಬಲು ಇಷ್ಟವಾಗಿದ್ದ.

### ದೆಹಲಿಯ ಕನ್ನಡಿಗ ಯುವಕರು ಅಣ್ಣಾ ಜೊತೆ

ದೆಹಲಿಯಲ್ಲಿ ನೆಲೆಸಿದ ಸುಮಾರು ಹತ್ತು ಯುವಕರು ಅಣ್ಣಾ ಹಜಾರೆ ಅವರೊಂದಿಗೆ ಸತ್ಯಾಗ್ರಹದಲ್ಲಿ ಭಾಗವಹಿಸಲು ತಮ್ಮದೇ ಆದ ರೀತಿಯಲ್ಲಿ ತಯಾರಿ ನಡೆಸಿದ್ದರು. ಕನ್ನಡದಲ್ಲೇ ಬರೆದ ಅಣ್ಣಾ ಅವರಿಗೆ ತಮ್ಮ ಬೆಂಬಲವಿದೆ ಅನ್ನುವ ಫಲಕಗಳ ಜೊತೆ ಕನ್ನಡದ ಘೋಷಣೆಗಳನ್ನು ದೆಹಲಿಯ ರಾಮಲೀಲಾ ಮೈದಾನದಲ್ಲಿ ಕೂಗುತ್ತಿದ್ದರು.

ಈ ತಂಡದಲ್ಲಿ ಭಾಗವಹಿಸಿದ ಬ್ಯಾಂಕ್ ಉದ್ಯೋಗಿ ಶ್ರೀಚರಣ್ ಅವರು "ಇದೊಂದು ನಮಗೆ ಮರೆಯಲಾಗದ ಅನುಭವ. ದೆಹಲಿಯಲ್ಲಿ ಕನ್ನಡದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸುತ್ತೇನೆ ಎಂದು ನಾನೆಂದೂ ಯೋಚಿಸಿರಲಿಲ್ಲ" ಎಂದು ಅಭಿಪ್ರಾಯ ಪಡುತ್ತಾರೆ. ಇನ್ನೊಬ್ಬ ಕನ್ನಡಿಗ ಪ್ರದೀಪ್ ಕುಮಾರ್ ಅವರು " ನಮ್ಮ ಕನ್ನಡದ ಫಲಕದಿಂದ ಆಕರ್ಷಿತರಾದ ಸಂತೋಷ್ ಹೆಗ್ಡೆಯವರು ನಮ್ಮ ಜೊತೆ ಕನ್ನಡದಲ್ಲಿ ಮಾತನಾಡಿದ್ದು ತುಂಬಾ ಹೆಮ್ಮೆಯೆನಿಸುತ್ತಿದೆ" ಎಂದು ಮೆಲುಕು ಹಾಕುತ್ತಾರೆ. ಸುಶನ್ ಕೋಟ್ಯಾನ್ ಮತ್ತು ಸುಕೇಶ್ ಶೆಟ್ಟಿ ಅವರಿಗೆ ದೆಹಲಿಯ ಹೊಸ ಜೀವನದಲ್ಲಿ ಇಂಥಾ ಅನುಭವ ಮಳೆಗಾಲದ ಸೆಖೆಯನ್ನೂ ಮರೆಯುವಂತೆ ಮಾಡಿದೆ ಎನ್ನುತ್ತಾರೆ.

"ನಾವು ಕೇವಲ ಹತ್ತು ಜನರಿದ್ದರೂ ಮುಂದುವರಿದಂತೆ ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ಮಂದಿ ನಮ್ಮ ಕನ್ನಡದ ಫಲಕಗಳನ್ನು ಓದಿ ನಮ್ಮೊಂದಿಗೆ ಜೊತೆಗೂಡಿದರು... ನೂರಾರು ಮಂದಿ ನಮ್ಮ ಜೊತೆ ಕನ್ನಡದಲ್ಲಿ ಮಾತನಾಡಿದ್ದೂ ನಮಗೆ ಅತ್ಯಂತ ಖುಷಿ ಕೊಟ್ಟಿದೆ" ಎನ್ನುತ್ತಾರೆ ಸುದರ್ಶನ್ ಶೆಟ್ಟಿ. ಒಟ್ಟಾರೆಯಾಗಿ ಇದೊಂಥರಾ ದೆಹಲಿಯಲ್ಲಿ ಕನ್ನಡಿಗರ ದನಿಯಾಗಿ ಮೂಡಿಬಂದಿದೆ ಎನ್ನುವುದು ತಂಡದ ಸದಸ್ಯರ ಅನುಭವದ ಮಾತಾಗಿತ್ತು.



## ಬಹುಮುಖ ಪ್ರತಿಭೆ ಕು. ವಿತಾಶಾ ರಿಯಾ



ಕುಮಾರಿ ವಿತಾಶಾ ವಿರೂಪಾಕ್ಷ ಇವರು ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ನಿವಾಸಿಗಳು. ವಿತಾಶಾ ಅವರು "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎಂಬಂತೆ ಏಳನೆಯ ತರಗತಿಯಲ್ಲಿ ಸರಕಾರಿ ಕನ್ನಡ ಶಾಲೆಯಲ್ಲಿ ತೀರ್ಥಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಹೂ ಗೊಂಚಲು, ಕಾನನ ಕಲರವ, ಎಷ್ಟು ಬಣ್ಣದ ಇರುಳು ಮೂರು ಅತ್ಯಮೂಲ್ಯ ಕೃತಿಗಳನ್ನು ರಚಿಸಿದ್ದಾರೆ.

ಈ ಕೃತಿಗಳಿಗೆ ದ.ರಾ.ಬೇಂದ್ರೆ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನಿಂದ – ಶಾರದಾ ದತ್ತಿ ಪ್ರಶಸ್ತಿ, ವಿದ್ಯಾಸಾಗರ ಬಾಲ ಪುರಸ್ಕಾರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಪ್ರತಿಭಾವಂತ ವಿದ್ಯಾರ್ಥಿನಿ ಪ್ರಶಸ್ತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಎಚ್. ಕರಿಯಣ್ಣ ದತ್ತಿ ಪ್ರಶಸ್ತಿ ಪಡೆದಿದ್ದಾರೆ.

ವಿಜ್ಞಾನ ವಸ್ತು ಪ್ರದರ್ಶನಕ್ಕೆ ರಾಷ್ಟ್ರಮಟ್ಟದಲ್ಲಿ ಆಯ್ಕೆ ಆಗಿ ದೆಹಲಿಗೆ ಆಗಮಿಸಿದ "ಮುದ್ದು ತೀರ್ಥಹಳ್ಳಿ" ಕಾವ್ಯನಾಮದ ವಿತಾಶಾ ಕನ್ನಡ, ಹಿಂದಿ, ಕೊಂಕಣಿ ಹಾಗೂ ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಕನ್ನಡ ಭಾಷೆಯ ಬಗ್ಗೆ ವಿಶೇಷ ಒಲವು ಇದ್ದು, ಇನ್ನೂ ಅನೇಕ ಕೃತಿಗಳನ್ನು ರಚಿಸುವಲ್ಲಿ ಉತ್ಸುಕರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದ ಪರವಾಗಿ ಅವರಿಗೆ ಅಭಿನಂದನೆಗಳು.

❑ ಡಾ. ಸುಮಂಗಲಾದೇವಿ

## ಕನ್ನಡ ಶಾಲೆಯಲ್ಲಿ ಬುದ್ಧಿಪ್ರದಾಯಕ ಗಣಪ




ಸೆಪ್ಟಂಬರ್ 1, 2011ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಗಣೇಶೋತ್ಸವದ ಅಂಗವಾಗಿ ವಿದ್ಯಾಪ್ರದಾಯಕ ಗಣಪನನ್ನು ಪ್ರತಿಷ್ಠಾಪಿಸಲಾಯಿತು. ಶಾಲೆಯ ಅಧ್ಯಾಪಕ ವರ್ಗ, ಆಡಳಿತ ಮಂಡಳಿಯ ಅಧ್ಯಕ್ಷ ಲಿಂಗರಾಜು, ಕಾರ್ಯದರ್ಶಿ ಆಂಜನಿ ಗೌಡ, ಉಪಾಧ್ಯಕ್ಷರಾದ ಕೆ.ಐ.ಭಟ್ ಮತ್ತು ಡಾ.ಅಹಲ್ಯಾ ಚಿಂತಾಮಣಿ, ಬಿ.ಕೆ. ಬಸವರಾಜ್, ಮ್ಯಾನೇಜರ್ ಡಾ.ಶಶಿಕುಮಾರ್, ಶ್ರೀನಾಥ್ ಎನ್. ಆರ್, ಅನಿಲ್ ಕುಲಕರ್ಣಿ, ಶಶಿಕಾಂತ ಪಾಟೀಲ, ಶ್ರೀರಾಮ ಹೆಗಡೆ, ಪ್ರೊ. ಚಂದ್ರಶೇಖರ್ಮುಂತಾದವರು ಹಾಗೂ ಪೋಷಕರು ಗಣೇಶನ ಪೂಜೆಯಲ್ಲಿ ಶ್ರದ್ಧಾ ಭಕ್ತಿಯಿಂದ ಪಾಲ್ಗೊಂಡರು. ದಿನಂಪ್ರತಿ ಪೂಜೆ, ಮಂಗಳಾರತಿ, ಪ್ರಸಾದ ವಿತರಣೆ ವಿಜೃಂಭಣೆಯಿಂದ ನಡೆಯಿಸಲಾಯಿತು. ಸೆಪ್ಟಂಬರ್ 3, ಶನಿವಾರದಂದು ಮೂಷಿಕ ವಾಹನ, ಗಣಾಧೀಶ್ವರ ಗಣಪನನ್ನು ಷೋಡಶೋಪಚಾರದಿಂದ ಪೂಜಿಸಿ ಪ್ರಸಾದ ವಿತರಣೆ ನಂತರ ವಿಸರ್ಜಿಸಲಾಯಿತು.


# Saujanya Printing Press

A HOUSE OF QUALITY PRINTING

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ


Shri M.Ct.M. Chidambaram Chettyar
FOUNDER
Indian Overseas Bank
Touching hearts
Spreading smiles
Since 1937
IOB has reached
out to millions in India and
across the world
As we enter our 75th year, we rededicate
ourselves to bring Smile on the face of every Indian.
इण्डियन ओवरसीज़ बैंक
Indian Overseas Bank
(A Govt. of India undertaking)
Good people to grow with
www.iob.in

Delhi Karnataka Sangha's Abhimatha Monthly,
Sept -2011, Price Rs.1/- RNI Regn. No. 53405/91, DL-SW-15/4016/10-11-12
Printout Date : Sept 8th / 9th, Postal Date :10th / 11th, Total Pages-20




Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 41611143,